ಡಾ| ಪಿ. ಗುರುರಾಜ ಭಟ್ಟರ ಸಂಶೋಧನೆಗಳ ಒಂದು ಅಧ್ಯಯನ

(ಪ್ರಾಗಿತಿಹಾಸ ಶಾಸನಗಳು, ನಾಣ್ಯಗಳಿಗೆ ಅನ್ವಯಿಸಿದಂತೆ)

ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಎಂ.ಫಿಲ್. ಪದವಿಗಾಗಿ (ಸಮಾಜವಿಜ್ಞಾನ ನಿಕಾಯ)
ಸಾದರಪಡಿಸಿದ ಸಂಪ್ರಬಂಧ

ಸಂಶೋಧಕಿ
ರಶ್ಮಿ ಹೆಚ್. ಎಮ್.

ಮಾರ್ಗದರ್ಶಕರು
ಡಾ| ಡೆನಿಸ್ ಫೆರ್ನಾಂಡಿಸ್

೨೦೦೯
ಕರ್ನಾಟಕ ಥಿಯೋಲಾಜಿಕಲ್ ಸಂಶೋಧನ ಕೇಂದ್ರ,
ಬಲ್ಮಠ, ಮಂಗಳೂರು.

ಡಾ| ಪಿ. ಗುರುರಾಜ ಭಟ್ಟರ ಸಂಶೋಧನೆಗಳ ಒಂದು ಅಧ್ಯಯನ

(ಪ್ರಾಗಿತಿಹಾಸ ಶಾಸನಗಳು, ನಾಣ್ಯಗಳಿಗೆ ಅನ್ವಯಿಸಿದಂತೆ)

ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಎಂ.ಫಿಲ್. ಪದವಿಗಾಗಿ (ಸಮಾಜವಿಜ್ಞಾನ ನಿಕಾಯ)
ಸಾದರಪಡಿಸಿದ ಸಂಪ್ರಬಂಧ

ಸಂಶೋಧಕಿ

ರಶ್ಮಿ ಹೆಚ್. ಎಮ್.

ಮಾರ್ಗದರ್ಶಕರು
ಡಾ| ಡೆನಿಸ್ ಫೆರ್ನಾಂಡಿಸ್

೨೦೦೯
ಕರ್ನಾಟಕ ಥಿಯೋಲಾಜಿಕಲ್ ಸಂಶೋಧನ ಕೇಂದ್ರ,
ಬಲ್ಮಠ, ಮಂಗಳೂರು.

726

ಯೋಗ್ಯತಾಪತ್ರ

ರಶ್ಮಿ ಹೆಚ್.ಎಮ್. ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ '**ಡಾ। ಪಿ. ಗುರುರಾಜ ಭಟ್ಟರ ಸಂಶೋಧನೆಗಳ ಒಂದು ಅಧ್ಯಯನ (ಪ್ರಾಗಿತಿಹಾಸ ಶಾಸನಗಳು, ನಾಣ್ಯಗಳಿಗೆ ಅನ್ವಯಿಸಿದಂತೆ)**' ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್. ಪ್ರಾಪ್ತಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ಅಭಿಪ್ರಾಯ ಸಂಗ್ರಹ, ಬೋಧನೆ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಸಂಪ್ರಬಂಧವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲ.

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನ ಕೇಂದ್ರ
ಬಲ್ಮಠ, ಮಂಗಳೂರು.

ಡಾ। ಡೆನಿಸ್ ಫೆರ್ನಾಂಡಿಸ್
ಸಂಶೋಧನ ಮಾರ್ಗದರ್ಶಕರು

ಪ್ರಮಾಣಪತ್ರ

ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ **'ಡಾ। ಪಿ. ಗುರುರಾಜ ಭಟ್ಟರ ಸಂಶೋಧನೆಗಳ ಒಂದು ಅಧ್ಯಯನ (ಪ್ರಾಗಿತಿಹಾಸ ಶಾಸನಗಳು ನಾಣ್ಯಗಳಿಗೆ ಅನ್ವಯಿಸಿದಂತೆ)'** ಶೀರ್ಷಿಕೆಯ ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು, ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರಿನ ಥಿಯೋಲಾಜಿಕಲ್ ಸಂಶೋಧನ ಕೇಂದ್ರದಲ್ಲಿ ಡಾ। ಡೆನಿಸ್ ಫೆರ್ನಾಂಡಿಸ್‌ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೊಮೊ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲ ವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

ಕನಾಟಕ ಥಿಯೋಲಾಜಿಕಲ್ ಸಂಶೋಧನ ಕೇಂದ್ರ
ಬಲ್ಮಠ, ಮಂಗಳೂರು.

ರಶ್ಮಿ ಹೆಚ್. ಎಮ್.

ನೆನಕೆ

ಡಾ॥ ಪಿ. ಗುರುರಾಜ ಭಟ್ಟರ ಸಂಶೋಧನೆಗಳ ಒಂದು ಅಧ್ಯಯನ (ಪ್ರಾಗಿತಿಹಾಸ ಶಾಸನಗಳು, ನಾಣ್ಯಗಳಿಗೆ ಅನ್ವಯಿಸಿದಂತೆ) ಎಂಬ ಶೀರ್ಷಿಕೆಯ ಸಂಪ್ರಬಂಧವು ಕರ್ನಾಟಕ ಥಿಯೋಲಾಜಿಕಲ್ ಸಂಶೋಧನ ಕೇಂದ್ರದಡಿಯಲ್ಲಿ ನಡೆಸಿದ ಕಾಲಬದ್ಧ ಸಂಶೋಧನೆ. ಈ ಸಂಶೋಧನ ಕಾರ್ಯಕ್ಕೆ ಎಲ್ಲ ಬಗೆಯ ವ್ಯವಸ್ಥಾಪನ ನೆರವು ನೀಡಿದ ಪ್ರೇರಕ ಕೇಂದ್ರಗಳಾದ ಕನ್ನಡ ವಿಶ್ವವಿದ್ಯಾಲಯ, ಹಂಪಿ ಹಾಗೂ ಕರ್ನಾಟಕ ಥಿಯೋಲಾಜಿಕಲ್ ಸಂಶೋಧನ ಕೇಂದ್ರ, ಮಂಗಳೂರು ಇವೆರಡನ್ನು ಹೃತ್ಪೂರ್ವಕವಾಗಿ ನೆನೆಯುತ್ತೇನೆ.

ಈ ಸಂಪ್ರಬಂಧದ ರಚನೆಯ ಸಂದರ್ಭದಲ್ಲಿ ಮಾರ್ಗದರ್ಶಕರಾಗಿ ನನಗೆ ಸೂಕ್ತ ಸಲಹೆ, ಸೂಚನೆ ಮಾರ್ಗದರ್ಶನ ನೀಡಿದ ಕರ್ನಾಟಕ ಥಿಯೋಲಾಜಿಕಲ್ ಸಂಶೋಧನ ಕೇಂದ್ರದ ಮಾರ್ಗದರ್ಶಕರು ಹಾಗೂ ಸಂತ ಅಲೋಶಿಯಸ್ ಕಾಲೇಜಿನ ಇತಿಹಾಸ ಉಪನ್ಯಾಸಕರಾದ ಡಾ॥ ಡೆನಿಸ್ ಫೆರ್ನಾಂಡಿಸ್‌ರಿಗೆ ನನ್ನ ವಿಶೇಷ ವಂದನೆಗಳು. ಸಂಶೋಧನೆಯ ಸಂದರ್ಭದಲ್ಲಿ ನನಗೆ ಸೂಕ್ತ ಮಾರ್ಗದರ್ಶನ ನೀಡಿ ಹುರಿದುಂಬಿಸಿದ ಬ್ರಹ್ಮಾವರದ ಎಸ್.ಎಂ.ಎಸ್. ಕಾಲೇಜಿನ ಇತಿಹಾಸ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ಮುಖ್ಯಸ್ಥರಾದ ಕೆ. ಬಿ. ಶಿವತಾರಕ್‌ರವರಿಗೆ, ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥರಾದ ಜಗದೀಶ್ ಶೆಟ್ಟಿ ಅವರಿಗೆ, ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನ ಇತಿಹಾಸದ ವಿಭಾಗದ ಜಯರಾಮ ಶೆಟ್ಟಿಗಾರ್ ಇವರಿಗೂ ನನ್ನ ಕೃತಜ್ಞತಾಪೂರ್ವಕ ನಮನಗಳು. ಆಡಳಿತಾತ್ಮಕ ಸಹಕಾರ ನೀಡಿ ನನ್ನ ಸಂಶೋಧನೆಗೆ ಪೂರ್ಣ ಬೆಂಬಲ ನೀಡಿದ ಕರ್ನಾಟಕ ಥಿಯೋಲಾಜಿಕಲ್ ಕಾಲೇಜಿನ ಸಂಶೋಧನ ಸಂಯೋಜಕರಾದ ಎ. ವಿ. ನಾವಡ ಅವರಿಗೆ ಹಾಗೂ ಕರ್ನಾಟಕ ಥಿಯೋಲಾಜಿಕಲ್ ಕಾಲೇಜಿನ ನಿರ್ದೇಶಕರಾದ ರೆ॥ ಡಾ॥ ಜೆ. ಎಸ್. ಸದಾನಂದ ಅವರನ್ನು ಗೌರವಪೂರ್ವಕವಾಗಿ ಸ್ಮರಿಸಿ ಕೊಳ್ಳುತ್ತೇನೆ.

ಸಂಶೋಧನೆಗೆ ಪರೋಕ್ಷವಾಗಿ ಪ್ರೋತ್ಸಾಹ ನೀಡಿದ ಇತಿಹಾಸ ವಿಭಾಗದ ವಿಶ್ರಾಂತ ಮುಖ್ಯಸ್ಥರಾದ ಬಿ. ಸುರೇಂದ್ರ ರಾವ್ ಇವರಿಗೂ ನನ್ನ ಕೃತಜ್ಞತಾಪೂರ್ವಕ ನಮನಗಳು. ಈ ಸಂಶೋಧನ ಸಂದರ್ಭದಲ್ಲಿ ಸಹಾಯ ಮಾಡಿದ ಎಸ್. ಎಂ. ಎಸ್. ಕಾಲೇಜಿನ ಪ್ರಾಂಶುಪಾಲರಾದ ಕೆ. ನಾರಾಯಣ ಅವರಿಗೂ ಗ್ರಂಥಪಾಲಕರಾದ ಕೆ. ಗಣಪತಿ ಭಟ್ ಅವರಿಗೂ ಮತ್ತು ಕಾಲೇಜಿನ ಆಡಳಿತ ಮಂಡಳಿಗೂ ನನ್ನ ಹೃತ್ಪೂರ್ವಕ ನಮನಗಳು. ಸಂಪ್ರಬಂಧದ ಅಕ್ಷರಸಂಯೋಜನೆಯಲ್ಲಿ ಸಹಕರಿಸಿದ ಶ್ರೀಮತಿ ಸ್ವರ್ಣಲತಾ ಹಾಗೂ ಕೆ. ಪದ್ಮನಾಭ ಕೇಕುಣ್ಣಾಯ ಅವರಿಗೆ ಕೃತಜ್ಞತೆಗಳು.

ಸಂಶೋಧನೆಯ ಸಂದರ್ಭದಲ್ಲಿ ಎಲ್ಲ ರೀತಿಯಲ್ಲಿ ಸಹಕರಿಸಿದ ಹಾಗೂ ಆರ್ಥಿಕ ಸಹಾಯ ಮಾಡಿದಂತಹ ಪಾದೂರು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್‌ಗೆ ನಾನು ಚಿರಋಣಿ ಯಾಗಿದ್ದೇನೆ. ಮತ್ತು ಈ ಸಂಶೋಧನೆಗೆ ಅನುಕೂಲವಾಗುವಂತೆ ತಮ್ಮ ಸಂಗ್ರಹದಲ್ಲಿದ್ದ ಗುರುರಾಜ

ಭಟ್ಟರ ಲೇಖನಗಳನ್ನು ಪರಾಮರ್ಶಿಸಲು ಒದಗಿಸಿಕೊಟ್ಟ ಶ್ರೀಮತಿ ನಾಗರತ್ನ ಭಟ್ ಹಾಗೂ ಪಿ. ಪರಶುರಾಮ ಭಟ್ ಅವರಿಗೆ ನನ್ನ ವಿಶೇಷ ಕೃತಜ್ಞತೆಗಳು.

ನನ್ನ ಸಂಶೋಧನೆಯ ಸಮಯದಲ್ಲಿ ಎಲ್ಲಾ ರೀತಿಯಲ್ಲೂ ಸಲಹೆ, ಸೂಚನೆ ನೀಡಿ ಸಹಕರಿಸಿದ ನನ್ನ ತೀರ್ಥರೂಪರಾದ ಮಲ್ಲಿಕಾರ್ಜುನ ಹೆಚ್. ಎಲ್., ಮಾತೃಶ್ರೀ ಮೀನಾ, ತಮ್ಮ ರಾಹುಲ್, ಅಕ್ಕ ಆಶಾ ಹಾಗೂ ಭಾವೀ ಪತಿಯಾದ ಅನಿಲ್ ಇವರಿಗೂ ನನ್ನ ನೆನಕೆಗಳು.

ಕನಾಟಕ ಥಿಯೋಲಾಜಿಕಲ್ ಸಂಶೋಧನ ಕೇಂದ್ರ
ಬಲ್ಮಠ, ಮಂಗಳೂರು.

ರಶ್ಮಿ ಹೆಚ್. ಎಮ್.

ಪರಿವಿಡಿ

ಡಾ। ಪಿ. ಗುರುರಾಜ ಭಟ್ಟರ ಸಂಶೋಧನೆಗಳ ಒಂದು ಅಧ್ಯಯನ

(ಪ್ರಾಗಿತಿಹಾಸ, ಶಾಸನಗಳು, ನಾಣ್ಯಗಳಿಗೆ ಅನ್ವಯಿಸಿದಂತೆ)

ಅಧ್ಯಾಯ ಒಂದು

೧.೦. ಪೀಠಿಕೆ

೧.೧. ಹಿಂದಣ ಅಧ್ಯಯನದ ಹೆಜ್ಜೆಗಳು.

೧.೨. ಅಧ್ಯಯನದ ವ್ಯಾಪ್ತಿ

೧.೩. ಆಕರಗಳು

ಪೀಠಿಕೆ

ಭಾರತದಲ್ಲಿ ಇತಿಹಾಸದ ರಚನೆ ವಸಾಹತುಶಾಹಿಯ ಕಾಲದಲ್ಲಿ ಪ್ರಾರಂಭವನ್ನು ಕಂಡಿತು.[1] ಈ ಇತಿಹಾಸಕಾರರ ಪ್ರಕಾರ ಭಾರತೀಯರಿಗೆ ಇತಿಹಾಸಪ್ರಜ್ಞೆಯೇ ಇಲ್ಲ. ಮತ್ತು ಇಲ್ಲಿನ ಮೌಖಿಕ ಆಧಾರಗಳು, ಪುರಾಣಗಳು, ಐತಿಹ್ಯಗಳು ಹಾಗೂ ದಂತಕಥೆಗಳನ್ನು ಇತಿಹಾಸಕ್ಕೆ ಸಂಬಂಧವಲ್ಲದ ವಿಷಯಗಳು, ಹಾಗಾಗಿ ಇತಿಹಾಸರಚನೆಗೆ ಅವುಗಳು ಸಹಾಯಕವಾಗಲಾರವು ಎಂಬ ಅಭಿಪ್ರಾಯವನ್ನು ವಸಾಹತುಶಾಹಿ ಇತಿಹಾಸಕಾರರು ಹೊಂದಿದ್ದರು. ಹಾಗಾಗಿ ನಿರ್ದಿಷ್ಟವಾಗಿ ಇತಿಹಾಸರಚನೆಗೆ ನೇರವಾಗಿ ಸಂಬಂಧಪಟ್ಟ ಶಾಸನಗಳ ಅಧ್ಯಯನವು ವಸಾಹತುಕಾಲದಲ್ಲಿ ಗರಿಷ್ಠ ಮಹತ್ವ ಪಡೆಯಿತು. ರಾಷ್ಟ್ರೀಯವಾದಿ ಇತಿಹಾಸಕಾರರು ಬರೆದ ಇತಿಹಾಸವು ವಸಾಹತುಶಾಹಿಯನ್ನು ತಿಳಿಸುವಂತಿದ್ದರೂ ಅವರು ಬಳಸಿದ ಆಧಾರಗಳು ವಸಾಹತುಶಾಹಿಯ ಕಾಲಕ್ಕಿಂತ ಭಿನ್ನವಾಗಿರಲಿಲ್ಲ. ಹಾಗಾಗಿ ಶಾಸನಗಳ ಅಧ್ಯಯನವು ವಸಾಹತುಶಾಹಿ ಹಾಗೂ ಅನಂತರದ ಕಾಲದಲ್ಲಿ ಅದರೊಂದಿಗೆ ಇಡೀ ಭಾರತದಲ್ಲಿ ಪ್ರಾರಂಭವಾಯಿತು. ಪ್ರಾಗೈತಿಹಾಸಿಕ ದಾಖಲೆಗಳನ್ನು ಹುಡುಕುವ ಪ್ರಯತ್ನವು ನಡೆಯಿತು.

ತುಳುನಾಡಿನ ಇತಿಹಾಸವು ಈ ಮೇಲೆ ವಿವರಿಸಿದ ಅಧ್ಯಯನದಿಂದ ಹೊರತಾಗಿಲ್ಲ. ಸ್ಟರ್ಕ್‌ನ 'ಮ್ಯಾನುವಲ್ ಆಫ್ ಸೌತ್ ಕೆನರಾ'[2] ತುಳುನಾಡಿನ ಮೌಖಿಕ ಪರಂಪರೆಗಳನ್ನು ನಿರ್ಲಕ್ಷಿಸುತ್ತಾ, ತುಳುವರಿಗೆ ಇತಿಹಾಸ ಪ್ರಜ್ಞೆಯೇ ಇಲ್ಲ ಎಂಬುದನ್ನೇ ವಾದಿಸುತ್ತದೆ. ಹಾಗೂ ಆ ವರೆಗೆ ದೊರಕಿದ ನಿರ್ದಿಷ್ಟವಾದ ಐತಿಹಾಸಿಕ ಆಧಾರಗಳಾದ ಶಾಸನಗಳು, ಹಾಗೂ ವಿದೇಶೀ ಬರವಣಿಗೆಗಳನ್ನು ಉಪಯೋಗಿಸಿ ತುಳುನಾಡಿನ ಐತಿಹಾಸಿಕ ವಿವರಣೆಯನ್ನು ನೀಡುತ್ತದೆ.

ತುಳುನಾಡಿನ ಇತಿಹಾಸಕಾರರು:

ತುಳುನಾಡಿನ ಬರಹಗಾರರಾದ ಶೀನಪ್ಪ ಹೆಗ್ಡೆಯವರು ಸ್ಥಳೀಯ ಪರಂಪರೆಗಳಾದ ಸ್ಥಳೀಯ ಪರಂಪರೆಗಳಾದ 'ಗ್ರಾಮಪದ್ಧತಿ', 'ಸಹ್ಯಾದ್ರಿಖಂಡ', ಪಾಡ್ದನಗಳು, ಸ್ಥಳಪುರಾಣ ಮುಂತಾದವುಗಳನ್ನು ಆಧಾರವಾಗಿರಿಸಿಕೊಂಡು 'ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳಪಾಂಡ್ಯರಾಯನ ಅಳಿಯಕಟ್ಟು' ಗ್ರಂಥವನ್ನು ರಚಿಸಿದರು. ಈ ಕೃತಿಯ ಕೊನೆಯಲ್ಲಿ ಏಳು ಶಾಸನಗಳ ವಿವರವನ್ನು ನೀಡಿದ್ದಾರೆ. ಇದು ಭೂತಾಳಪಾಂಡ್ಯನ ಅಳಿಯಕಟ್ಟನ್ನೇ ಕೇಂದ್ರವಾಗಿರಿಸಿಕೊಂಡು ರಚಿಸಿದ ಕೃತಿಯಾದ ಕಾರಣ ಇದರಲ್ಲಿ ಚಾರಿತ್ರಿಕ ಅಂಶ ಮತ್ತು ರಾಜಕೀಯ ಇತಿಹಾಸ ಬಹಳ ಕಡಿಮೆಯಾಗಿ ಕಂಡುಬರುತ್ತದೆ.[3] ಶೀನಪ್ಪ ಹೆಗ್ಡೆ ಮತ್ತು ಎನ್.ಎಸ್. ಕಿಲ್ಲೆಯವರು ಜೊತೆಯಾಗಿ ರಚಿಸಿದ 'ಪ್ರಾಚೀನ ತುಳುನಾಡು' (೧೯೫೪) ಮಹಾಕಾವ್ಯಗಳ ಕಾಲದಿಂದ ಪರಶುರಾಮ ಸೃಷ್ಟಿಯಿಂದ ಪಾಡ್ದನಗಳ ತನಕದ ತುಳುನಾಡಿನ ಬಗ್ಗೆ ರಚಿಸಿದ ಈ ಕೃತಿಯು ಚಾರಿತ್ರಿಕವಾಗಿ ಹೆಚ್ಚಿನ ಮಹತ್ವ ಪಡೆಯುವುದಿಲ್ಲ

ಎಂ. ಗಣಪತಿರಾವ್ ಐಗಳ್ ಅವರ ಬೃಹದ್ಗ್ರಂಥ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ'ದ ಬರವಣಿಗೆಯ ಶೈಲಿ, ಭಾಷೆಯ ಪ್ರಯೋಗಗಳಲ್ಲಿ ಕೊಂಕಣಿಯ ಛಾಯೆ ಎದ್ದುಕಾಣುತ್ತದೆ.

ಐಗಳು ಈ ಜಿಲ್ಲೆಯ ಎಲ್ಲ ಪ್ರದೇಶಗಳಲ್ಲಿ ಸುತ್ತಾಡಿ, ಸ್ಥಳೀಯರಾದ, ತಿಳಿವಳಿಕೆಯುಳ್ಳ ಹಿರಿಯರಿಂದ ಮಾಹಿತಿಗಳನ್ನು ಸಂಗ್ರಹಿಸಿ, ವಿವೇಚಿಸಿ, ವಿವರವಾಗಿ ಬರೆದು ತಿಳಿಸಿರುವುದು ಈ ಗ್ರಂಥದ ಹಿರಿಮೆ. ಈ ಪ್ರದೇಶದ ಹಿಂದಿನಕಾಲದ ವ್ಯವಸ್ಥೆಗಳಾಗಿದ್ದ ಸೀಮೆ, ಮಾಗಣೆ, ಗ್ರಾಮಗಳು, ಗ್ರಾಮಗಳಲ್ಲಿದ್ದ ಬೀಡು, ಗುತ್ತು, ಬಾಳಿಕೆಗಳಂತಹ ಆರ್ಥಿಕ–ಸಾಮಾಜಿಕ ವ್ಯವಸ್ಥೆಗಳ ವಿವರಗಳು ಈ ಗ್ರಂಥದಲ್ಲಿ ಹೆಚ್ಚಾಗಿ ಲಭ್ಯವಿವೆ. ಆದರೆ ಈ ಕೃತಿಯು ದ್ವಿತೀಯ ಆಕರಗಳ ಆಧಾರಿತ ಕೃತಿಯಾಗಿದೆ.[4]

ಮಂಜೇಶ್ವರ ಗೋವಿಂದ ಪೈಯವರು ಸುಪ್ರಸಿದ್ಧ ಕವಿ, ಅದ್ಭುತ ಸಂಶೋಧಕ, ಬಹುಭಾಷಾ ಪಂಡಿತ, ಕನ್ನಡ ನಾಡು–ನುಡಿಯ ಏಳಿಗೆಗೆ, ಏಕೀಕರಣಕ್ಕೆ ಸೇವೆಸಲ್ಲಿಸಿದ ಕನ್ನಡಾಭಿಮಾನಿ. ಹಾಗಾಗಿ ಅವರ ಬರವಣಿಗೆಗಳು ಹಾಗೂ ಅವರ ಚಾರಿತ್ರಿಕ ಅಧ್ಯಯನವು ಕನ್ನಡ ರಾಷ್ಟ್ರೀಯತೆಯ ದಿಶೆಯಲ್ಲೇ ನಡೆದಿದೆ. ತುಳುನಾಡಿನ ಪ್ರಾಚೀನತೆ, ಪೌರಾಣಿಕ ಕಾಲದ ತುಳುನಾಡು, ಇಲ್ಲಿಯ ಚರಿತ್ರೆ, ತುಳುನಾಡಿಗಿದ್ದ ವಿವಿಧ ಹೆಸರುಗಳು, ಇಲ್ಲಿ ಆಳಿದ ರಾಜರು, ತುಳುನಾಡಿನ ಶಾಸನಗಳು, ಮಂಗಳೂರಿನ ಪ್ರಾಚಿನತೆ, ಧಾರ್ಮಿಕ ಇತಿಹಾಸ, ತುಳುನಾಡಿನಲ್ಲಿ ಜನಿಸಿದ ಮಹಾವ್ಯಕ್ತಿಗಳ ಚರಿತ್ರೆ, ಅವರ ಜೀವಿತ ಅವಧಿ –ಹೀಗೆ ಹಲವು ವಿಷಯಗಳ ಬಗ್ಗೆ ವಿಶ್ಲೇಷಿಸಿ ತುಳುನಾಡಿನ ಭವ್ಯತೆ ಹಾಗೂ ಸಮೃದ್ಧತೆಯ ಬಗ್ಗೆ ಅಭಿಮಾನ ವ್ಯಕ್ತಿಪಡಿಸಿದ್ದಾರೆ.[5]

೧೯೨೫ರಿಂದ ೧೯೬೩ರ ವರೆಗಿನ ತಮ್ಮ ಅಧ್ಯಯನ ಅಧ್ಯಾಪನ ಮತ್ತು ಸಂಶೋಧನ ಕಾರ್ಯಗಳ ಅವಧಿಯಲ್ಲಿ ಸಾಲೆತ್ತೂರ್ ತುಳುನಾಡಿಗೆ ಸಂಬಂಧಿಸಿದ ಪುಸ್ತಕ ಮತ್ತು ಹಲವು ಲೇಖನಗಳನ್ನು ಬರೆದಿದ್ದರು. ಮರಾಠಿ ಪರಿಸರದಲ್ಲಿ ಕನ್ನಡದ ನಾಡನ್ನು ಚರಿತ್ರೆಯ ಮೂಲಕ ಭಾವನಾತ್ಮಕವಾಗಿ ಕಟ್ಟುವ ಕೆಲಸದಲ್ಲಿ ತೊಡಗಿದ ಮೊದಲಿಗರಲ್ಲಿ ಇವರೂ ಒಬ್ಬರು. ಕನ್ನಡದ ಮಡಿಲಲ್ಲಿ ಬೆಳೆದ ತುಳುನಾಡಿನ ಸಮೃದ್ಧತೆ ಹಾಗೂ ಪ್ರಾಚೀನತೆಯನ್ನು ಪ್ರಶಂಸಿಸಿದ್ದಾರೆ.[6]

ಭಾಸ್ಕರ ಆನಂದ ಸಾಲೆತ್ತೂರರ ಮತ್ತೊಂದು ಗ್ರಂಥವು Ancient Karnataka - History of Tuluva Vol I ತುಳುನಾಡಿನ ಇತಿಹಾಸ ಅಧ್ಯಯನದ ದೃಷ್ಟಿಯಲ್ಲಿ ಹೆಚ್ಚು ಜನಾದರಣೀಯವಾಗಿದೆ. ಈ ಪ್ರೌಢ ಗ್ರಂಥವು ಹನ್ನೆರಡನೆ ಶತಮಾನದವರೆಗಿನ ಸಮಗ್ರ ತುಳುನಾಡಿನ ಇತಿಹಾಸವೇ ಆಗಿದೆ. ಆಕರಗಳ ಸಮೀಕ್ಷೆ, ತುಳುವ ಉತ್ಪತ್ತಿ, ಪುರಾಣೋಕ್ತ ಐತಿಹ್ಯಗಳ ಆರಂಭ (Legendary beginning) ಆಳುಪ ಅರಸುಮನೆತನದವರ ರಾಜಕೀಯ ಇತಿಹಾಸ ಮತ್ತು ಈ ಮನೆತನದವರು ದಕ್ಷಿಣ ಭಾರತದಲ್ಲಿಯ ಅರಸುಮನೆತನಗಳೊಂದಿಗೆ ಹೊಂದಿದ್ದ ರಾಜಕೀಯ ಸಂಪರ್ಕಗಳನ್ನು ಸಾಲೆತ್ತೂರ್ ಈ ಗ್ರಂಥದಲ್ಲಿ ವೈಜ್ಞಾನಿಕವಾಗಿ ವಿಶ್ಲೇಷಿಸಿದ್ದಾರೆ. ಇಲ್ಲಿನ ಧಾರ್ಮಿಕ ಇತಿಹಾಸ ಮತ್ತು ತುಳುನಾಡಿನಲ್ಲಿ ನಡೆದುಕೊಂಡು ಬಂದಿದ್ದ

[illegible]

ದೈನಂದಿನ ಜನಜೀವನ –ಇವುಗಳ ವಿವರಗಳನ್ನು ಈ ಗ್ರಂಥ ಒಳಗೊಂಡಿದೆ. ಈ ಗ್ರಂಥದಲ್ಲಿ ಸಾಲೆತ್ತೂರರ ಸಂಶೋಧನ ವೈಖರಿಯೇನೆಂದರೆ ತುಳುನಾಡಿನ ಸಾಂಸ್ಕೃತಿಕ ಇತಿಹಾಸ ತಿಳಿಸುವಲ್ಲಿ ಶಾಸನಗಳೊಂದಿಗೆ ಇಲ್ಲಿಯ ಪಾಡ್ದನ ಮತ್ತು ಗ್ರಾಮಪದ್ಧತಿಗಳನ್ನು ಆಕರಗ್ರಂಥಗಳನ್ನಾಗಿ ಉಪಯೋಗಿಸಿಕೊಂಡದ್ದು. ಇಲ್ಲಿಯ ಇತಿಹಾಸ ರಚಿಸುವಲ್ಲಿ ಇವನ್ನು ಉಪಯೋಗಿಸಿಕೊಂಡ ಸಂಶೋಧಕರಲ್ಲಿ ಭಾಸ್ಕರ ಆನಂದ ಸಾಲೆತ್ತೂರರು ಪ್ರಥಮರು.

ಗುರುರಾಜ ಭಟ್ಟರು ತುಳುನಾಡಿನ ಸಂಶೋಧನೆಯನ್ನು ಕೈಗೆತ್ತಿಕೊಳ್ಳುವಾಗ ಕರ್ನಾಟಕದ ಏಕೀಕರಣದ ಚಳವಳಿಗಳು ತೀವ್ರಕ್ರಮದಲ್ಲಿ ನಡೆಯುತ್ತಿದ್ದುವು. ತುಳುನಾಡಿನಲ್ಲಿ ಅದರ ಪ್ರಭಾವ ಅಷ್ಟೇನೂ ಕಾಣದಿದ್ದರೂ ಆ ಕಾಲದ ಕರ್ನಾಟಕ ಸಾಹಿತ್ಯ ಹಾಗೂ ಚರಿತೆ, ಇದರಿಂದ ಬಹಳಷ್ಟು ಪ್ರಭಾವಿತವಾಗಿದ್ದುವು. ಎಂ. ಗಣಪತಿ ರಾವ್ ಐಗಳ್ ಹಾಗೂ ಸಾಲೆತ್ತೂರರ ಕೃತಿಗಳು ಗುರುರಾಜ ಭಟ್ಟರಿಗೆ ಪ್ರೇರಕವಾಗಿದ್ದವು. ಹಾಗೂ ತುಳುನಾಡಿನ ಚರಿತ್ರೆಯನ್ನು ಮುಂದುವರಿಸಲು ಸಹಾಯಕವಾದವು.[7] ತುಳುನಾಡಿನ ಪ್ರಾಚ್ಯಾವಶೇಷಗಳ ಪ್ರತ್ಯಕ್ಷ ಅಧ್ಯಯನದ ಕಡೆಗೆ ಭಟ್ಟರ ಗಮನ ಸೆಳೆದವರು ಜಿ.ಎಸ್. ಗಾಯ್ ಹಾಗೂ ಇದೇ ಕ್ಷೇತ್ರದಲ್ಲಿ ಅಧ್ಯಯನ ನಡೆಸುತ್ತಿದ್ದ ಕೆ. ವಿ. ರಮೇಶ್, ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿ ಬ್ರಿಟಿಷ್ ಸರಕಾರ ೧೯ನೆಯ ಶತಮಾನದಲ್ಲಿ ಪ್ರಕಟಿಸಿದ್ದ 'ಇಂಪೀರಿಯಲ್ ಗೆಜೇಟಿಯರ್'ನಲ್ಲಿ ದಕ್ಷಿಣ ಕನ್ನಡದಲ್ಲಿ ಗಮನಾರ್ಹವಾದ ಚಾರಿತ್ರಿಕ ಅವಶೇಷಗಳೇ ಇಲ್ಲ" ಎಂದು ಬರೆಯಲಾಗಿತ್ತು. ಆದರೆ ಸಿವೆಲ್ (Sewell) ಎಂಬವರು ಬರೆದಿರುವ 'ಮದ್ರಾಸ್ ಪ್ರಾಂತ್ಯದ ಪ್ರಾಚ್ಯಾವಶೇಷಗಳು' ಎಂಬ ಗ್ರಂಥದಲ್ಲಿ ದಕ್ಷಿಣ ಕನ್ನಡದ ಚಾರಿತ್ರಿಕ ಅವಶೇಷಗಳ ತಪಶೀಲು ವ್ಯಾಪಕವಾಗಿತ್ತು. ಈ ಪಟ್ಟಿಯನ್ನು ಆಧರಿಸಿ ಡಾ। ಭಟ್ಟರು ತುಳುನಾಡಿನ ಪ್ರಾಚ್ಯಾವಶೇಷಗಳ ಪ್ರತ್ಯಕ್ಷ ಶೋಧನೆಗೆ ತೊಡಗಿದರು. ಓದಿ ಬರೆಯುವುದ ಕ್ಕಿಂತ ಹೆಚ್ಚಾಗಿ ನೋಡಿ ಸಾಕಷ್ಟು ಅರ್ಥೈಸಿ ಬರೆಯುವ ಹವ್ಯಾಸ ಬೆಳೆಯಿತು. ತುಳುನಾಡಿನ ವಾಸ್ತುಶಿಲ್ಪ ಹಾಗೂ ಪ್ರತಿಮಾಶಿಲ್ಪದ ಅಧ್ಯಯನ ಸಂಶೋಧನೆಗೆ ಹೊಸ ತಿರುವು ನೀಡಿತು. ಗೋಪಿನಾಥ ರಾವ್ ಎಂಬುವರು ಬರೆದ 'ಹಿಂದೂ ಪ್ರತಿಮಾಶಿಲ್ಪದ ಮೂಲಸೂತ್ರಗಳು' (Elements of Hindu Iconography) ಎಂಬ ಗ್ರಂಥ ಕೈದೀವಿಗೆಯಂತೆ ನೆರವಾಯಿತು. ಈ ಹಿನ್ನೆಲೆಯಲ್ಲಿ ಉಡುಪಿ, ಕೊಡವೂರು, ಕೊಲ್ಲೂರು, ಕಡಂದಲೆ, ಪೊಳಲಿ ಮುಂತಾದ ಸ್ಥಳಗಳ ದೇವತಾ ಪ್ರತಿಮೆಗಳನ್ನೂ ಶಾಸನಗಳನ್ನೂ ಪರಿಶೀಲಿಸಿದಾಗ ತುಳುನಾಡಿನ ಇತಿಹಾಸದ ಪ್ರಾಚೀನತೆ ಯನ್ನೂ, ಇಲ್ಲಿನ ಪ್ರಾಚ್ಯವಿಶೇಷಗಳ ವೈವಿಧ್ಯವನ್ನೂ ವ್ಯಕ್ತಪಡಿಸುವ ಅನೇಕ ಪುರಾವೆಗಳು ದೊರೆತವು. ದಕ್ಷಿಣದ ಕಾಸರಗೋಡಿನಿಂದ ಉತ್ತರದ ಶಿರೂರಿನ ವರೆಗಿನ ಹೆಚ್ಚಿನ ದೈವದೇವತಾಮೂರ್ತಿಗಳನ್ನು ಪ್ರಕಾಶಕ್ಕೆ ತರುವ ಕಾರ್ಯದಲ್ಲಿ ಭಟ್ಟರು ತನ್ನದೇ ರೀತಿಯಲ್ಲಿ ದೇವ ಋಣವನ್ನೂ ತೀರಿಸಿದ್ದಾರೆ.

ಡಾಕ್ಟರೇಟ್ ನಿಬಂಧವನ್ನು ಮುಗಿಸುವುದರೊಂದಿಗೆ ಗುರುರಾಜ ಭಟ್ಟರ ಸಂಶೋಧನೆ ಮುಗಿಯಲಿಲ್ಲ. ೧೯೬೭ರಲ್ಲಿ ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನ ಪ್ರಾಂಶುಪಾಲರಾದ ಬಳಿಕ

ತನ್ನ ಸುತ್ತಲೂ ಒಂದು ಸಂಶೋಧನ ವಲಯವನ್ನೇ ನಿರ್ಮಿಸಿಕೊಂಡರು. ಕಾಲೇಜಿನಲ್ಲೊಂದು ಇಂಡಾಲಾಜಿಲ್ ಸೊಸೈಟಿಯನ್ನು ಪ್ರಾರಂಭಿಸಿ ಆ ಮೂಲಕ ತನ್ನ ಸಹೋದ್ಯೋಗಿಗಳಿಗೂ ಸಂಶೋಧನೆಯ ದೀಕ್ಷೆ ನೀಡಿದ್ದಾರೆ. ಅವರ ಯಾವತ್ತೂ ಸಂಶೋಧನೆಗಳ ಮೌಲಿಕ ಅಂಶಗಳನ್ನು ಒಳಗೊಂಡ ಈ ವರ್ಷ ಪ್ರಕಟವಾಗಿರುವ ೧೧೦೦ ಪುಟಗಳ 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಎಂಡ್ ಕಲ್ಚರ್' ಎಂಬ ಹೊತ್ತಗೆ ತುಳುನಾಡಿನ ಕತೆಯನ್ನು ಸರ್ವವೇದ್ಯವಾಗಿ ಚಿತ್ರಿಸುತ್ತದೆ.

ಆದರೆ ಗುರುರಾಜ ಭಟ್ಟರ ಹಾದಿ ಅಷ್ಟೊಂದು ಸುಗಮವಾಗಿರಲಿಲ್ಲ. ಗುರುರಾಜ ಭಟ್ಟರು ತಿಳಿಸಿದಂತೆ ``My work is that work of a bull rather of an ass, very hard indeed. It is destiny that I should move in the hot sun with bag and baggage at a time when going out its not advisable''. ಎಂದೆನಿಸಿದರೂ `yet I do it to accomplish a task I have undertaken' ಎಂದು ತನಗೆ ತಾನೆ ಹೇಳಿಕೊಂಡಿರುವ ಮಾತಿದು. ಅಲ್ಲದೆ ಭಟ್ಟರು ಹೇಳಿದಂತೆ I am realy tired' ಎಂದೆನಿಸಿದಾಗಲೂ ಯುವ ಸಂಶೋಧಕರನ್ನು `God is not unkind to devoted workers' ಎಂದು ಹುರಿದುಂಬಿಸುತ್ತಿದ್ದರು.[8] ಗುರುರಾಜ್ ಭಟ್ಟರಿಗೆ ಎದುರಾದ ಸಮಸ್ಯೆಗಳನ್ನೆಲ್ಲಾ ಬದಿಗೊತ್ತಿ ತನ್ನ ವೈಯಕ್ತಿಕ ಸಮಸ್ಯೆಗಳು ಏನೇ ಕಂಡುಬಂದರೂ ಕೂಡಾ ಲೆಕ್ಕಿಸದೆ, ಜಿಲ್ಲೆಯ ಮೂಲೆಮೂಲೆ ಗಳಿಗೂ ಕೂಡಾ ಕೆಲವೊಮ್ಮೆ ಕಾಲ್ನಡಿಗೆಯಲ್ಲಿಯೇ ಸಂಚರಿಸಿ ತುಳುನಾಡಿನ ಇತಿಹಾಸಕ್ಕೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ೭೦೦ಕ್ಕೂ ಮಿಕ್ಕಿ ಲೇಖನಗಳನ್ನು ಸಾಮಾನ್ಯ ಜನರಿಗೂ ತಲುಪುವಂತಹ ಪತ್ರಿಕೆಗಳಲ್ಲಿ ಪ್ರಕಟಿಸಿದರು.[9]

ಹಾಗೆಯೇ ಇದರಲ್ಲಿ ತಿಳಿಸಿರುವಂತೆ 'ಇವರ ಸಂಶೋಧನೆಯ ಪ್ರಾರಂಭದ ಹಂತದಲ್ಲಿ ತುಳುನಾಡಿನಲ್ಲಿ ಶತಮಾನಗಳಿಂದ ಬಾಳಿ ಬದುಕಿದಂತಹ ಕೆಲವು ಜನಾಂಗಗಳ ಕುರಿತಾಗಿ ಕನ್ನಡ ಮಾಸಪತ್ರಿಕೆ ಭವ್ಯವಾಣಿಯಲ್ಲಿ ಪ್ರಕಟಿಸಿದ ಲೇಖನಗಳು 'ತುಳುನಾಡು –ಸಾಮಾಜಿಕ ಚರಿತ್ರೆ ಒಂದು ಸಂಶೋಧನಾತ್ಮಕ ವಿವೇಚನೆ' ಎಂಬ ಹೆಸರಿನ ಪುಸ್ತಕವು ೧೯೬೩ರಲ್ಲಿ ಪ್ರಕಟಗೊಂಡು ಹೆಚ್ಚಿನ ಗೌರವವನ್ನು ತಂದುಕೊಟ್ಟಿತು.

'ತುಳುನಾಡಿನ ಇತಿಹಾಸದಲ್ಲಿ ಸ್ಥಾನಿಕರು' ೧೯೬೬ರಲ್ಲಿ ಪ್ರಕಟವಾಯಿತು. `A political and cultural History of Tulunadu from the earliest times upto 1600 AD' ಇದು ಒಂಬತ್ತು ವರ್ಷಗಳ ಅಧ್ಯಯನದ ಅನಂತರ ಡಾ। ಭಟ್ಟರು ರಚಿಸಿದ ಪಿಎಚ್.ಡಿ. ಪ್ರಬಂಧ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಾಕ್ಟರೇಟ್ ಪಡೆದನಂತರ ಡಾ। ಭಟ್ಟರು Antiquities of South Kanara (೧೯೬೯) ಎಂಬ ಗ್ರಂಥವನ್ನು ಪ್ರಕಟಿಸಿದರು. ದಕ್ಷಿಣ ಕನ್ನಡದಾದ್ಯಂತ ಕಂಡುಬರುವ ಮೂರ್ತಿಗಳ, ವಾಸ್ತುಶಿಲ್ಪಗಳ ಮತ್ತು ಚಾರಿತ್ರಿಕ ಸ್ಥಳಗಳ ಮಹತ್ವ ಪರಿಚಯವನ್ನು ಈ ಗ್ರಂಥ ಮಾಡಿಕೊಡುತ್ತದೆ. ೧೯೭೫ರಲ್ಲಿ ಅಲ್ಲಿಯವರೆಗೂ ತಾನು ಮಾಡಿದಂತಹ ಸಂಶೋಧನೆಗಳ ಸಹಾಯದಿಂದ ಅತ್ಯಂತ ಮಹತ್ವಪೂರ್ಣವಾದ ಬೃಹದ್ಗ್ರಂಥವನ್ನು `Studies in Tuluva

History and Culture' ಬರೆದು ಪ್ರಕಟಿಸಿದರು. ಈ ಬೃಹದ್ಗ್ರಂಥಪ್ರಕಟನೆಯ ಕ್ಷೇತ್ರದಲ್ಲೂ ಅವರು ದಾಖಲೆಯಾಗಿರುವರು. ಏಕೆಂದರೆ, ಇದರಲ್ಲಿ ೫೦೦ ಫೋಟೋಗಳು ಮತ್ತು ೫೦೦ ಪುಟಗಳ ವಿವರಣೆಯಿದೆ. ಈ ಪುಸ್ತಕದಲ್ಲಿ ಪ್ರಾಗಿತಿಹಾಸದ ಕಾಲದಿಂದ ಹಿಡಿದು ಆಧುನಿಕ ಕಾಲದವರೆಗೂ ತುಳುನಾಡಿನ ಇತಿಹಾಸದ ಬಗ್ಗೆ ವಿವರಣೆ ಇದೆ. ಆದರೆ ಆಧುನಿಕ ಕಾಲದ ಇತಿಹಾಸ ಹೆಚ್ಚು ಪ್ರಾಮುಖ್ಯ ಗಳಿಸಿಕೊಂಡಿಲ್ಲ.[10] ಅವರೂ ಸಹ ಈ ಗ್ರಂಥದಲ್ಲಿ ಬೃಹತ್ ಶಿಲಾಯುಗದ ಸಂಸ್ಕೃತಿಯ ಅವಶೇಷಗಳು, ತುಳುವಿನ ವ್ಯುತ್ಪತ್ತಿ, ಮೂಲತಃ ತುಳುನಾಡೆಂಬುದು ಯಾವುದು, ತುಳುನಾಡಿನ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಸಂಸ್ಕೃತಿ, ಮೂರ್ತಿ ಮತ್ತು ವಾಸ್ತುಶಿಲ್ಪ ಇತ್ಯಾದಿ ವಿಷಯ ಗಳನ್ನೊಳಗೊಂಡಿದೆ.

'ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್' ಒಂದೊಂದು ಹಾಳೆಯನ್ನೂ ಮಗುಚುತ್ತಾ ಹೋದಹಾಗೆ ಅವರು ಕ್ಷೇತ್ರಕಾರ್ಯಕ್ಕೆ ಪಟ್ಟ ಶ್ರಮದ ಕಲ್ಪನೆ ಮಾಡುತ್ತದೆ. ಇಲ್ಲಿ ಅವರು ಒದಗಿಸಿದ ಮೂಲ ಆಕರಗಳು ತುಳುನಾಡಿನ ಇತಿಹಾಸದ ಅಧ್ಯಯನಕ್ಕೆ ನೀಡಿದ ಅಮೂಲ್ಯ ಕೊಡುಗೆಯಾಗುತ್ತವೆ. ಚಾರಿತ್ರಿಕ ಮಹತ್ವದ ಬಗ್ಗೆ ಲೇಖನಗಳನ್ನು ಮತ್ತು ಮನೋಗ್ರಾಫ್‌ಗಳನ್ನೂ ಪ್ರಕಟಿಸಿದರು. ಉಡುಪಿಯ ಇತಿಹಾಸ, ಮಂದರ್ತಿಯ ಸಮೀಕ್ಷೆ, ಅಂಬಲಪಾಡಿಯ ಇತಿಹಾಸ, ಬಾರಕೂರು, ಪಾಜಕಕ್ಷೇತ್ರ, ಕಾಂತೇಶ್ವರ –ಒಂದು ಪ್ರಾಚೀನ ಸಾಂಸ್ಕೃತಿಕ ಕೇಂದ್ರ, ಬಸರೂರು, ತುಳುನಾಡಿನ ಇತಿಹಾಸದಲ್ಲಿ ಪ್ರಸಿದ್ಧ ಸ್ಥಳ. ಮೂಡಬಿದರೆ, ಕಾರ್ಕಳ ಮತ್ತು ಮೂಡಬಿದಿರೆಯ ಐತಿಹಾಸಿಕ ಹಿನ್ನೆಲೆ, ಮಂಗಳೂರಿನ ಇತಿಹಾಸ ಮುಂತಾದ ಹಲವಾರು ಲೇಖನಗಳು ತುಳುನಾಡಿನ ವಿವಿಧ ಸ್ಥಳಗಳ ಇಲ್ಲಿನ ಇತಿಹಾಸದಲ್ಲಿ ಅದರ ಪ್ರಾಮುಖ್ಯತೆಯನ್ನು ತಿಳಿಸುತ್ತದೆ.

ಇನ್ನು ಕೆಲವು ವಿಶಿಷ್ಟ ವಿಷಯಗಳನ್ನು ಆಯ್ದುಕೊಂಡು ಬರೆದ ಲೇಖನಗಳು: ಉದಾ: ಉದಯಪುರ ಮತ್ತು ಗಣಪತಿ ದೇವಾಲಯ, ಕದ್ರಿಯ ಮಂಜುನಾಥ ದೇವಾಲಯ, ಸೇನೇಶ್ವರ ದೇವಸ್ಥಾನ –ಬೈಂದೂರು, ಶಂಭುಕಲ್ಲು ವೀರಭದ್ರ ದೇವಾಲಯ, ಬೆಳ್ಮಣ್ಣು ಶ್ರೀದುರ್ಗಾ ಪರಮೇಶ್ವರಿ ದೇವಾಲಯ, ಪೊಳಲಿ ಶ್ರೀರಾಜರಾಜೇಶ್ವರಿ ದೇವಳದ ವೈಶಿಷ್ಟ್ಯ, ಕಡಂದಲೆಯ ಸುಬ್ರಹ್ಮಣ್ಯ ದೇವಾಲಯ, ಮೂಡಬಿದಿರೆಯ ಎರಡು ಜೈನಶಿಲ್ಪಗಳು, ದಕ್ಷಿಣ ಕನ್ನಡದ ಗಣೇಶ ಬಿಂಬಗಳು, ಆಳುಪರ ಕೆಲವು ನಾಣ್ಯಗಳು, ಕುಂದಾಪುರ ತಾಲೂಕಿನ ಶಿಲ್ಪವೈಶಿಷ್ಟ್ಯ, Manjunatha and Nathapantha influence in South Kanara, Recent Epigraphs discovered from South Kanara ಮುಂತಾದ ಕೆಲವನ್ನು ಇಲ್ಲಿ ಹೆಸರಿಸಬಹುದು. ಭಟ್ಟರ ವಾದ ತುಳುಪದವು ತುಳುವಿನ ಪರ್ಯಾಯ ಪದವಾಗಿ ಬಂದಿದೆ ಎನ್ನುವುದನ್ನು ಸಹ ಹಲವು ವಿದ್ವಾಂಸರು ಒಪ್ಪಿಕೊಂಡಿಲ್ಲ. ಭಟ್ಟರ ಪ್ರಕಾರ ತುಳುನಾಡು ಹೊನ್ನಾವರ–ಭಟ್ಕಳ ಪ್ರದೇಶ, ದಕ್ಷಿಣ ಕನ್ನಡದ ಕೆಲವು ಭಾಗಗಳು ಸೇರಿದಂತೆ ವಿಜಯನಗರ ಕಾಲದವರೆಗೆ ತುಳುನಾಡು ಎಂದು ಕರೆಯಲ್ಪಡುತ್ತಿತ್ತು. ಈ ಜಿಲ್ಲೆಯ ದಕ್ಷಿಣ ಭಾಗಕ್ಕೆ ಆಳ್ವಖೇಡ ಎಂಬ ಹೆಸರೇ ಪ್ರಚಲಿತವಿತ್ತೆಂದು ವಾದಿಸಿದ್ದಾರೆ.

[illegible]

ತುಳುನಾಡಿನ ಇತಿಹಾಸದ ಬಗ್ಗೆ ಗುರುರಾಜ ಭಟ್ಟರು ಬರೆದ ಬರೆಹಗಳೆಲ್ಲವನ್ನೂ ಇಲ್ಲಿ ಪರಿಶೀಲಿಸುವುದು ಅಸಾಧ್ಯವಾದುದರಿಂದ ಅವರ ಸಂಶೋಧನೆಯ ಮುಖ್ಯ ಮಜಲು ಗಳನ್ನು ಗುರುತಿಸಿದರೆ, ಅವರು ತುಳುನಾಡಿನ ಇತಿಹಾಸಕ್ಕೆ ನೀಡಿದ ಕೊಡುಗೆ ಏನೆಂಬುದನ್ನು ತಿಳಿಯಬಹುದಾಗಿದೆ.

೧. ಇತಿಹಾಸ ಪೂರ್ವಯುಗದ ಬೃಹತ್ ಶಿಲಾಯುಗದ ಸಂಸ್ಕೃತಿಯ ಅವಶೇಷಗಳನ್ನು ಜಿಲ್ಲೆಯ ವಿವಿಧ ಕಡೆಗಳಲ್ಲಿ ಪ್ರಥಮವಾಗಿ ಶೋಧಿಸಿದ ಕೀರ್ತಿ ಭಟ್ಟರಿಗೆ ಸಲ್ಲುತ್ತದೆ.[11] ಇವರ ಈ ಸಂಶೋಧನೆಯಿಂದ ಜಿಲ್ಲೆಯ ಇತಿಹಾಸಕ್ಕೆ ಗಟ್ಟಿಯಾದ ಪುರಾತತ್ವದ ಪುರಾವೆಯ ತಳಹದಿ ದೊರೆಯಿತು.

೨. ತುಳುನಾಡಿನ ಸ್ಥಳನಾಮಗಳ ಬಗ್ಗೆ ಪ್ರಾರಂಭದಿಂದಲೇ ಭಟ್ಟರು ಲೇಖನ ಗಳನ್ನು ಪ್ರಕಟಿಸುತ್ತಾ ಬಂದರು. ಅವರು ತುಳುನಾಡು ಗ್ರಂಥದಲ್ಲಿ ಸ್ಥಳನಾಮಗಳು ಹೇಳುವ ತುಳುನಾಡಿನ ಕಥೆ ಎಂಬ ಅಧ್ಯಾಯದಲ್ಲಿ ಇತಿಹಾಸದ ಅಧ್ಯಯನದಲ್ಲಿ ಸ್ಥಳನಾಮಗಳ ಮಹತ್ವ, ಮತ್ತು ಸ್ಥಳನಾಮಗಳ ವರ್ಗೀಕರಣ ಮುಂತಾದ ಲೇಖನ ಗಳನ್ನು ಪ್ರಕಟಿಸಿದರು.

೩. ರಾಜಕೀಯ ಇತಿಹಾಸವನ್ನು ಅಧ್ಯಯನ ಮಾಡಿದ ಭಟ್ಟರು ತುಳುನಾಡಿನಲ್ಲಿ ಆಳಿದ ಬಂಗ, ಚೌಟ, ತೊಳಹ, ಬೈರರಸ, ಅಜಿಲ, ಸಾವಂತ ಮುಂತಾದ ರಾಜಮನೆತನಗಳ ಇತಿಹಾಸವನ್ನು ವ್ಯವಸ್ಥಿತವಾಗಿ ಪುನಾರಚಿಸಲು ಶ್ರಮಿಸಿದ್ದಾರೆ.

೪. ಆಳುಪ ಮತ್ತು ವಿಜಯನಗರದ ಕಾಲದ ಆಡಳಿತ ವ್ಯವಸ್ಥೆಯ ಇತಿಹಾಸವನ್ನು ಪುನಾರಚಿಸುವಲ್ಲಿ ಭಟ್ಟರು ಬಹಳಷ್ಟು ಶ್ರಮಿಸಿದ್ದಾರೆ. ಮುಖ್ಯವಾಗಿ ಇಲ್ಲಿ ಪ್ರಕಟಿಸಬೇಕಾದುದು ಸ್ಥಳೀಯ ಆಡಳಿತ ವ್ಯವಸ್ಥೆ, ನಾಡು ಗ್ರಾಮ ಸಭೆಗಳು ಗ್ರಾಮಾಂತರದ ವಿವಿಧ ಅಬಕಾರಿಗಳು ಮತ್ತು ಪೌರಾಡಳಿತ (ಮುಖ್ಯವಾಗಿ ಬಾರಕೂರು, ಮೂಡಬಿದಿರೆ, ಬಸರೂರು) ವ್ಯವಸ್ಥೆಗೆ ಸಂಬಂಧಿಸಿದ ಭಟ್ಟರ ಸಂಶೋಧನ ಬರಹಗಳು, ಕೆಳಸ್ತರದಲ್ಲಿ ಆಡಳಿತದಲ್ಲಿ ಜನತಾ ಪ್ರಾತಿನಿಧ್ಯ ಮತ್ತು ಆಡಳಿತದ ಸ್ಪಷ್ಟ ಚಿತ್ರವನ್ನು ನಮ್ಮ ಮುಂದಿರಿಸಿದೆ.[12]

೫. ತುಳುನಾಡಿನ ಆರ್ಥಿಕ ಇತಿಹಾಸದ ಕ್ಷೇತ್ರದಲ್ಲಿ ವ್ಯವಸಾಯದ ಬಗ್ಗೆ, ಗದ್ದೆಗಳ ಹೆಸರಿನ ವರ್ಗೀಕರಣದ ಬಗ್ಗೆ, ತೂಕ-ಅಳತೆ-ತೆರಿಗೆ-ವ್ಯಾಪಾರಿ ಸಂಘಗಳು ಮತ್ತು ತುಳುನಾಡು ಕರ್ನಾಟಕದ ಇತರ ಭಾಗಗಳೊಂದಿಗೆ ಮತ್ತು ವಿದೇಶಗಳೊಂದಿಗೆ ಹೊಂದಿದ್ದ ವ್ಯಾಪಾರ ಸಂಬಂಧವನ್ನು ಕುರಿತು ಭಟ್ಟರು ವಿವರವಾಗಿ ಚರ್ಚಿಸಿದ್ದಾರೆ.

೬. ಸಾಮಾಜಿಕ ಇತಿಹಾಸಕ್ಕೆ ಸಂಬಂಧಿಸಿದಂತೆ ಪ್ರಾರಂಭದಿಂದಲೇ ಭಟ್ಟರು ಬರೆಯುತ್ತಾ ಬಂದರು. 'ತುಳುನಾಡು' ಗ್ರಂಥದಲ್ಲಿ ಮತ್ತು ಅವರ 'ಸ್ಟಡೀಸ್ ಇನ್ ತುಳುವ ಹಿಸ್ಟರಿ

ಎಂಡ್ ಕಲ್ಚರ್' ಎಂಬ ಪುಸ್ತಕದಲ್ಲಿ ವಿವಿಧ ಜನಾಂಗಗಳ ಬಗೆಗಿನ ವಿವರಣೆಯೊಂದಿಗೆ ಭಟ್ಟರು ತುಳುವ ಸಮಾಜದ ಬಳಿಗಳ ಬಗ್ಗೆ ವಿಶ್ಲೇಷಿಸಿದ್ದಾರೆ. ಶಾಸನಗಳಲ್ಲಿ ಬರುವ ವಿವಿಧ ಬಳಿಗಳ ಪಟ್ಟಿ ಮಾಡಿದ್ದಾರೆ. ಅಳಿಯಸಂತಾನ ಪದ್ಧತಿಯ[13] ಬಗ್ಗೆ ಸಾಕಷ್ಟು ವಿವರವಾಗಿ ಚರ್ಚಿಸಿದ್ದಾರೆ.

೭. ಧರ್ಮಗಳ, ದೇವಾಲಯಗಳ, ಬಸದಿಗಳ, ಮೂರ್ತಿ ಮತ್ತು ವಾಸ್ತುಶಿಲ್ಪಗಳ ಕುರಿತ ಅಧ್ಯಯನ ಭಟ್ಟರನ್ನು ಹೆಚ್ಚು ಆಕರ್ಷಿಸಿತ್ತು. ಅವರ ಬರೆವಣಿಗೆಯ ಹೆಚ್ಚಿನ ಭಾಗ ಈ ವಿಷಯಗಳಿಗೆ ಸಂಬಂಧಿಸಿದುದು. ಗಣೇಶನ ಆರಾಧನೆ ಮತ್ತು ವಿವಿಧ ರೀತಿಯ ಲಿಂಗಗಳು, ಕಾಖಮುಖ ಮತ್ತು ವೀರಶೈವ ಪ್ರಭಾವ, ನಾಥಪಂಥ ಮತ್ತು ಅದರ ಪ್ರಭಾವ, ಶಿವ ಆರಾಧನೆ, ಮಹಿಷಮರ್ದಿನಿ ಮೂರ್ತಿಯ ಪ್ರಕಾರಗಳು, ದುರ್ಗೆಯ ವಿವಿಧ ರೀತಿಯ ಮೂರ್ತಿಗಳು, ವೈಷ್ಣವಪಂಥ ಮತ್ತು ಮೂರ್ತಿಗಳು, ಸೂರ್ಯನ ಆರಾಧನೆ, ಸುಬ್ರಹ್ಮಣ್ಯ ಮತ್ತು ನಾಗನ ಆರಾಧನೆ, ಭೂತಾರಾಧನೆ, ಮೆಕ್ಕೆಕಟ್ಟು ಮತ್ತು ಬೈಲೂರಿನ (ಉ.ಕ.) ಮರದ ಮೂರ್ತಿಗಳು, ತುಳುನಾಡಿನಲ್ಲಿ ಬೌದ್ಧಧರ್ಮ ದೇವಾಲಯದ ವಿವಿಧ ಅಧಿಕಾರಿಗಳು ಮತ್ತು ಆಡಳಿತ, ಜೈನಧರ್ಮ, ಶಿಲ್ಪಗಳು ಮತ್ತು ಬಸದಿಗಳು, ಗಜಪೃಷ್ಠ–ಸಮ ಮತ್ತು ಚತುರಸ್ರ, ದೀರ್ಘಚತುರಸ್ರ ಮತ್ತು ಮಂಡಲಶೈಲಿಗಳು, ತುಳುನಾಡಿನ ವಾಸ್ತುಶಿಲ್ಪದ ಕೆಲವು ವೈಶಿಷ್ಟ್ಯಗಳು ಇತ್ಯಾದಿ ವಿಚಾರಗಳ ಮೇಲೆ ಭಟ್ಟರು ಬೆಳಕುಚೆಲ್ಲಿದ್ದಾರೆ. ಇಲ್ಲಿಯ ಧಾರ್ಮಿಕ ಪರಿಸ್ಥಿತಿಯ ಚಿತ್ರಣ ನೀಡಿದ್ದಾರೆ. ತುಳುನಾಡಿನ ಅಗಾಧವಾದ ಶಿಲ್ಪಸಂಪತ್ತಿನ ಪರಿಚಯ ಮಾಡಿಕೊಟ್ಟಿದ್ದಾರೆ.

೮. ಭಟ್ಟರು ತುಳುನಾಡಿನ ನಾಣ್ಯಗಳ ಬಗ್ಗೆ ಶಾಸನಗಳಲ್ಲಿ ದೊರೆಯುವ ವಿವರಗಳನ್ನು ಅಧ್ಯಯನಮಾಡಿ ಇತಿಹಾಸ ಪುನಾರಚನೆಗೆ ಉಪಯೋಗಿಸಿದ್ದರು. ಆಳುಪರ ಕಾಲದಲ್ಲಿ ಬಾರಕೂರು ಮತ್ತು ಮಂಗಳೂರುಗಳಲ್ಲಿ ಬೇರೆ ಬೇರೆ ಟಂಕಸಾಲೆಗಳಿದ್ದುವು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.[14]

೯. ತುಳುನಾಡಿನ ಇತಿಹಾಸದ ಮೇಲೆ ಬೆಳಕುಚೆಲ್ಲುವ ಅಪೂರ್ವವಾದ ಶಾಸನಗಳನ್ನು ಭಟ್ಟರು ಸಂಶೋಧಿಸಿ ಪ್ರಕಟಿಸಿದರು. ಈಗಾಗಲೇ ಪ್ರಕಟವಾದ ಶಾಸನಗಳಿಗೆ ಅವರದ್ದೇ ಅರ್ಥವಿವರಣೆ ನೀಡುವ ಮೂಲಕ ಶಾಸನಗಳನ್ನು ಇತಿಹಾಸ ರಚನೆಗೆ ಸಮರ್ಥವಾಗಿ ಬಳಸಿಕೊಂಡರು.

ಕನ್ನಡ ಭಾಷೆಯ ಅತ್ಯಂತ ಪ್ರಾಚೀನ ತಾಮ್ರ ಶಾಸನವನ್ನು ಶೋಧಿಸಿ, ಪ್ರಕಟಿಸಿದ ಕೀರ್ತಿ ಭಟ್ಟರಿಗೆ ಸಲ್ಲುತ್ತದೆ. ಇದು ಕ್ರಿ.ಶ. ೪ನೇ ಶತಮಾನದ ಈ ಬೆಳ್ಮಣ್ಣು ತಾಮ್ರಶಾಸನ ಆಳುಪರ ಇತಿಹಾಸದಲ್ಲೂ ಬಹಳ ಮಹತ್ವವನ್ನು ಪಡೆದಿದೆ. ಭಟ್ಟರು ಉದ್ಯಾವರದಲ್ಲಿ ಆಳುಪರ ಶಾಸನ

ಗಳನ್ನು ಶೋಧಿಸಿ ಈ ಮನೆತನದ ಅಂತಃಕಲಹ ಸಮಯದ ಘಟನೆಗಳ ಮೇಲೆ ಹೆಚ್ಚಿನ ಬೆಳಕನ್ನು ಬೀರುತ್ತವೆ.

ಭಟ್ಟರು ತಮ್ಮ ಕೊನೆಯ ದಿನಗಳಲ್ಲಿ ಜೈನಧರ್ಮದ ಅಧ್ಯಯನಕ್ಕೆ ಸಂಬಂಧಿಸಿ ಕೈಕೊಂಡ ಸರ್ವೇಕ್ಷಣೆಯ ಸಮಯದಲ್ಲಿ ಶಿವಮೊಗ್ಗದ ಜಂಬಾನಿ ಎಂಬಲ್ಲಿ ಮೀನಿನ ಲಾಂಛನವುಳ್ಳ ಚಾಲುಕ್ಯ ಶಾಸನವೊಂದನ್ನು ಕಂಡುಹಿಡಿದರು. ಆಳುಪ–ಚಾಲುಕ್ಯ ಸಂಬಂಧದ ಮೇಲೆ ಬೆಳಕುಬೀರುವ ಮಹತ್ವದ ಶಾಸನವಿದು. ಅಂತೆಯೇ ವಿಜಯನಗರ ಕಾಲದ ಕೆಲವು ಶಾಸನಗಳನ್ನೂ ಅವರು ಸಂಶೋಧನ ಕಾರ್ಯದಲ್ಲಿ ತೊಡಗಿದ್ದಾಗ ಬೆಳಕಿಗೆ ತಂದರು.[15]

ಯಾವುದೇ ಪ್ರಮುಖ ಆರ್ಥಿಕ ನೆರವಿಲ್ಲದೆ ಭಟ್ಟರು ಅವಿರತವಾಗಿ ಶ್ರಮಿಸಿ ತುಳುನಾಡಿನ ಇತಿಹಾಸ ರಚನೆಗೆ ನೀಡಿದ ಅಮೂಲ್ಯ ಕೊಡುಗೆ ಮತ್ತು ಅವರ ಅದ್ವಿತೀಯ ವೆನ್ನಬಹುದಾದ ಸರ್ವೇಕ್ಷಣಕಾರ್ಯ ಈ ಪ್ರದೇಶದಲ್ಲಿ ಇತಿಹಾಸದ ಅಧ್ಯಯನಕ್ಕೆ ಭಟ್ಟರು ಬುನಾದಿಯನ್ನು ಹಾಕುವಲ್ಲಿ ಯುವ ಸಂಶೋಧಕರಿಗೆ ಸ್ಫೂರ್ತಿಯನ್ನು ಒದಗಿಸುವಲ್ಲಿ ಮತ್ತು ಜಿಲ್ಲೆಯ ಜನತೆಯಲ್ಲಿ ಇತಿಹಾಸಪ್ರಜ್ಞೆ ಹೆಚ್ಚಿಸುವಲ್ಲಿ ಸಫಲರಾದರು.

ಗುರುರಾಜ ಭಟ್ಟರ ಅಧ್ಯಯನದ ಮೇಲಿನ ಬರವಣಿಗೆಗಳನ್ನು ನಾವು ಗೌರವಪೂರ್ವಕ ವಾಗಿ ಅಭಿನಂದಿಸಲೇ ಬೇಕು. ಏಕೆಂದರೆ, ಅವರ ಛಲಬಿಡದ ಸಂಶೋಧನೆ, ಅವರ ಉತ್ಸಾಹ–ಚೈತನ್ಯಗಳಿಂದ ಕೂಡಿದಂತಹ ಶೋಧನೆಗಳನ್ನು ನಡೆಸಿ ಮುಂದಿನ ಜನಾಂಗಕ್ಕೆ ದಾರಿದೀಪವಾಗಿದೆ. ಭಟ್ಟರ ಸಹಚರರು ಹಾಗೂ ಅವರ ಸಂಗಡ ಕೆಲಸಮಾಡಿದವರು ಅವರ ಸಂಶೋಧನೆಗಳ ಒಂದು ವಿಹಂಗಮನೋಟವನ್ನು ತಿಳಿಸುತ್ತಾರೆ.

ಅಧ್ಯಯನ ವ್ಯಾಪ್ತಿ

ಈ ಸಂಪ್ರಬಂಧದಲ್ಲಿ ಪಿ. ಗುರುರಾಜ ಭಟ್ಟರ ಅಧ್ಯಯನಗಳಲ್ಲಿ ಬಿಂಬಿತವಾಗಿರುವ ಅವರ ಕೊಡುಗೆಗಳ ಬಗ್ಗೆ ಪ್ರಸ್ತುತಪಡಿಸುವುದೇ ಮುಖ್ಯ ಉದ್ದೇಶವಾಗಿದೆ. ಅಧ್ಯಯನದ ಮಿತಿಯೊಳಗೆ ಅವುಗಳಲ್ಲಿ ಕೆಲವೇ ಕ್ಷೇತ್ರಗಳನ್ನು ಮಾತ್ರ ಆರಿಸಿಕೊಳ್ಳಲಾಗಿದೆ. ಗುರುರಾಜ ಭಟ್ಟರ ಅಧ್ಯಯನದಲ್ಲಿ ತುಳುನಾಡಿನ ಕುರಿತಂತೆ ಪ್ರಾಚೀನ ಕಾಲದಿಂದ ಆಧುನಿಕ ಕಾಲದ ವರೆಗಿನ ಅನೇಕ ರೀತಿಯ ಮಾಹಿತಿಯನ್ನು ಸಂಶೋಧಿಸಿದ್ದಾರೆ. ಸುಮಾರು ೬೦೦ಕ್ಕೂ ಹೆಚ್ಚಿನ ಲೇಖನಗಳನ್ನು ಬರೆದಿದ್ದಾರೆ. ಆದರೆ ಪಿಎಚ್.ಡಿ. ಮಹಾಪ್ರಬಂಧಕ್ಕೆ ಸಾಕಾಗುವಷ್ಟು ವಿಷಯ ಗಳಿರುವಾಗ ಎಂ.ಫಿಲ್.ನ ಸಂಪ್ರಬಂಧಕ್ಕೆ ಅಗತ್ಯವಿರುವಷ್ಟು ಮಾಹಿತಿಯ ಅಧ್ಯಯನವನ್ನು ಮಾತ್ರ ಇಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಭಟ್ಟರ ಸಂಶೋಧನೆಗಳನ್ನು ತಿರುವುತ್ತಾ ಹೋದಂತೆ ವಿಶಾಲವಾಗಿರುವ ಸಾಧನೆಯ ಎಲ್ಲಾ ಮಾಹಿತಿಗಳನ್ನು ಒದಗಿಸುವುದು ಈ ಸಂಪ್ರಬಂಧದಲ್ಲಿ ಅಸಾಧ್ಯವಾಗಿದೆ. ಆದ್ದರಿಂದಲೇ

[illegible]

ಪ್ರಾಗಿತಿಹಾಸ, ಶಾಸನಗಳ ಅಧ್ಯಯನ ಮತ್ತು ನಾಣ್ಯಗಳ ಕುರಿತಂತೆ ಅವರ ಕೊಡುಗೆಗಳು ಹಾಗೂ ಅವರ ಅಧ್ಯಯನದ ಮೇಲಿನ ಪುನರಾವಲೋಕನ ವನ್ನು ಇಲ್ಲಿ ಮಂಡಿಸಲಾಗಿದೆ.

ಆಕರಗಳು :

ಈ ಅಧ್ಯಯನಕ್ಕೆ ಮೂಲಾಧಾರವಾಗಿ ಗುರುರಾಜ ಭಟ್ಟರ ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳನ್ನು ಆಧಾರವಾಗಿ ತೆಗೆದುಕೊಂಡಿದ್ದೇನೆ. ವಿವಿಧ ನಿಯತಕಾಲಿಕೆಗಳಲ್ಲಿ,[16] ಜರ್ನಲ್‌ಗಳಲ್ಲಿ[17] ಪ್ರಕಟವಾದ ಅವರ ಲೇಖನಗಳು ಈ ಅಧ್ಯಯನಕ್ಕೆ ಮೂಲಾಧಾರವಾಗಿದೆ. ಹಾಗೂ ಅವರ ಕುಟುಂಬಸ್ಥರ ಸಂಗ್ರಹದಲ್ಲಿರುವ ಅವರ ಅಪ್ರಕಟಿತ ಲೇಖನಗಳನ್ನು[18] ಈ ಅಧ್ಯಯನಕ್ಕೆ ಒಳಪಡಿಸಿದ್ದೇನೆ. ಇವಲ್ಲದೆ ಗುರುರಾಜ ಭಟ್ಟರ ಸಂಶೋಧನೆಯನ್ನು ಕುರಿತು ಬರೆದಿರುವ ಪ್ರಕಟಿತ ಮತ್ತು ಅಪ್ರಕಟಿತ ಲೇಖನಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ವಿವಿಧ ವಿದ್ವಾಂಸರುಗಳಿಂದ ಮೌಖಿಕವಾಗಿ ಕಲೆಹಾಕಿದ ಮಾಹಿತಿಯನ್ನು ಈ ಅಧ್ಯಯನಕ್ಕೆ ಉಪಯೋಗಿಸಲಾಗಿದೆ.[19]

ಅಧ್ಯಯನದ ವಿಂಗಡನೆ:

ಎರಡನೇ ಅಧ್ಯಯನವು 'ಗುರುರಾಜ ಭಟ್ಟರು ಹಾಗೂ ತುಳುನಾಡಿನ ಪ್ರಾಗಿತಿಹಾಸಾಧ್ಯಯನ'ಕ್ಕೆ ಸಂಬಂಧಿಸಿದ್ದಾಗಿದೆ. ತುಳುನಾಡಿನ ಇತಿಹಾಸಕ್ಕೆ ಸಂಬಂಧಿಸಿದಂತೆ ಬೃಹತ್ ಶಿಲಾಯುಗದ ಸಂಸ್ಕೃತಿಯನ್ನು ಗುರುತಿಸಿ, ಅದನ್ನು ಬೆಳಕಿಗೆ ತರುವಲ್ಲಿ ಗುರುರಾಜ ಭಟ್ಟರು ಮೊದಲಿಗರು. ತುಳುನಾಡಿನ ಪ್ರಾಗಿತಿಹಾಸಕ್ಕೆ ಸಂಬಂಧಸಿದಂತೆ ಭಟ್ಟರಿಗಿಂತ ಮೊದಲಿನವ ರಾದ ಗಣಪತಿ ರಾವ್ ಐಗಳ್, ಬಿ.ಎ. ಸಾಲೆತ್ತೂರ್ ಮೊದಲಾದವರು ಮೌನವಹಿಸಿದ್ದರು. ಭಟ್ಟರ ಪ್ರಾಗಿತಿಹಾಸಿಕ ಸಂಶೋಧನೆಗಳನ್ನು ಪರಿಶೀಲಿಸಿದ ಪ್ರಾಗಿತಿಹಾಸಜ್ಞರಾದ ಅ. ಸುಂದರ ಅವರು ಅವುಗಳು ಬೃಹತ್ ಶಿಲಾಯುಗಕ್ಕೆ ಸಂಬಂಧಪಟ್ಟದ್ದೆಂದು ಖಚಿತಪಡಿಸಿದ್ದಾರೆ. ಪ್ರಾಗೈತಿಹಾಸಿಕ ನೆಲೆಗಳನ್ನು ಗುರುತಿಸುವಲ್ಲಿ ಸ್ಥಳೀಯರು ನೀಡಿದ ಮಾಹಿತಿ ಮತ್ತು ಸಹಕಾರವನ್ನು ಭಟ್ಟರು ದಾಖಲಿಸಿದ್ದಾರೆ. ಅವರ ಸಂಶೋಧನೆಯಲ್ಲಿ ಹೆಸರಾಂತ ಲೇಖಕರಾದ ಶಿವರಾಮ ಕಾರಂತರು ನೆರವಾಗಿದ್ದರು. ಭಟ್ಟರ ಪ್ರಾಗೈತಿಹಾಸಿಕ ಸಂಶೋಧನೆ ಗಳು, ಅನಂತರದ ಇತಿಹಾಸಕಾರರುಗಳಾದ ಬಿ. ವಸಂತ ಶೆಟ್ಟಿ, ಪುಂಡಿಕಾಯಿ ಗಣಪಯ್ಯ ಭಟ್, ಕೆ.ಬಿ. ಶಿವತಾರಕ್, ಮುರುಗೇಶ್ ಮುಂತಾದ ಸಂಶೋಧಕರಿಗೆ ಪ್ರೇರಣೆ ನೀಡಿತು.

ಮೂರನೆಯ ಅಧ್ಯಾಯವು 'ತುಳುನಾಡಿನ ಶಾಸನಗಳ ಅಧ್ಯಯನದಲ್ಲಿ ಗುರುರಾಜ ಭಟ್ಟರ ಕೊಡುಗೆ' ಕುರಿತಂತಾಗಿದೆ. ಭಟ್ಟರು ಅನೇಕ ಶಿಲಾಶಾಸನಗಳು ಮತ್ತು ತಾಮ್ರ ಶಾಸನವನ್ನು ಬೆಳಕಿಗೆ ತಂದಿದ್ದಾರೆ. ಮೊಟ್ಟಮೊದಲಬಾರಿಗೆ ಸ್ವತಃ ಶಾಸನತಜ್ಞರಾದ ಭಟ್ಟರು ಅನೇಕ ಹೊಸ ಶಾಸನಗಳ ಆಧಾರದಿಂದ ಸ್ಥಳೀಯ ಇತಿಹಾಸಕ್ಕೆ ಸಂಬಂಧಿದ ಹೊಸ ಮಾಹಿತಿಗಳನ್ನು ಕಲೆಹಾಕಿದ್ದಾರೆ. ಅನೇಕ ಆಳುಪ ಶಾಸನಗಳನ್ನು ಸಂಶೋಧಿಸಿದ ಭಟ್ಟರು ತುಳುನಾಡಿನ

ಇತಿಹಾಸವನ್ನು ಪುನಾರಚಿಸುವಲ್ಲಿ ತಮಗಿಂತ ಮೊದಲಿನವರಾದ ಗಣಪತಿ ರಾವ್ ಐಗಳ್, ಸಾಲೆತ್ತೂರು ಮೊದಲಾದವರಿಗಿಂತ ಭಿನ್ನವಾಗಿ ಮತ್ತು ಹೆಚ್ಚು ವೈಜ್ಞಾನಿಕವಾಗಿ ಇಲ್ಲಿನ ಇತಿಹಾಸದ ಅಧ್ಯಯನ ನಡೆಸಿದರು. ಕನ್ನಡದ ಮೊದಲ ತಾಮ್ರಶಾಸನ ಎನ್ನುವ ಹೆಗ್ಗಳಿಕೆಗೆ ಪಾತ್ರವಾದ ಬೆಳ್ಮಣ್ಣಿನ ತಾಮ್ರಶಾಸನವನ್ನು ಬೆಳಕಿಗೆ ತಂದವರು ಭಟ್ಟರು. ಬೆಳ್ಮಣ್ಣು ತಾಮ್ರಶಾಸನವು ರಾಜಕೀಯ ಇತಿಹಾಸ ಮಾತ್ರವಲ್ಲದೆ, ಆಗಿನ ಕಾಲದ ಸ್ಥಳೀಯ ಸಭೆಗಳು ಮತ್ತು ಅವುಗಳ ಚಟುವಟಿಕೆ ಕುರಿತಂತೆ ಮಾಹಿತಿ ಒದಗಿಸುತ್ತದೆ.

'ತುಳುನಾಡಿನ ನಾಣ್ಯಗಳ ಅಧ್ಯಯನಕ್ಕೆ ಗುರುರಾಜ ಭಟ್ಟರ ಕೊಡುಗೆ'ಯನ್ನು ನಾಲ್ಕನೆಯ ಅಧ್ಯಾಯದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ತುಳುನಾಡಿನಲ್ಲಿ ದೊರೆತ ಪಾಂಡ್ಯಗದ್ಯಾಣವು ಆಳುಪರ ನಾಣ್ಯವೆಂದು ಸಂಶೋಧಿಸಿದವರು ಭಟ್ಟರು. ಇವರ ವಾದವನ್ನು ಖ್ಯಾತ ನಾಣ್ಯಶಾಸ್ತ್ರಜ್ಞ ಎಂ. ಮುಕುಂದ ಪ್ರಭು ಖಚಿತಪಡಿಸಿದ್ದಾರೆ. ಆದರೆ ಭಟ್ಟರ ವಾದವನ್ನು ಪಿ.ಎಲ್. ಗುಪ್ತ, ಎಸ್.ರಾಮಯ್ಯ ಇವರುಗಳು ನಿರಾಕರಿಸಿದ್ದಾರೆ. ಆದರೆ ಭಟ್ಟರು ತುಳುನಾಡಿನ ಚಿನ್ನ, ಬೆಳ್ಳಿ ಮತ್ತು ಕಂಚಿನ ಹಲವಾರು ನಾಣ್ಯಗಳನ್ನು ಬೆಳಕಿಗೆ ತಂದರಲ್ಲದೆ, ಪಾಂಡ್ಯಗದ್ಯಾಣವು ಆಳುಪರೇ ಹೊರಡಿಸಿರುವುದು ಎಂದು ಸಾಬೀತುಪಡಿಸಿದ್ದಾರೆ. ಈ ರೀತಿಯ ಗದ್ಯಾಣದ ಬಳಕೆಯ ಉಲ್ಲೇಖವು ದಕ್ಷಿಣ ಕನ್ನಡದಲ್ಲಿ ಪ್ರಥಮವಾಗಿ ಕ್ರಿ.ಶ. ೧೧೩೯ರ ಶಾಸನಗಳಲ್ಲಿ ಕಂಡುಬರುತ್ತದೆ. ಮಂಗಳೂರು ಮತ್ತು ಬಾರಕೂರಗಳಲ್ಲಿ ಟಂಕಸಾಲೆಗಳಿದ್ದು ಅಲ್ಲಿ ನಾಣ್ಯಗಳನ್ನು ಮುದ್ರಿಸಲಾಗುತ್ತಿತ್ತು ಎನ್ನುವುದು ಅನೇಕ ಶಾಸನಗಳಿಂದ ತಿಳಿದುಬರುತ್ತದೆ.

ಐದನೆಯ ಅಧ್ಯಾಯದಲ್ಲಿ 'ಗುರುರಾಜ ಭಟ್ಟರ ಅಧ್ಯಯನದ ಬರವಣಿಗೆಗಳು' ಎನ್ನುವ ವಿಷಯವನ್ನು ಕೈಗೆತ್ತಿಕೊಳ್ಳಲಾಗಿದೆ. ಭಟ್ಟರ ಸಂಶೋಧನಾತ್ಮಕ ಲೇಖನ ಮತ್ತು ಕೃತಿಗಳ ಕುರಿತಂತೆ ಅನೇಕ ವಿದ್ವಾಂಸರು, ಸಂಶೋಧಕರು ಹಾಗೂ ವಿಮರ್ಶಕರು ನೀಡಿದ ಪ್ರತಿಕ್ರಿಯೆಗಳನ್ನು ಇಲ್ಲಿ ಪುನರವಲೋಕನ ಮಾಡಲಾಗಿದೆ. ಭಟ್ಟರ ವಿದ್ವತ್‌ಗ್ರಂಥವಾದ 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್'ನಲ್ಲಿ ಮೂಡಿಬಂದಿರುವಂತಹ ಮಾಹಿತಿ ಗಳನ್ನು ಸಮಕಾಲೀನ ಬರವಣಿಗೆಗಾರರು ತಮ್ಮ ದೃಷ್ಟಿಕೋನದಲ್ಲಿ ತಿಳಿಸುತ್ತಾರೆ. ಯಾವುದೇ ಒಬ್ಬ ಇತಿಹಾಸಕಾರನೂ ಕೂಡ ಟೀಕೆಯಿಂದ ಹೊರತಾಗಿರುವುದಿಲ್ಲ. ಆದರೆ ಭಟ್ಟರು ಟೀಕೆಯನ್ನು ಮೀರಿನಿಂತ ಒಬ್ಬ ಮಹಾನ್ ವ್ಯಕ್ತಿ ಎಂದು ಎಲ್ಲಾ ಬರವಣಿಗೆಗಾರರು ತಮ್ಮ ಲೇಖನಗಳಲ್ಲಿ ತಿಳಿಸಿದ್ದಾರೆ. ಈ ಬೃಹತ್ ಗ್ರಂಥದ ಮೇಲೆ ಹಲವಾರು ಲೇಖನಗಳು ಮೂಡಿಬಂದಿವೆ. ಹಾಗೆಯೇ ಅಪ್ರಕಟಿತ ಲೇಖನಗಳಿಂದ ಆಯ್ದುಕೊಂಡು ವಿದ್ವತ್ ಗ್ರಂಥದ ಮಹತ್ವವನ್ನು ಗುರುತಿಸಲಾಗಿದೆ

ಆರನೇ ಅಧ್ಯಾಯವು ಈ ಮೇಲಿನ ಅಧ್ಯಯನದಿಂದ ಹೊರಹೊಮ್ಮುವ ಶೋಧನೆಯ ಫಲಿತವನ್ನು ಒಳಗೊಂಡಿದೆ.

[illegible]

ಸಂದರ್ಭಸೂಚಿಗಳು:

1. ಜೇಮ್ಸ್ ಮಿಲ್ 1878, 'ಎ ಹಿಸ್ಟರಿ ಆಫ್ ಬ್ರಿಟಿಷ್ ಇಚಿಡಿಯಾ'; ದ ಗೆಜೆಟಿಯರ್ ಆಫ್ ಸೌತ್ ಕೆನರಾ–ಸೌತ್ ಕೆನರಾ ಮ್ಯಾನುವಲ್, 1894.
2. ಜಾನ್ ಸ್ಟರಕ್, 1894, ಮೆಡ್ರಾಸ್ ಡಿಸ್ಟ್ರಿಕ್ಟ್ ಮ್ಯಾನುವಲ್ಸ್: ಸೌತ್ ಕೆನರಾ, ಸಂಚಿಕೆ–1, ಗವರ್ನ್‌ಮೆಂಟ್ ಪ್ರೆಸ್, ಮದ್ರಾಸ್, ಪು. 1.
3. ಶೀನಪ್ಪ ಹೆಗ್ಡೆ ಮತ್ತು ಎನ್.ಎಸ್. ಕಿಲ್ಲೆ, 1991 'ಪ್ರಾಚೀನ ತುಳುನಾಡು', ಪು. 117; 168–179.
4. ಎಂ. ಗಣಪತಿ ರಾವ್ ಐಗಳ್, 2004, 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ', (ಸಂ. ಪಾದೇಕಲ್ಲು ವಿಷ್ಣು ಭಟ್), ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ. ಪು. 7; ಎಂ. ಮುಕುಂದ ಪ್ರಭು, 1997, *ಮಂಜೇಶ್ವರ ಗಣಪತಿ ರಾವ್ ಐಗಳ್*, 'ತುಳುವರಿವರು', (ಸಂ. ಪಾದೇಕಲ್ಲು ವಿಷ್ಣು ಭಟ್), ಪು. 17–18.
5. ಎಚ್. ಜಿ. ಶ್ರೀಧರ್, 1997, '*ತುಳುನಾಡು ನುಡಿಗಳ ವಿಷಯದಲ್ಲಿ ಗೋವಿಂದ ಪೈ ಅವರ ಸಂಶೋಧನೆಗಳು*', 'ತುಳುವರಿವರು', (ಸಂ. ಪಾದೇಕಲ್ಲು ವಿಷ್ಣು ಭಟ್), ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ, ಪು. 36–37; ಪಿ. ಗುರುರಾಜ ಭಟ್, 1963, 'ತುಳುನಾಡು' ಐಬಿಎಚ್, ಪು. lx; ಕೆ. ವಿ. ರಮೇಶ್, 1969, 'ತುಳುನಾಡಿನ ಇತಿಹಾಸ', ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ; ಎಂ. ಗಣಪತಿ ರಾವ್ ಐಗಳ್, 2004, 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ', ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ; ಪಿ. ಗುರುರಾಜ ಭಟ್, 1975, 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್', ಉಡುಪಿ.
6. ಲಕ್ಷ್ಮೀ ಬಂಟ್ವಾಳ್, 2003, '*ಸಾಲೆತ್ತೂರ್ಸ್ ಬ್ಯಾಕ್‌ಗ್ರೌಂಡ್*', 'ದ ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸೈಟಿ' (ಸಂ. ಸೂರ್ಯನಾಥ ಯು. ಕಾಮತ್), ಬೆಂಗಳೂರು, ಪು. 7; ಬಿ. ಎ. ಸಾಲೆತ್ತೂರ್, 1973, '*ಎ ಕೋಕ್ ಫೈಟಿಂಗ್ ಇನ್ ತುಳುವ*', ಅದೇ, ಪು. Xvii, 2x, 316, 327; `ಸೌತ್ ಕೆನರಾ ಡಿಸ್ಟ್ರಿಕ್ಟ್ ಗೆಜೆಟಿಯರ್', 1973 ಬೆಂಗಳೂರು; ಕೆ. ಜಿ. ವಸಂತಮಾಧವ, 1997, '*ಭಾಸ್ಕರ ಆನಂದ ರಾವ್ ಸಾಲೆತ್ತೂರು ಅವರ ಸಂಶೋಧನೆಗಳು*', 'ತುಳುವರಿವರು' (ಸಂ. ಪಾದೇಕಲ್ಲು ವಿಷ್ಣು ಭಟ್), ಪು. 46; 21, ಬಿ. ಎ. ಸಾಲೆತ್ತೂರ್, 1936, 'ಏನ್ಶಿಯಂಟ್ ಕರ್ನಾಟಕ, ಸಂ. 1 – ಹಿಸ್ಟರಿ ಆಫ್ ತುಳುವ', ಪೂನಾ, ಪು. 9; ಕೆ. ಜಿ. ವಸಂತಮಾಧವ, ಏಪ್ರಿಲ್–ಜೂನ್, 2002, '*ಡಾ। ಭಾಸ್ಕರ ಆನಂದ ಸಾಲೆತ್ತೂರ್ಸ್ ಕಾಂಟ್ರಿಬ್ಯೂಷನ್ ಟು ತುಳುವ ಹಿಸ್ಟರಿ*' 'ದ

ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸೈಟಿ' (ಸಂ. ಸೂರ್ಯನಾಥ ಯು. ಕಾಮತ್), ಬೆಂಗಳೂರು, ಪು.9; ಬಿ. ಎ. ಸಾಲೆತ್ತೂರ್, 1936, 'ಏನ್ಶಿಯಂಟ್ ಕರ್ನಾಟಕ, ಸಂ. 1 – ಹಿಸ್ಟರಿ ಆಫ್ ತುಳುವ', ಪೂನಾ, ಪು. 59–64; ಬಿ. ಎ. ಸಾಲೆತ್ತೂರ್, 1938, '*ಸ್ಥಾನಿಕಾಸ್ ಆಂಡ್ ದೆಯರ್ ಹಿಸ್ಟೋರಿಕಲ್ ಇಂಪಾರ್ಟೆನ್ಸ್*', 'ಜರ್ನಲ್ ಆಫ್ ಬಾಂಬೆ ಯುನಿವರ್ಸಿಟಿ', ಪು. 29, 32, 93; ಎಚ್. ಆರ್. ರಘುನಾಥ ಭಟ್, ಎಪ್ರಿಲ್–ಜೂನ್, 2002, '*ಸಾಲೆತ್ತೂರ್ಸ್ ವರ್ಕ್ ಇನ್ ದ ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್*', 'ದ ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸೈಟಿ' (ಸಂ. ಸೂರ್ಯನಾಥ ಯು. ಕಾಮತ್), ಬೆಂಗಳೂರು, ಪು. 49–50; ಡಾ। ಪಿ. ಗುರುರಾಜ ಭಟ್ ರಿಟೈರ್ಸ್ ಟು ಸರ್ವ್ ರಿಸರ್ಚ್, ಇಶ್ಯೂಡ್ ಬೈ ದ ಪಾದೂರು ಗುರುರಾಜ ಭಟ್ ಸನ್ಮಾನ ಸಮಿತಿ, ಉಡುಪಿ, ದಕ್ಷಿಣ ಕನ್ನಡ; ಎ. ವಿ. ನರಸಿಂಹ ಮೂರ್ತಿ (ಸಂ.), 1982, '*ಡಾ। ಪಿ. ಗುರುರಾಜ ಭಟ್ (1925–1978) ಸಂ. 2*', 'ದ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್, ಕಡಿಯಾಳಿ', ಪು. 9–11;

7. ಪಿ. ಗುರುರಾಜ ಭಟ್, 2009, 'ತುಳುನಾಡು', ಪಾದೂರು ಗುರುರಾಜ ಮೆಮೊರಿಯಲ್ ಟ್ರಸ್ಟ್, ಉಡುಪಿ, ಪು. ix; ಎ. ವಿ. ನರಸಿಂಹ ಮೂರ್ತಿ (ಸಂ.), 1982, '*ಡಾ। ಪಿ. ಗುರುರಾಜ ಭಟ್' ಸಂ. 2,*' 'ದ ಜರ್ನಲ್ ಆಫ್ ದ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್', ಪು. 13.
8. ಡಾ। ಭಟ್ಸ್ ಲೆಟರ್ ಟು ಬಿ. ವಸಂತ ಶೆಟ್ಟಿ ಫ್ರಮ್ ಗುಲ್ಬರ್ಗಾ, ಎಪ್ರಿಲ್ 21, 1977.
9. ಡಾ। ಭಟ್ಸ್ ಲೆಟರ್ ಟು ಬಿ. ವಸಂತ ಶೆಟ್ಟಿ ಫ್ರಮ್ ಧಾರವಾಡ, ಜುಲೈ 17, 1977.
10. ಪಿ. ಗುರುರಾಜ ಭಟ್, 1975, '*ಸ್ಟಡಿಸ್ ಇನ್ ತುಳುವ ಹಿಸ್ಟೊರಿ ಆಂಡ್ ಕಲ್ಚರ್*', ಉಡುಪಿ.
11. ಅ. ಸುಂದರ, 1977, 'ದಕ್ಷಿಣ ಕನ್ನಡ ಪ್ರಾಚೀನ ಸಂಸ್ಕೃತಿಯ ಅವಶೇಷಗಳು', 'ಸುದರ್ಶನ', (ಸಂ. ಅಡ್ಯನಡ್ಕ ಕೃಷ್ಣ ಭಟ್) ಡಾ। ತೋನ್ಸೆ ಮಾಧವ ಅನಂತ ಪೈ ಅಭಿನಂದನ ಗ್ರಂಥ', ಮೂಲ್ಕಿ, ದ.ಕ. ಪು. 91.
12. ಪಿ. ಗುರುರಾಜ ಭಟ್, 1975, '*ಸ್ಟಡಿಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್*', ಉಡುಪಿ, ಪು. v-vi.
13. ಪಿ. ಗುರುರಾಜ ಭಟ್, '*ಅಳುಪ ವಂಶದ ಚರಿತೆ: ವಿವರವಾದ ಸಂಶೋಧನೆ ನಡೆಯದ ಬಗ್ಗೆ ವಿಷಾದ*', 'ಕನ್ನಡಪ್ರಭ', 1976.

14. ಎ. ವಿ. ನರಸಿಂಹಮೂರ್ತಿ, 1982, '*ಡಾ। ಪಿ. ಗುರುರಾಜ ಭಟ್ಸ್ ಕಾಂಟ್ರಿಬ್ಯೂಷನ್ ಟು ನ್ಯೂಮಿಸ್ಮಾಟಿಕ್ಸ್*'; 'ದ ಜರ್ನಲ್ ಆಫ್ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್, ಸಂ. 2', ಪು. 34–36.

15. ಬಿ. ವಸಂತ ಶೆಟ್ಟಿ, 1982, '*ಡಾ। ಪಿ. ಗುರುರಾಜ ಭಟ್ಸ್ ಕಾಂಟ್ರಿಬ್ಯೂಷನ್ ಟು ಎಪಿಗ್ರಾಫಿ*' 'ದ ಜರ್ನಲ್ ಆಫ್ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್, ಸಂ. 2', ಪು.27–31.

16. 'ಕೊಣಾಜೆ ಬಂಡೆ ಶಾಸನ : ಚಾರಿತ್ರಿಕ ವೈಶಿಷ್ಟ್ಯ', ಕನ್ನಡಪ್ರಭ, 9–7–1975; ಸಪ್ತಕ್ಷೇತ್ರಗಳು, ರಾಯಭಾರಿ, 10–3–1971; 'ಉದಯಪುರದಲ್ಲಿ ಎರಡು ಅಪೂರ್ವ ಶಾಸನಗಳ ಪತ್ತೆ', ನವಭಾರತ, ಮೇ 1972; 'ಉದಯಪುರದಲ್ಲಿ ಚರಿತ್ರಾರ್ಹ ಭೂಶೋಧನೆ', ಕನ್ನಡಪ್ರಭ, 21–11–1976; 'ಸಾವಿರ ವರ್ಷ ಹಿಂದಿನ ಶ್ರೇಷ್ಠ ಸಾಂಸ್ಕೃತಿಕ ಸಂಪತ್ತು'; 'ಇಂದ್ರಾಳಿಯ ಚಾರಿತ್ರಿಕ ಹಿನ್ನೆಲೆ'; 'ಮಧ್ಯಕಾಲೀನ ಚಾರಿತ್ರಿಕ ಒಪ್ಪಂದ'.

17. 'ದ ಜರ್ನಲ್ ಆಫ್ ದ ಇನ್‌ಸ್ಟಿಟ್ಯೂಟ್ ಆಫ್ ಇಚಿಡಿಯನ್ ಸ್ಟಡೀಸ್', 1979, ವಾಲ್ಯುಮ್ 2, ಅದೇ, 1982, ವಾಲ್ಯುಮ್ 2; 'ಜರ್ನಲ್ ಆಫ್ ದ ಇನ್‌ಸ್ಟಿಟ್ಯೂಟ್ ಇಂಡಿಯನ್ ಸ್ಟಡೀಸ್, ವಾಲ್ಯುಮ್ 1, 1978.

18. 'ತುಳುನಾಡೇ ತುರು(ತುಳು)ನಾಡಾಯಿತು', 'ವಿಶಿಷ್ಟವಾದ ಮೂರ್ತಿಗಳುಳ್ಳ ನಮ್ಮ ಜಿಲ್ಲೆಯ ದೇವಾಲಯಗಳು'; 'ತುಳುನಾಡಿನ ಎರಡು ಕ್ರೋಡಾಶ್ರಮಗಳು'; 'ದಕ್ಷಿಣ ಕನ್ನಡ ಜಿಲ್ಲೆಯ ಐತಿಹಾಸಿಕ ಹಿನ್ನೆಲೆ'; 'ಮಧ್ಯಕಾಲೀನ ರಾಜಕೀಯ ಒಪ್ಪಂದ'.

19. ನರಸಿಂಹ ಕೆದ್ಲಾಯ, ನಿವೃತ್ತ ಪ್ರಾಚಾರ್ಯರು, ಮಿಲಾಗ್ರಿಸ್ ಕಾಲೇಜು, ಆಗಸ್ಟ್, 28, 2009; ಪರಶುರಾಮ ಭಟ್, (ಗುರುರಾಜ ಭಟ್ಟರ ಸುಪುತ್ರ) ಕ್ಷೇತ್ರಕಾರ್ಯ ಸಂದರ್ಭದ ಛಾಯಾಚಿತ್ರಗಳನ್ನು ತೆಗೆಯುವುದರಲ್ಲಿ ಸಹಕರಿಸಿದ್ದಾರೆ ಹಾಗೂ ಕ್ಷೇತ್ರಕಾರ್ಯ ಮಾಡಿದಂತಹ ಮಾಹಿತಿಯನ್ನು ಕೂಡ ತಿಳಿಸಿರುತ್ತಾರೆ, ಆಗಸ್ಟ್ 23, 2009.

ಅಧ್ಯಾಯ –ಎರಡು

೨.೦.ಪಿ. ಗುರುರಾಜ ಭಟ್ಟರು ಹಾಗೂ ತುಳುನಾಡಿನ ಪ್ರಾಗಿತಿಹಾಸ.

೨.೧. ಪ್ರಾರಂಭದ ಪ್ರಾಗಿತಿಹಾಸಕಾರರು.

೨.೨. ತುಳುನಾಡಿನ ಪ್ರಾಗಿತಿಹಾಸದ ನೆಲೆಗಳು.

೨.೨.೧. ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಗಳು.

೨.೨.೧.೧. ಶಿಲಾಕೋಣೆಗಳು.

೨.೨.೧.೨. ಕೊರೆದ ನೆಲಗವಿಗಳು.

೨.೨.೧.೩. ಮೃತ್ಪಾತ್ರೆ ಸಮಾಧಿ.

ಪಿ. ಗುರುರಾಜ ಭಟ್ಟರು ಹಾಗೂ ತುಳುನಾಡಿನ ಪ್ರಾಗಿತಿಹಾಸ

ಪ್ರಥಮ ಬಾರಿಗೆ ಕರ್ನಾಟಕದಲ್ಲಿ ಪ್ರಾಗಿತಿಹಾಸದ ನೆಲೆಗಳನ್ನು ಶೋಧಿಸಲು ಪ್ರಾರಂಭಿಸಿದವರು ಕರ್ನಲ್ ಮೆಕೆನ್ಸಿ,[1] ರಾಬರ್ಟ್ ಕೋಲ್(1863–1873)ರವರು[2] ಎಚ್. ಕಾರ್ನ್‌ಗ್ರೀವ್ಸ್ (1861), ಟಿ. ಹೋಲ್ಡ್ ಹಾ ಹ್ಯಾಮ್ (1869), ಬರ್ಜಸ್ (1874). ಇವರು ಕೆಲವು ನೆಲೆಗಳನ್ನು ಶೋಧಿಸಿರುವ ಬಗ್ಗೆ ತಿಳಿಯುತ್ತೇವೆ. ಮೈಸೂರು ಪುರಾತತ್ವ ಇಲಾಖೆಯ ನಿರ್ದೇಶಕರಾದ ಎಂ. ಎಚ್. ಕೃಷ್ಣರವರು[3] 1926ರಿಂದ 1945ರ ವರೆಗೆ ತಾವು ಕೈಗೊಂಡ ಶೋಧನೆ, ಕೋಲಾರ, ಬೆಂಗಳೂರು, ಚಿತ್ರದುರ್ಗ, ಮೈಸೂರು ಈ ಜಿಲ್ಲೆಗಳಲ್ಲಿ ಶೋಧಿಸಿದ ಹಾಗೂ ಉತ್ಖನನ ನಡೆಸಿದ ವಿವರಣೆಗಳನ್ನು ನೀಡಿದ್ದಾರೆ. ಇದೇ ರೀತಿ ಕರ್ನಾಟಕದ ಹೈದ್ರಾಬಾದ್ ನಿಝಾಮರ ಪ್ರದೇಶಗಳಲ್ಲಿಯೂ ಇಂತಹ ಕ್ಷೇತ್ರಕಾರ್ಯ ನಡೆಸಿದ್ದು, ಮೆಡಾಸ್ ಟೇಲರ್[4] ಅವರ ಶೋಧನೆ ಹಾಗೂ ಅನಂತರದಲ್ಲಿ ಹೈದ್ರಾಬಾದ್ ಪುರಾತತ್ವ ಇಲಾಖೆಯ ಶೋಧಕರಾದ ಲಿಯಾನಾರ್ಡ್ ಮನ್, ಇ. ಎಚ್. ಹಂಟ್, ಕೃಷ್ಣಮೂರ್ತಿ,[5] ಕೆ. ಎಂ. ಅಹಮದ್ ಮತ್ತು ಗುಲಾಂ ಎಸ್. ದಾನಿ ನಡೆಸಿದ ಕ್ಷೇತ್ರಕಾರ್ಯ ಈ ನಿಟ್ಟಿನಲ್ಲಿ ಮಹತ್ವದ್ದಾಗಿದೆ. ಮಸ್ಕಿ ಉತ್ಖನನವು ಕೂಡಾ ಬೃಹತ್ ಶಿಲಾ ಸಂಸ್ಕೃತಿಯ ಅಧ್ಯಯನಕ್ಕೆ ಅತ್ಯಂತ ಪೂರಕವಾದ ನೆಲೆಯಾಗಿದೆ.

ಬಿ. ಕೆ. ಗುರುರಾಜ್[6] ಮತ್ತು ಸಿ. ಕೃಷ್ಣಮೂರ್ತಿಯವರು[7] ಸರ್ವೇಕ್ಷಣೆಯನ್ನು ಕೈಗೊಂಡು ಹಲವಾರು ನೆಲೆಗಳ ಶೋಧ ಮತ್ತು ಸಣ್ಣ ಪ್ರಮಾಣದ ಉತ್ಖನನವನ್ನು ನಡೆಸಿರುವರು. ಅ. ಸುಂದರ[8] ಅವರು ಉತ್ತರಕರ್ನಾಟಕದ ಬೃಹತ್ ಶಿಲಾಯುಗದ ಸಂಸ್ಕೃತಿಯ ವೈಶಿಷ್ಟ್ಯವನ್ನು ತಮ್ಮ ಮೊನೊಗ್ರಾಫ್ The Early chamber tombs of South India (1972)ನಲ್ಲಿ ತಿಳಿಸಿರುವರು. ಕೆ. ಕೆ. ಸುಬ್ಬಯ್ಯ[9] ಇವರು ಕೊಡಗು ಜಿಲ್ಲೆಯ ಬೃಹತ್ ಶಿಲಾಸಂಸ್ಕೃತಿಗಳ ಹಲವು ನೆಲೆಗಳನ್ನು ಪ್ರಮುಖವಾಗಿ ಸೋಮವಾರಪೇಟೆ ತಾಲೂಕಿನಲ್ಲಿ ಗುರುತಿಸಿರುವರು.

ಆರ್. ಎಂ. ಷಡಕ್ಷರಯ್ಯ[10] ಇವರು ಬೀದರ್ ಪ್ರದೇಶದ ಮಾಂಜ್ರಾ ಮತ್ತು ಕಾರಂಜಿ ನದಿ ಪ್ರದೇಶದಲ್ಲಿ ಕ್ಷೇತ್ರಕಾರ್ಯ ನಡೆಸಿ ಹಲವು ಬೃಹತ್ ಶಿಲಾಯುಗದ ಗೋರಿಗಳನ್ನು ಬೆಳಕಿಗೆ ತಂದಿರುವರು. ಕೆ. ಪಿ. ಪೂಣಚ್ಚ[11] ಅವರು ಉತ್ಖನನವನ್ನು ನಡೆಸಿ ಬೃಹತ್ ಶಿಲಾಯುಗ ಸಂಸ್ಕೃತಿಯ ಹೆಚ್ಚಿನ ವಿವರಗಳನ್ನು ನೀಡಿರುವರು. ತುಮಕೂರು ಜಿಲ್ಲಾ ಪ್ರದೇಶದ ಪೆನ್ನಾರ್, ಶಿಂಶ ನದಿಬಯಲಿನಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಕೆ. ಬಿ. ಶಿವತಾರಕ್[12] ಅವರು ಹಲವು ಬೃಹತ್ ಶಿಲಾಯುಗದ ವಾಸ್ತವ್ಯ ಮತ್ತು ಗೋರಿ ನೆಲೆಗಳನ್ನು ಶೋಧಿಸಿರುವರು.

ಕರ್ನಾಟಕದಲ್ಲಿ ಇತಿಹಾಸಪೂರ್ವ ಸಂಸ್ಕೃತಿಗಳ ಅಧ್ಯಯನ ಸುಮಾರು ನೂರು ವರ್ಷಗಳ ಹಿಂದೆಯೇ ಪ್ರಾರಂಭವಾಗಿದ್ದರೂ ಕೂಡ ಕರ್ನಾಟಕದ ಕರಾವಳಿಯ ತುಳುನಾಡಿನಲ್ಲಿ ಇತ್ತೀಚಿನ

ವರೆಗೂ ಶೋಧನೆಗಳು ಆಗಿರಲಿಲ್ಲ. ಇದು ವಿಷಾದನೀಯವೇ ಸರಿ. ತುಳುನಾಡಿನ ಇತಿಹಾಸವನ್ನು ಕುರಿತಂತೆ ಪ್ರಕಟವಾಗಿರುವ ಕೃತಿಗಳೆಲ್ಲವೂ ಕ್ರಿ. ಶ. 1–2 ಶತಮಾನದಿಂದಷ್ಟೇ ಆರಂಭವೆಂದು ಪುಂಡಿಕಾಯಿ ಗಣಪಯ್ಯ ಭಟ್[13] ತಿಳಿಸಿರುವರು. ಅವರು ತಮ್ಮ ಗ್ರಂಥದಲ್ಲಿ ಎಲ್ಲಾ ರೀತಿಯ ಕೊರತೆಯನ್ನು ಮನಗಂಡ ವಿದ್ವಾಂಸರು "ಪುರಾತತ್ವ ಸಂಶೋಧನ ಸಲಿಕೆಯು ತುಳುನಾಡಿನ ಮಣ್ಣನ್ನು ಈ ತನಕ ಅಗೆದಿಲ್ಲವೆಂಬುದು ವಿಷಾದನೀಯವೇ ಸರಿ" ಎಂದು ವ್ಯಕ್ತಪಡಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನರ ಸಾಂಸ್ಕೃತಿಕ ಅವಶೇಷಗಳು ಎರಡು ರೀತಿಗಳಲ್ಲಿ ಮಹತ್ವದ್ದಾಗಿವೆ. ಮೊದಲನೆಯದಾಗಿ, ಬೃಹತ್ ಶಿಲಾ ಸಂಸ್ಕೃತಿಯ ನಿರ್ಮಿತಿಗಳು ಹಲವು ವಿಧವಾಗಿದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ರೀತಿಯಾಗಿ ಕಂಡುಬಂದಿವೆ:

1. ಶಿಲಾ (ಕಂಡಿ) ಕೋಣೆಗಳು : Port-hole chambers

2. ಕೊರೆದ ನೆಲಗವಿಗಳು ಅಥವಾ ಗುಹಾಸಮಾಧಿ – Rock cut caves.

3. ಮೃತ್ಪಾತ್ರೆ ಸಮಾಧಿ ಅಥವಾ ಅಸ್ಥಿಪಾತ್ರೆ ದಫನಗಳು[14] – Urn burials.

ಬೃಹತ್ ಶಿಲಾ ಸಂಸ್ಕೃತಿಯ ನಿರ್ಮಿತಿಗಳಲ್ಲಿ ಕಂಡುಬಂದಿರುವ ಪ್ರಾಗಿತಿಹಾಸದ ನೆಲೆಗಳನ್ನು ಭಟ್ಟರು ಗುರುತಿಸಿದ್ದಾರೆ. ಅಂತಹವುಗಳಲ್ಲಿ ಕೆಲವೊಂದನ್ನು ಇಲ್ಲಿ ಕಾಣಬಹುದು:

1. ಶಿಲಾಕೋಣೆ : ೧ ಬೇಳೂರು (ಕುಂದಾಪುರ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ)

೨. ಬಡಕಜೆಕಾರು (ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ)

2. ಗುಹಾಸಮಾಧಿ : ೧. ಬೊಮ್ಮರಬೆಟ್ಟು (ಇದಕ್ಕೆ ಬ್ರಹ್ಮಗಿರಿ ಅಥವಾ ಮೂಡನಿಡಂಬೂರು ಎಂದೂ ಹೆಸರಿದೆ. ಉಡುಪಿ ತಾಲೂಕು.)

3. ಮೃತ್‌ಪಾತ್ರೆ ಸಮಾಧಿ : ೧. ಬೇಳೂರು (ಕುಂದಾಪುರ ತಾಲೂಕು ದ. ಕ. ಜಿಲ್ಲೆ)

೨. ಬಡಕಜೆಕಾರು (ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ)

೩. ಪುತ್ತೂರು[15] (ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ)

ಗುರುರಾಜ ಭಟ್ಟರ ಹಲವು ವರ್ಷಗಳ ಶೋಧನೆಯ ಪ್ರಯತ್ನದಿಂದಾಗಿ ಇತಿಹಾಸ ಕಾಲದ ನಿವೇಶನಗಳಷ್ಟೇ ಅಲ್ಲದೆ, ಪ್ರಾಗಿತಿಹಾಸಕಾಲದ ಮಹತ್ವದ ನೆಲೆಗಳು ಬೆಳಕಿಗೆ ಬಂದಿವೆ. ಇಂತಹ ಸಂದರ್ಭಗಳಲ್ಲಿ ಭಟ್ಟರಿಗೆ ಸಹಾಯ ಮಾಡಿದಂತಹ ಅ. ಸುಂದರ[16] ಅವರಿಗೂ ಕೂಡ ಪುರಾತತ್ವ ಅನ್ವೇಷಣೆಗಳಲ್ಲಿ ಇಂತಹ ಹಲವಾರು ಪ್ರಮುಖವಾದ ನೆಲೆಗಳು ದೊರೆತಿವೆ. ಇವುಗಳೆಲ್ಲವೂ ಶಿಲಾಯುಗದ ಕೊನೆಯ ಹಂತವಾದ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದವುಗಳಾಗಿವೆ. ಇದರಿಂದಾಗಿ, ಇತಿಹಾಸಪೂರ್ವಕಾಲದ ಬಗೆಗೆ ಮಾಹಿತಿ ಯನ್ನು ಪಡೆದುಕೊಳ್ಳಲು ಮತ್ತು

ಇತಿಹಾಸದ ಪುನಾರಚನೆಗೆ ಹಾಗೂ ಆ ಕಾಲದ ಮಾನವರ ಸಾಂಸ್ಕೃತಿಕಜೀವನದ ಕುರಿತಾಗಿ ಹೆಚ್ಚಿನ ವಿವರಗಳನ್ನು ತಿಳಿಯಲು ಸಹಕಾರಿಯಾಗಿದೆ.

ಗುರುರಾಜ ಭಟ್ಟರಿಗಿಂತ ಹಿಂದಿನ ಇತಿಹಾಸಕಾರರಾದ ಶೀನಪ್ಪ ಹೆಗಡೆ, ಗಣಪತಿ ರಾವ್ ಐಗಳರವರು ಬಿ. ಎ. ಸಾಲೆತ್ತೂರು, ಕೆ. ವಿ. ರಮೇಶ್[17] ಅವರು ಪ್ರಾಗಿತಿಹಾಸದ ಅನ್ವೇಷಣೆಯಲ್ಲಿ ಮೌನವಹಿಸಿದ್ದರು.

ಪ್ರಾಗಿತಿಹಾಸದ ನೆಲೆಗಳು

ಕರ್ನಾಟಕದ ಪಶ್ಚಿಮ ಕರಾವಳಿಯ ದಕ್ಷಿಣ ಭಾಗದಲ್ಲಿ ಅಂದರೆ ತುಳುನಾಡಿನಲ್ಲಿ ಪ್ರಾಗಿತಿಹಾಸದ ಅವಶೇಷಗಳು ಅದರಲ್ಲೂ ಬೃಹತ್‌ಶಿಲಾ ಸಂಸ್ಕೃತಿಯ ನೆಲೆಗಳು ದೊರಕುತ್ತವೆ ಎಂಬುದನ್ನು ಯಾರೂ ಗಮನಿಸಿರಲಿಲ್ಲ. ಹಾಗೂ ಇಂತಹ ನೆಲೆಗಳು ಸಿಗುತ್ತವೆ ಎಂಬುದನ್ನು ಊಹಿಸಲೂ ಅಸಾಧ್ಯವಾಗಿತ್ತು. ಏಕೆಂದರೆ ಇತಿಹಾಸದ ರಚನೆಯಲ್ಲಿ ಆಕರ ಸಾಮಗ್ರಿಗಳು ಎಷ್ಟು ಪ್ರಾಮುಖ್ಯವನ್ನು ವಹಿಸುತ್ತವೆಯೋ ಹಾಗೆಯೇ ಪ್ರಾಗಿತಿಹಾಸದ ಸಂಸ್ಕೃತಿಯ ನೆಲೆಗಳು ಅಷ್ಟೇ ಪ್ರಮುಖವಾಗಿವೆ. ಇವು ಜನರ ಜೀವನಶೈಲಿ, ಆಚರಣೆ ಇವುಗಳ ಬಗೆಗೆ ತಿಳಿಯಲು ಸಹಾಯಕವಾಗಿವೆ. ತುಳುನಾಡಿನ ಇತಿಹಾಸ ಮೂರು–ನಾಲ್ಕನೇ ಶತಮಾನಗಳಿಂದ ಪ್ರಾರಂಭವಾಯಿತೆಂದು ಶಾಸನಗಳಿಂದ ತಿಳಿಯುತ್ತವೆ. ಭಟ್ಟರ ಸತತ ಪರಿಶ್ರಮದ ಫಲಶ್ರುತಿಯಾಗಿ ತುಳುನಾಡಿನಲ್ಲಿ ಪ್ರಾಗೈತಿಹಾಸಿಕ ಕಾಲದ ಮಹತ್ತ್ವದ ಸ್ಥಳಗಳು ಬೆಳಕಿಗೆ ಬಂದಿವೆ. ಈ ಸಂಶೋಧನೆಯಿಂದ ತುಳುನಾಡಿನ ಇತಿಹಾಸವು ಕ್ರಿ. ಶ. ಒಂದನೇ ಶತಮಾನದಷ್ಟು ಹಿಂದೆಕ್ಕೆಳಿಯಬಹುದು ಎಂಬುದು ಚರಿತ್ರಕಾರರ ಅನಿಸಿಕೆಯಾಗಿದೆ.[18] ಪ್ರಾಚೀನ ನೆಲೆಗಳ ಬಗ್ಗೆ ಅಧ್ಯಯನಮಾಡುವಾಗ ಕಾಲಮಾನದ ಆಧಾರದ ಮೇಲೆ ಎರಡು ಭಾಗಗಳಾಗಿ ಮಾಡಲಾಗಿದೆ. 1. ಬೃಹತ್ ಶಿಲಾಸಂಸ್ಕೃತಿ ನೆಲೆಗಳು 2. ಇತಿಹಾಸ ಪ್ರಾರಂಭ ಕಾಲದ ನೆಲೆಗಳು.[19]

ಈ ಬೃಹತ್ ಶಿಲಾಸಂಸ್ಕೃತಿಗೆ ಸಂಬಂಧಪಟ್ಟಂತೆ ಪುತ್ತೂರಿನಲ್ಲಿ ಬೀರಮಲೆ[20] ಎಂಬ ಮುರಕಲ್ಲಿನ ಗುಡ್ಡದಲ್ಲಿ ಅನಿರೀಕ್ಷಿತವಾಗಿ ಮಣ್ಣಿನ ಏಳು ಗುಡಾಣಗಳು ಸಿಕ್ಕಿದವು. ಭಟ್ಟರು ಈ ವಿಷಯವನ್ನು ಹೆಸರಾಂತ ಕನ್ನಡ ಕಾದಂಬರಿಕಾರ ಶಿವರಾಮ ಕಾರಂತರವರಿಗೆ ತಿಳಿಸಿದರು. ಅನಂತರ ಕಾರಂತರು ಧಾರವಾಡಕ್ಕೆ ಅ. ಸುಂದರ ಅವರನ್ನು ಭೇಟಿ ಮಾಡಲು ಹೋದಾಗ ಭಟ್ಟರು ಒದಗಿಸಿದ ವಸ್ತುಗಳ ಅವಶೇಷಗಳನ್ನು ತೋರಿಸಿ ಅವುಗಳ ಬಗೆಗೆ ಪ್ರಸ್ತಾವಿಸಿದರು. ಶಿವರಾಮ ಕಾರಂತರ ಜೊತೆಗೂಡಿ ಅ.ಸುಂದರ ಅವರು ಸಪ್ಟಂಬರ್ 2, 1970ರಲ್ಲಿ ಸ್ಥಳಕ್ಕೆ ಭೇಟಿಕೊಟ್ಟು ಪರಿಶೀಲಿಸಿದಾಗ ಅದನ್ನು ಬೃಹತ್ ಶಿಲಾಸಂಸ್ಕೃತಿಗೆ ಸೇರಿದವು[21] ಎಂದು ಅಲ್ಲಿಯ ಜನರ ಸಾಂಸ್ಕೃತಿಕ ಜೀವನಶೈಲಿಯ ಮೇಲೆ ಬೆಳಕುಚೆಲ್ಲುತ್ತದೆ. ಇದೇ ರೀತಿಯ ಅವಶೇಷಗಳು, ಮೃತ ಸಮಾಧಿಗಳು ಕೇರಳದ ಪೊರ್ಕೊಳಂನಲ್ಲಿ[22], ಜಡಿಗೇನಹಳ್ಳಿ (ಬೆಂಗಳೂರು ಜಿಲ್ಲೆ), ಬ್ರಹ್ಮಗಿರಿ (ಚಿತ್ರದುರ್ಗ ಜಿಲ್ಲೆ) ಕಲ್ಲುಗಳ ಕಲ್ಗೋರಿಗಳು ಪುತ್ತೂರಿನಲ್ಲಿ ದೊರೆತಿರುವ ಪಾತ್ರೆಗಳಿಗೆ ಸ್ಥೂಲವಾಗಿ ಹೋಲುತ್ತಿತ್ತು. (ಹಾಗೆಯೇ ಬಾರಕೂರಿನಲ್ಲಿ ಮಹಾಲಿಂಗೇಶ್ವರ ದೇವಾಲಯದ

ಪಶ್ಚಿಮಕ್ಕೆ ಮತ್ತೊಂದು ನೆಲೆಯಿಂದ ಈ ಮೃತ್ಪಾತ್ರೆಗಳು ದೊರೆತಿವೆ. ಇಲ್ಲಿ ದೊರೆತಿರುವ ಅವಶೇಷಗಳು ಬೃಹತ್ ಶಿಲಾಸಂಸ್ಕೃತಿಯ ನೆಲೆಗಳಿಗೆ ಪೂರಕವಾಗಿವೆ ಎಂದು ತಿಳಿಸಿದ್ದಾರೆ. ಈ ಅನ್ವೇಷಣೆಯಿಂದಾಗಿ ತುಳುನಾಡಿನ ಚರಿತ್ರೆಯ ಪ್ರಾಚೀನತೆಯ ಸ್ವರೂಪವೇ ಬದಲಾಯಿತು. ಈ ಕಾಲಕ್ಕೆ ಸಂಬಂಧಿಸಿದಂತೆ, ಬಾರಕೂರು, ಬಸ್ರೂರು ಹಾಗೂ ಉದ್ಯಾವರಗಳಲ್ಲಿ ದೊರಕಿದ ಮಡಕೆ ಚೂರುಗಳ ಆಧಾರದ ಮೇಲೆ ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ಜಾಗದಲ್ಲಿ ಉತ್ಖನನವಾಗಬೇಕಿದೆ ಎಂದು ಗುರುರಾಜ ಭಟ್ಟರು ಅಭಿಪ್ರಾಯಪಟ್ಟಿದ್ದಾರೆ. ಹಾಗೆಯೇ ಈ ಮೃತ್ಪಾತ್ರೆಗಳ ಆಕಾರ, ಬಣ್ಣ, ರಚನೆಗಳೆಲ್ಲವೂ ಕೂಡಾ ದಕ್ಷಿಣ ಭಾರತದ ಬೃಹತ್ ಶಿಲಾಸಂಸ್ಕೃತಿಯ ಪಾತ್ರೆಗಳನ್ನು ಹೋಲುತ್ತವೆ[23] ಎಂದಿದ್ದಾರೆ.

ಬಡಕಜೆಕಾರು[24] ಇಂದಿನ ಬೆಳ್ತಂಗಡಿ ತಾಲೂಕಿಗೆ ಸೇರಿದುದಾಗಿದೆ. ಭಟ್ಟರು ಪ್ರಥಮ ಬಾರಿಗೆ ತಮ್ಮ ಶೋಧನೆಯ ಫಲವಾಗಿ ಈ ಪ್ರದೇಶವನ್ನು ಬೆಳಕಿಗೆ ತಂದಿದ್ದಾರೆ. ಇದರ ಪ್ರಾಮುಖ್ಯತೆಯ ಬಗ್ಗೆ ತಿಳಿಯುವಾಗ ದಕ್ಷಿಣ ಭಾಗದಲ್ಲಿ ಸುಮಾರು 30 ಕಲ್ಗೋರಿ ಅವಶೇಷಗಳು ಅಲ್ಲಲ್ಲಿ ಸಿಕ್ಕಿವೆ. ಸ್ಥಳೀಯರು ಇದಕ್ಕೆ 'ಪಾಂಡವರ ಕಲ್ಲು'[25] ಎಂದು ಕರೆಯುವುದು ವಿಶೇಷವಾಗಿದೆ. ಶೋಧನೆಯ ಅನಂತರ ಇದನ್ನು ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ್ದು ಎಂದು ಪರಿಗಣಿಸಲಾಗಿದೆ. ಈ ಸ್ಥಳಕ್ಕೆ ಅನಂತರದಲ್ಲಿ ಅ.ಸುಂದರ ಅವರು ಬಂದು ಪರಿಶೀಲಿಸಿದ್ದರು. ಜೊತೆಗೆ ಇದಕ್ಕೆ ಹೋಲಿಕೆಯಾಗುವಂತೆ, ಬೆಳುವನಕೂಡಿಗೆ ಮತ್ತು ಅರೆಹಳ್ಳಿ, ಶಿವಮೊಗ್ಗ ಜಿಲ್ಲೆ ಈ ಪ್ರದೇಶಗಳಲ್ಲು ಕೂಡ ದೊರಕಿವೆ.[26]

ಪಾಂಡವರಕಲ್ಲು ಎಂದೇ ಹೆಸರಾಗಿರುವ ಈ ಬೃಹತ್ ಶಿಲಾ ಸಂಸ್ಕೃತಿಗೆ ಸೇರಿದ ಕಲ್ಗೋರಿಗಳು ನೆಟ್ಟಗೆ ನಿಲ್ಲಿಸಿದ ನಾಲ್ಕು ಚಪ್ಪಟೆಯಾದ ದೊಡ್ಡ ದೊಡ್ಡ ಕಲ್ಲುಹಲಗೆಗಳಿಂದ ಮಾಡಿದ ಒಂದು ಕೋಣೆಯಾಕೃತಿಯಲ್ಲಿ ಇವುಗಳ ಮೇಲೆ ಅಗಲವಾದ ಕಲ್ಲುಹಲಗೆಯನ್ನು ಹೊರಿಸಲಾಗಿರುತ್ತದೆ. ಈ ನೆಟ್ಟಗೆ ನಿಲ್ಲಿಸಿದ ಯಾವುದಾದರೂ ಒಂದು ಕಲ್ಲಿನ ಹಲಗೆಯಲ್ಲಿ ತೂತು ಉತ್ತರ ಅಥವಾ ವಾಯವ್ಯ ಸ್ವಲ್ಪ ಹೆಚ್ಚುಕಡಿಮೆ ಪಶ್ಚಿಮಾಭಿಮುಖವಾಗಿಯೂ ಇರುತ್ತದೆ[27].

ಈ ಶಿಲಾಕೋಣೆಗೆ ಪೂರಕ ಎಂಬಂತೆ ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯ ಪಳನಿ[28] ಕೊಡಗಿನ ವೀರರಾಜೇಂದ್ರಪೇಟೆಯಲ್ಲಿ[29] ಹಾಗೂ ಮೈಸೂರು ಜಿಲ್ಲೆಯ ಹೆಗ್ಗಡೆದೇವನಕೋಟೆ ಪ್ರದೇಶಗಳಿಗೆ ಸಂಪೂರ್ಣವಾಗಿ ಹೋಲುತ್ತವೆ. ಇತ್ತೀಚಿನ ಸಂಶೋಧನೆಗಳಲ್ಲಿ[30] ಗೋಚರವಾದ ಕೆಲವು ಕಲ್ಗೋರಿಗಳು ಕಜೆಕಾರು ಗ್ರಾಮದಲ್ಲಿಯ ಕಲ್ಗೋರಿಗಳನ್ನು ಹೋಲುತ್ತವೆ. ಉತ್ತರ ಕನ್ನಡ ಜಿಲ್ಲೆಯ ಉತ್ತರಕ್ಕೆ ಹಲಶಿ(ಬಾನಪುರ ತಾ. ಬೆಳಗಾಂ ಜಿಲ್ಲೆ)ಯಲ್ಲಿ ಕಲ್ಗೋರಿ ಅವಶೇಷಗಳು ದೊರೆತಿವೆ. ಉತ್ತರ ಮತ್ತು ದಕ್ಷಿಣ ಕನ್ನಡಗಳ ತೀರ ಮತ್ತು ಘಟ್ಟ ಪ್ರದೇಶಗಳಲ್ಲಿ ಇಂಥ ಅವಶೇಷಗಳು ಅಲ್ಲಲ್ಲಿ ಇವೆ ಎಂಬುದು ತಿಳಿದಿದೆ. ಈ ತರದ ಕಲ್ಮನೆಗಳು ಅಣ್ಣಾಮಲೈ ಪ್ರದೇಶದಲ್ಲಿಯ ಕಲ್ಗೋರಿಗಳೊಡನೆ ಇವೆ[31]. ಹಾಗೆಯೇ ಬೆಂಗಳೂರಿನಲ್ಲಿಯೂ ಈ ತರಹದ ಕಲ್ಗೋರಿ ಅವಶೇಷಗಳನ್ನು ಕಾಣಬಹುದು. ಇಲ್ಲಿ ಚಂತಾಡಿ ಎಂಬ ಸರ್ಕಾರಿ ಪ್ರಾಥಮಿಕ

ಶಾಲೆಯ ಬಳಿ ಹುಣಸೆಮಕ್ಕಿಯಲ್ಲಿ ಅವಶೇಷಗಳು ದೊರೆತಿವೆ. ಇಲ್ಲಿಯ ಸ್ಥಳೀಯರು ಇದನ್ನು 'ತೂತುಕಲ್ಲು' ಎಂದು ಗುರುತಿಸಿದ್ದಾರೆ. ಅಲ್ಲಲ್ಲಿ ನಾನಾ ವಿಧದ ಮೃತ್ಪಾತ್ರೆ ಚೂರುಗಳು ಸಿಕ್ಕಿವೆ. ಮತ್ತೊಂದು ವಿಶೇಷವೆಂದರೆ ಎರಡು ಬಗೆಯ ಮೃತ್ಪಾತ್ರೆಗಳು ದೊರಕಿವೆ. ಒಂದು ಕಪ್ಪು-ಕೆಂಪು ಬಣ್ಣದ್ದು ಮತ್ತೊಂದು ಕೆಂಪು ಬಣ್ಣದ್ದು. ಮತ್ತೊಂದು ವಿಶೇಷ ಸಂಗತಿ ಎಂದರೆ, ಇಲ್ಲಿ ಶವಕುಣಿಗಳಿದ್ದವು[32] (Pit-burials). ಕಾಲುವೆಗಳ ನಿರ್ಮಾಣ ಸಮಯದಲ್ಲಿ ಅವು ಹಾಳಾಗಿರಬಹುದು.

ಗುಹಾಸಮಾಧಿಗೆ ಸಂಬಂಧಪಟ್ಟಂತೆ ಗುರುರಾಜ ಭಟ್ಟರು ತುಳುನಾಡಿನ ವಿವಿಧ ಪ್ರದೇಶಗಳಲ್ಲಿ ಆವಿಷ್ಕಾರ ಮಾಡಿದ್ದಾರೆ. ಮೂಡನಿಡಂಬೂರಿನ[33] (ಬೊಮ್ಮರಬೆಟ್ಟು) -ಉಡುಪಿ ತಾಲೂಕಿನಲ್ಲಿ ಗುಹಾ ಸಮಾಧಿಗೆ ಸಂಬಂಧಿಸಿದಂತಹ ಮೃತ್ಪಾತ್ರೆ ಅವಶೇಷಗಳನ್ನು ಭಟ್ಟರು ಪ್ರಥಮಬಾರಿಗೆ ಕಂಡುಹಿಡಿದಿದ್ದಾರೆ. ಇದಕ್ಕೆ ಉಡುಪಿ ನಗರ ಹೊರವಲಯದ ಒಂದು ಭಾಗವಾದ 'ಬೊಮ್ಮರಬೆಟ್ಟು' ಅಥವಾ 'ಬ್ರಹ್ಮಗಿರಿ' ಎಂದು ಹೆಸರಿದೆ. ಕೆಲವು ವರ್ಷಗಳ ಹಿಂದೆ ಶ್ರೀ ಕೆ.ಎಲ್. ರಾವ್ (ಫೀಲ್ಡ್ ಆಫೀಸರ್, ಜೀವವಿಮಾ ಸಂಸ್ಥೆ) ಅವರ ಮನೆಯ ಹಿಂಭಾಗದಲ್ಲಿ ಕೆಲಸಗಾರರು ಮುರಕಲ್ಲಿನ ಭೂಮಿಯನ್ನು ಅಗೆಯುತ್ತಿರುವಾಗ ಆಳದಲ್ಲಿ ಆಕಸ್ಮಿಕವಾಗಿ ಒಂದು ಗವಿ ಸಿಕ್ಕಿತು. ಇದರಿಂದ ಗಾಬರಿಗೊಂಡ ಮನೆಯವರು ಕೆಲಸವನ್ನು ಅಲ್ಲಿಗೆ ನಿಲ್ಲಿಸಿದರು. ಒಂದು ವರ್ಷದನಂತರ ಈ ವಿಷಯ ಗುರುರಾಜ ಭಟ್ಟರ ಕಿವಿಗೆ ಬಿತ್ತು. ಅನಂತರ ಭಟ್ಟರು ತಮ್ಮ ವಿದ್ಯಾರ್ಥಿಗಳೊಡನೆ 6-20-1972ರಲ್ಲಿ ಆ ಸ್ಥಳಕ್ಕೆ ಹೋಗಿ ಗವಿಯನ್ನು ಪರಿಶೀಲಿಸಿ ಅಲ್ಲಿ ಸಿಕ್ಕ ಕೆಲವು ಸಣ್ಣಪುಟ್ಟ ಮಣ್ಣಿನ ಪಾತ್ರೆಗಳ ಚೂರುಗಳನ್ನು ತಮ್ಮ ಕಾಲೇಜಿನ ವಸ್ತುಸಂಗ್ರಹಾಲಯದಲ್ಲಿ ಇಟ್ಟರು. ಇದೇ ಸಮಯದಲ್ಲಿ, ಮೇ 1974ರ ವೇಳೆಯಲ್ಲಿ ಅ.ಸುಂದರ ಅವರು ಅನ್ವೇಷಣೆ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಭಟ್ಟರು ಮಡಿಕೆ ಚೂರುಗಳನ್ನು ತೋರಿಸಿದರು. ಅನಂತರ ಸ್ಥಳಕ್ಕೆ ಭೇಟಿಕೊಟ್ಟು ಪರಿಶೀಲಿಸಿದಾಗ ಇದರಿಂದ ತಿಳಿದ ವಿಷಯವೆಂದರೆ, ಗುಹಾಸಮಾಧಿ ಅಥವಾ ಬೃಹತ್ ಶಿಲಾಸಂಸ್ಕೃತಿಯ ಕೋಣೆ ಗೋರಿಯಾಗಿದೆ ಎಂದು ತಿಳಿಸಿದರು[34]. ಈ ರೀತಿಯ ಕೊರೆದು ಮಾಡಿದ ಕೋಣೆ ಗೋರಿಗಳು ಕೇರಳದ ಮಲಬಾರ್[35] ಪ್ರದೇಶದ ಮುರಕಲ್ಲುಮಯ ಭೂಮಿಯಲ್ಲಿ ಹಲವೆಡೆ 10-12 (ಒಂದೊಂದು ಎಡೆಯಲ್ಲಿ) ಸಿಕ್ಕಿವೆ. ಈ ಗುಹಾಸಮಾಧಿಗೆ ಸ್ಥೂಲವಾಗಿ ಹೋಲುವಂತಹ ಕೆಲವು ಸಂಶೋಧನ ನೆಲೆಗಳು ಇತ್ತೀಚೆಗೆ ಕಂಡುಬಂದಿವೆ. ಉಡುಪಿಯಿಂದ 4-5 ಕಿ.ಮೀ. ದೂರದಲ್ಲಿರುವ ಹಳ್ಳಿಯಲ್ಲಿ ಇಂತಹ ಗುಹೆಗಳಿವೆ. ಹಾಗೆಯಲ್ಲಿ 1975 ಜೂನ್ ತಿಂಗಳಿನಲ್ಲಿ ಉಡುಪಿ ತಾಲೂಕಿನ ಸಾಂತೂರಿನಲ್ಲಿ ಈ ತರಹದ ಗವಿಗಳನ್ನು ಭಟ್ಟರು ಶೋಧಿಸಿದ್ದಾರೆ. ಅಲ್ಲದೇ ಹಿರಿಯಡ್ಕ[36] ಪ್ರದೇಶದಲ್ಲಿಯೂ ಕೂಡ ಸುಮಾರು 20 ಗವಿಗಳು ಇದಕ್ಕೆ ಪೂರಕವಾಗಿ ಕಂಡುಬಂದಿವೆ[37].

ಆದರೆ ಈ ತರಹದ ಗುಹಾಸಮಾಧಿಗಳು ಕರ್ನಾಟಕದಲ್ಲಿಯೇ ಪ್ರಥಮ ಬಾರಿಗೆ ದೊರೆತಿವೆ. ಇಷ್ಟರತನಕ ಇಂತಹ ಅವಶೇಷಗಳು ಕರ್ನಾಟಕದಲ್ಲಿಯೇ[38] ಲಭ್ಯವಿರಲಿಲ್ಲ. ಈ ಗುಹೆಯ ಒಳಗೆ ಗೋಡೆಯ ಮೇಲೆ ಏನನ್ನೂ ಬರೆಯಲಾಗಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನ ವಡ್ಡರಸೆ ಎಂಬ ಗ್ರಾಮದಲ್ಲಿ ಕೂಡಾ ಬೃಹತ್ ಶಿಲಾ ಸಂಸ್ಕೃತಿಯ ಕಲ್ಗೋರಿಗಳ ಅವಶೇಷಗಳು ಅಥವಾ ಮೃತ್ಪಾತ್ರೆ ಚೂರುಗಳು ಸಿಕ್ಕಿವೆ. ಬಡಕಜೆಕಾರಿನ ಮೃತ್ಪಾತ್ರೆಗಳಿಗೆ ಪೂರಕವಾಗಿವೆ. ಅ. ಸುಂದರ ಅವರು ಮೇ 1974, ಬೃಹತ್ ಶಿಲಾಸಂಸ್ಕೃತಿಯ ಕಲ್ಗೋರಿಗೆ ಸಂಬಂಧಿಸಿದ್ದೆಂದು ತಿಳಿಸಿದರು. ಸ್ಥಳೀಯರು ಇದನ್ನು 'ಭೂತಕಲ್ಲು' ಎಂದು ಕರೆದಿದ್ದಾರೆ[39].

ಹಾಗೆಯೇ ಕುಂದಾಪುರ ತಾಲೂಕಿನ ಬೇಳೂರಿನಲ್ಲಿ[40] ಬೃಹತ್ ಶಿಲಾಸಂಸ್ಕೃತಿ (ಮೆಗಾಲಿತಿಕ್ ಕಲ್ಚರ್)ಗೆ ಸಂಬಂಧಪಟ್ಟ ಅವಶೇಷಗಳು ಭಟ್ಟರಿಗೆ ದೊರೆತಿವೆ. ಇವು ಬಡಕಜೆಕಾರಿನಲ್ಲಿ ದೊರೆತಿರುವ ಅವಶೇಷಗಳಿಗೆ ಹೋಲುತ್ತಿವೆ ಎಂದು 1973ರಲ್ಲಿ ಭಟ್ಟರು ತಿಳಿಸಿದ್ದಾರೆ. ಸುಂದರ ಅವರು ಬೇಳೂರಿನ ಈ ಅವಶೇಷಗಳನ್ನು, ಬೃಹತ್ ಶಿಲಾಯುಗದ ಸಮಾಧಿ ಎಂದು ಕರೆದಿದ್ದಾರೆ.

ಅನಂತರ ಈ ಸ್ಥಳವನ್ನು 1974 ಮೇ ತಿಂಗಳಿನಲ್ಲಿ ಅ.ಸುಂದರ ಅವರು ಪರಿಶೀಲನೆ ನಡೆಸಿದನಂತರ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ ಸಮಾಧಿ ಎಂದಿದ್ದಾರೆ. ಅಲ್ಲದೆ ಜನ ಇದನ್ನು 'ತೂತುಕಲ್ಲು' ಎಂದು ತಿಳಿಸಿದ್ದಾರೆ. ಭಟ್ಟರು ವಿಷ್ಣುಮೂರ್ತಿ ದೇವಾಲಯದ ಸಂಶೋಧನೆಗೆ ಹೋದಾಗ ಅದರ ಪಕ್ಕದಲ್ಲಿಯೇ ಮೂರು ಶಿಲೆಗಳು ಸಿಕ್ಕಿವೆ. ಜನ ಇವುಗಳಿಗೆ 'ಯಾಗದ ಶಿಲೆ' ಎಂದು[41] ಕರೆದಿದ್ದಾರೆ. ಈ ರೀತಿಯ ಅವಶೇಷಗಳು ಪ್ರಥಮ ಬಾರಿಗೆ ದಕ್ಷಿಣ ಕನ್ನಡದ ಉತ್ತರ ಭಾಗದಲ್ಲಿ ಈ ಸಂಸ್ಕೃತಿಯ ಅವಶೇಷಗಳು ಸಿಕ್ಕಿವೆ. ಆದರೆ ಇದಕ್ಕೂ ಮುಂಚೆ ಸುಮಾರು ಏಳೆಂಟು ವರ್ಷಗಳ ಹಿಂದೆಯೇ ಮಡಕೆಚೂರುಗಳು ಇಲ್ಲಿ ದೊರಕಿವೆ[42].

ಗುರುರಾಜ ಭಟ್ಟರು ಪ್ರಾಗಿತಿಹಾಸದಲ್ಲಿ ಮಾಡಿದ ಸಂಶೋಧನೆ ತುಳುನಾಡಿನ ಐತಿಹಾಸಿಕ ದೃಷ್ಟಿಕೋನವನ್ನು ಬದಲಾಯಿಸುತ್ತದೆ. ಬಿ. ಎ. ಸಾಲೆತ್ತೂರುನಂತಹವರು ತುಳುನಾಡಿನ ಇತಿಹಾಸದ ಪ್ರಾಚೀನತೆಯನ್ನು ಗ್ರೀಕ್ ಉಲ್ಲೇಖಗಳಿಂದ ಗುರುತಿಸಿದ್ದಾರೆ, ಗುರುರಾಜ ಭಟ್ಟರು ತಮ್ಮ ಅವಿರತ ಶ್ರಮದ ಫಲವಾಗಿ ಈ ನಾಡಿನ ಪ್ರಾಚೀನತೆಯನ್ನು ಬೃಹತ್‌ಶಿಲಾಯುಗಕ್ಕೆ ಕೊಂಡೊಯ್ಯುತ್ತಾರೆ ಹಾಗೂ ಈ ನೆರೆ ಪ್ರದೇಶಗಳಾದ ಕೇರಳ ಹಾಗೂ ಗೋವಾಕ್ಕೆ ಸಮಾನಾಂತರವಾದುದು ಎಂದು ಘೋಷಿಸುತ್ತಾರೆ. ಆದರೆ ಈ ಬೃಹತ್ ಶಿಲಾಯುಗದ ನಿಖರ ಕಾಲಮಾನವನ್ನು ಗುರುತಿಸುವಲ್ಲಿ ಯಶಸ್ವಿಯಾಗಲಿಲ್ಲ. ಈ ಸಂಶೋಧನೆ ಮುಂದೆ ಗುರುರಾಜ ಭಟ್ಟರ ಐತಿಹಾಸಿಕ ಬರವಣಿಗೆಗಳಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಬಹುಮುಖ್ಯವಾಗಿ, ಅವರ 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಎಂಡ್ ಕಲ್ಚರ್'ನಲ್ಲಿ ಈ ಸಂಶೋಧನೆಯಲ್ಲಿ ಪ್ರಮುಖ ಆಕರ್ಷಣೆಯಾಗಿದೆ. ಇದು ಅವರ ತಲೆಮಾರಿನ ಅನಂತರದ

ಇತಿಹಾಸಕಾರರಿಗೆ ಅವರು ಕೊಟ್ಟಂತಹ ಮಹತ್ತರ ಕೊಡುಗೆಯಾಗಿದೆ. ತುಳುನಾಡಿನ ಇತ್ತೀಚಿನ ಇತಿಹಾಸಕಾರರು ಈ ಸಂಶೋಧನೆಗಳಿಂದ ಪ್ರೇರಿತರಾಗಿ ಈ ನಿಟ್ಟಿನಲ್ಲಿ ಕೆಲಸವನ್ನು ಮುಂದುವರಿಸಿಕೊಂಡು ಹೋಗಿರುವುದು ಇಂದಿಗೂ ಕಾಣಬಹುದಾಗಿದೆ.

ಸಂದರ್ಭಸೂಚಿಗಳು:

1. ಮೆಕೆನ್ಜಿ ಜೆ.ಎಸ್.ಎಫ್. 1973, *ಆನ್ ದ ರೂಡ್ ಸ್ಟೋನ್ ಆರ್ಕ್ಯಾಲಜಿ ಆಫ್ ಹಾಸನ್ ಡಿಸ್ಟ್ರಿಕ್ಟ್*, ಮೈಸೂರು, ಪು. 7–11.
2. ಕೋಲ್ ಎಚ್. ಎ. 1968, *ಆನ್ ದ ಡಿಸ್ಕವರಿ ಆಫ್ ಕ್ರೊಮೆಟಿಕ್ಸ್ ಇನ್ ಕೂರ್ಗ್ ಪಿ.ಎ.ಎಸ್.ಬಿ.*, ಪು. 243–245.
3. ಕೃಷ್ಣ ಎಮ್.ಎಚ್. 1953, *ಕರ್ನಾಟಕದ ಪೂರ್ವ ಚರಿತ್ರೆ, ಕನ್ನಡ ಸಂಶೋಧನ ಸಂಸ್ಥೆ*, ಧಾರವಾಡ.
4. ಟೇಲರ್ ಮೆಡಾಸ್, 1948, ಎ *ಮೈಕ್ರೋಲಿತಿಕ್ ಇಂಡಸ್ಟ್ರಿ ಇನ್ ಈಸ್ಟರ್ನ್ ಮೈಸೂರು,* ಎಂ.ಎ.ಎನ್., ಸಂ.xLviii. ದ ರೋಯಲ್ ಆಂಥ್ರೋಪೋಲೋಜಿಕಲ್ ಇನ್‌ಸ್ಟಿಟ್ಯೂಟ್, ಲಂಡನ್.
5. ಕೃಷ್ಣಮೂರ್ತಿ ಎಂ.ಎಸ್. 1999, ಕಲ್ಲುಸೇವೆ (ಕಲ್ಸೇವೆ) ಬೃಹತ್ ಶಿಲಾಸಮಾಧಿ.
6. ಗುರುರಾಜ ಬಿ. ಕೆ., 1970, '*ಕರ್ನಾಟಕ ಶಿಲಾಯುಗ ಸಂಸ್ಕೃತಿಗಳು*', ಪ್ರಚಾರ ಪುಸ್ತಕ ಮಾಲೆ, 172, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕೃಷ್ಣಮೂರ್ತಿ ಸಿ., 1971, '*ದ ನಿಯೊಲಿತಿಕ್ ಕಲ್ಚರ್ ರಿಮೈನ್ಸ್ ಇನ್ ದ ಕಾವೇರಿ ವ್ಯಾಲಿ, ಮೈಸೂರು ಡಿಸ್ಟ್ರಿಕ್ಟ್*', 'ಸ್ಟಡೀಸ್ ಇನ್ ಇಂಡಿಯನ್ ಹಿಸ್ಟರಿ ಆಂಡ್ ಕಲ್ಚರ್' (ಸಂ.: ಶ್ರೀನಿವಾಸ ರಿಟ್ಟಿ, ಬಿ. ಆರ್. ಗೋಪಾಲ್, ಪಿ. ಬಿ. ದೇಸಾಯಿ) ಅಭಿನಂದನ ಸಮಿತಿ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ಪು. 4–12.
8. ಸುಂದರ, ಎ., 1975, '*ದ ಅರ್ಲಿ ಚೇಂಬರ್ ಟೂಂಬ್ಸ್ ಆಫ್ ಸೌತ್ ಇಂಡಿಯಾ*', ಯುನಿವರ್ಸಿಟಿ ಪಬ್ಲಿಶರ್ಸ್, ನ್ಯೂಡೆಲ್ಲಿ.
9. ಸುಬ್ಬಯ್ಯ ಕೆ. ಕೆ., 1978, '*ಆರ್ಕಿಯಾಲಜಿ ಆಫ್ ಕೂರ್ಗ್ ವಿತ್ ಸೋಶಿಯಲ್ ರೆಫರೆನ್ಸ್ ಟು ಮೆಗಾಲಿಥ್ಸ್*' ಗೀತಾ ಬುಕ್ ಹೌಸ್, ಮೈಸೂರು.
10. ಷಡಕ್ಷರಯ್ಯ ಆರ್. ಎಂ., 1995, '*ಪ್ರಿ ಹಿಸ್ಟೋರಿಕ್ ಆಂಡ್ ಅರ್ಲಿ ಹಿಸ್ಟೋರಿಕ್ ಕಲ್ಚರ್ಸ್ ಇನ್ ದ ಮಂಜ್ರಾ ಅಂಡ್ ಕಾರ್ನಿಯಾ ವ್ಯಾಲಿಸ್*', ಕೆ. ಆರ್. ಐ, ಕರ್ನಾಟಕ ಯುನಿವರ್ಸಿಟಿ, ಧಾರವಾಡ.
11. ಪೂಣಚ್ಚ ಕೆ. ಪಿ., 1990, '*ಆರ್ಕಿಯಾಲಜಿ ಆಫ್ ಮಲ್ನಾಡ್ ರೀಜನ್ ಕಂಪ್ರೈಸಿಂಗ್ ದ ಡಿಸ್ಟ್ರಿಕ್ಟ್ಸ್ ಆಫ್ ಹಾಸನ್, ಚಿಕ್ಕಮಗಳೂರ್ ಆಂಡ್ ಶಿವಮೊಗ್ಗ*

ವಿತ್ ಸ್ಪೆಶಲ್ ರೆಫರೆನ್ಸ್ ಟು ಪ್ರಿ ಆಂಡ್ ಪ್ರೊಟೊ ಹಿಸ್ಟೊರಿ' (ಅಪ್ರಕಟಿತ ಮಹಾಪ್ರಬಂಧ), ಕರ್ನಾಟಕ ಯುನಿವರ್ಸಿಟಿ, ಧಾರವಾಡ.

12. ಶಿವತಾರಕ್, ಕೆ. ಬಿ., 1992, '*ತುಮಕೂರು ಜಿಲ್ಲೆಯಲ್ಲಿ ಇತ್ತೀಚೆಗೆ ದೊರೆತ ಕೆಲವು ಪ್ರಾಗೈತಿಹಾಸಿಕ ನೆಲೆಗಳು*', ಇತಿಹಾಸ ದರ್ಶನ–7, ಕರ್ನಾಟಕ ಇತಿಹಾಸ ಅಕಾಡೆಮಿ (ರಿ.), ಬೆಂಗಳೂರು, ಪು. 7.

13. ಪುಂಡಿಕಾಯಿ ಗಣಪಯ್ಯ ಭಟ್, 1997, '*ತೌಳವ*', ಸಿಂಧೂರ ಪ್ರಕಾಶನ, ಪುಂಡಿಕಾಯಿ, ಪು. 13.

14. ಅದೇ, ಪು. 16–17.

15. ಪಿ. ಗುರುರಾಜ ಭಟ್, 1975, 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್', ಪು. vi-x.

16. ಅ. ಸುಂದರ, 1977, '*ದಕ್ಷಿಣ ಕನ್ನಡದ ಪ್ರಾಚೀನತಮ ಸಾಂಸ್ಕೃತಿಕ ಅವಶೇಷಗಳು*', 'ಸುದರ್ಶನ', ಮೂಲ್ಕಿ, ಪು. 98.

17. ಎನ್. ಎ. ಶೀನಪ್ಪ ಹೆಗ್ಡೆ ಮತ್ತು ಎನ್. ಎಸ್. ಕಿಲ್ಲೆ, 1954, 'ಪ್ರಾಚೀನ ತುಳುನಾಡು', ಎಂ. ಗಣಪತಿ ರಾವ್ ಐಗಳ್, 1923, 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ಮಂಗಳೂರು, ಬಿ. ಎ. ಸಾಲೆತ್ತೂರು, 1936, 'ಏನ್ಶಿಯಂಟ್ ಕರ್ನಾಟಕ, ಸಂ. 1, ಹಿಸ್ಟರಿ ಆಫ್ ತುಳುವ', ಪೂನಾ, ಕೆ. ವಿ. ರಮೇಶ್, 1970, 'ಎ ಹಿಸ್ಟೊರಿ ಆಫ್ ಸೌತ್ ಕೆನರಾ', ಧಾರವಾಡ.

18. ಪುಂಡಿಕಾಯಿ ಗಣಪಯ್ಯ ಭಟ್, 1997, '*ತೌಳವ*', ಸಿಂಧೂರ ಪ್ರಕಾಶನ, ಪುಂಡಿಕಾಯಿ, ಪು. 21.

19. ಅ. ಸುಂದರ, 1977, '*ದಕ್ಷಿಣ ಕನ್ನಡದ ಪ್ರಾಚೀನತಮ ಸಾಂಸ್ಕೃತಿಕ ಅವಶೇಷಗಳು*', 'ಸುದರ್ಶನ', ಮೂಲ್ಕಿ, ಪು. 98.

20. ಸಿ. ಬಿ. ಪಾಟೀಲ್, 2006, '*ಹಿಸ್ಟೊರಿಯೊಗ್ರಾಫಿ ಆಫ್ ಆರ್ಕಿಯಾಲಜಿ ಆಫ್ ದ ಕೋಸ್ಟಲ್ ಕರ್ನಾಟಕ*', 'ಮಹಾಸೇನಸಿರಿ ರಿಚಸ್ ಆಫ್ ಇಂಡಿಯನ್ ಆರ್ಕಿಯಾಲಜಿಕಲ್ ಆಂಡ್ ಕಲ್ಚರಲ್ ಸ್ಟಡೀಸ್' (ಎ ಫೆಲಿಸಿಟೇಶನ್ ವೋಲ್ಯೂಂ ಇನ್ ಹೋನರ್ ಆಫ್ ಡಾ। ಐ. ಕೆ. ಶರ್ಮಾ), ಸಂ. 1, (ಸಂ. ಪಿ. ಚೆನ್ನ ರೆಡ್ಡಿ), ಡೆಲ್ಲಿ, ಪು. 239.

21. ಪಿ. ಗುರುರಾಜ ಭಟ್, 1975, 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್', ಪು. vi-vii.

22. ಅ. ಸುಂದರ, 1991, '*ಪ್ರಿ ಹಿಸ್ಟೋರಿಕ್ ಆಂಡ್ ಪ್ರೊಟೊ ಹಿಸ್ಟೋರಿಕ್ ಕಲ್ಚರ್ಸ್ ಆಫ್ ದಕ್ಷಿಣ ಕನ್ನಡ*', 'ಪರ್ಸ್ಪೆಕ್ಟಿವ್ ಆನ್ ದಕ್ಷಿಣ ಕನ್ನಡ ಆಂಡ್ ಕೊಡಗು', ಮಂಗಳೂರು ಯುನಿವರ್ಸಿಟಿ ಡೆಸಿನಿಯಲ್ ವೋಲ್ಯೂಂ, ಮಂಗಳೂರು, ಪು. 56–57, 'ಏನ್ಶಿಯಂಟ್ ಇಂಡಿಯಾ, ನಂ. 8', ಪು. 3–8.

23. ಪಿ. ಗುರುರಾಜ ಭಟ್, '*ಉಡುಪಿ ಬಳಿ ಪರ್ಕಳದಲ್ಲಿ ಬೃಹತ್ ಶಿಲಾಯುಗದ ಅವಶೇಷಗಳ ಪತ್ತೆ*', 'ಕನ್ನಡ ಪ್ರಭ', 6–6–1975, ಪಿ. ಗುರುರಾಜ ಭಟ್, 1975, 'ಸ್ಟಡಿಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್' "It is very unfortunate that no work of this kind has taken place hitherto with the result that both the prehistory and the early history of this region are bound to be the figment of imagination until archaeological excavation clears the horizon. Barkur, Basrur and Udyavar are the three important places for such excavation."

24. ಅ. ಸುಂದರ, 1991, '*ಪ್ರಿ ಹಿಸ್ಟೋರಿಕ್ ಆಂಡ್ ಪ್ರೊಟೊ ಹಿಸ್ಟೋರಿಕ್ ಕಲ್ಚರ್ಸ್ ಆಫ್ ದಕ್ಷಿಣ ಕನ್ನಡ*', 'ಪರ್ಸ್ಪೆಕ್ಟಿವ್ ಆನ್ ದಕ್ಷಿಣ ಕನ್ನಡ ಆಂಡ್ ಕೊಡಗು', ಮಂಗಳೂರು ಯುನಿವರ್ಸಿಟಿ ಡೆಸಿನಿಯಲ್ ವೋಲ್ಯೂಂ, ಮಂಗಳೂರು, ಪು. 53, ಗುರುರಾಜ ಭಟ್, 1969, 'ಆಂಟಿಕ್ವಿಟಿಸ್ ಆಫ್ ಸೌತ್ ಕೆನರಾ', ಪು. cxxx-cxxxiii.

25. ಪಿ. ಗುರುರಾಜ ಭಟ್, 1975, 'ಸ್ಟಡಿಸ್ ಇನ್ ತುಳುವ ಹಿಸ್ಟೋರಿ ಆಂಡ್ ಕಲ್ಚರ್', ಪು. viii, ಅ. ಸುಂದರ, 1991, '*ಪ್ರಿ ಹಿಸ್ಟೋರಿಕ್ ಆಂಡ್ ಪ್ರೊಟೊ ಹಿಸ್ಟೋರಿಕ್ ಕಲ್ಚರ್ಸ್ ಆಫ್ ದಕ್ಷಿಣ ಕನ್ನಡ*', 'ಪರ್ಸ್ಪೆಕ್ಟಿವ್ ಆನ್ ದಕ್ಷಿಣ ಕನ್ನಡ ಆಂಡ್ ಕೊಡಗು', ಮಂಗಳೂರು ಯುನಿವರ್ಸಿಟಿ ಡೆಸಿನಿಯಲ್ ವೋಲ್ಯೂಂ, ಮಂಗಳೂರು, ಪು. 54–55.

26. ಅ. ಸುಂದರ, 1974, 'ಮೆಗಲಿತ್ಸ್ ಇನ್ ದ ವೆಸ್ಟರ್ನ್ ಅಂಡ್ ಘಾಟ್ ರೀಜನ್ಸ್ ಆಫ್ ಕರ್ನಾಟಕ; ಎ ಸ್ಟಡಿ', ರಿಪ್ರಿಂಟೆಡ್ ಫ್ರಂ ದ ಜರ್ನಲ್ ಆಫ್ ದ ಕರ್ನಾಟಕ ಯುನಿವರ್ಸಿಟಿ; ಸೋಶಿಯಲ್ ಸೈನ್ಸ್, ಸಂ. 10, ಪು. 74–83.

27. ಪಿ. ಗುರುರಾಜ ಭಟ್, '*ಬೇಲೂರಿನ ಶಿಲಾಸಂಸ್ಕೃತಿಯ ಅವಶೇಷಗಳು*', ಸಂಯುಕ್ತಕರ್ನಾಟಕ, 10–9–1973.

28. ಪಿ. ಗುರುರಾಜ ಭಟ್, 1975, 'ಸ್ಟಡಿಸ್ ಇನ್ ತುಳುವ ಹಿಸ್ಟೋರಿ ಆಂಡ್ ಕಲ್ಚರ್', ಪು. vii-viii,

29. 'ಡಾಲ್ಮೆನ್ಸ್ ಆಫ್ ಪಲನಿ ಹಿಲ್ಸ್' ಮೆಮಾಯಿರ್ಸ್ ಆಫ್ ಆರ್ಕಿಯಾಲಜಿಕಲ್ ಸರ್ವೇ ಆಫ್ ಇಂಡಿಯಾ, ಸಂ. 34, ಪು. 1–28.

30. ಪುಂಡಿಕಾಯಿ ಗಣಪಯ್ಯ ಭಟ್, 1997, '*ತೌಳವ*', ಸಿಂಧೂರ ಪ್ರಕಾಶನ, ಪುಂಡಿಕಾಯಿ, ಪು. 21.

31. ಕೋಲ್, ಆರ್. ಎ., 1969, 'ಪ್ರೊಸೀಡಿಂಗ್ಸ್ ಆಫ್ ದಿ ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್', ಪು. 184–186.

32. ಅ. ಸುಂದರ, 1991, '*ಪ್ರಿ ಹಿಸ್ಟೋರಿಕ್ ಆಂಡ್ ಪ್ರೊಟೊ ಹಿಸ್ಟೋರಿಕ್ ಕಲ್ಚರ್ಸ್ ಆಫ್ ದಕ್ಷಿಣ ಕನ್ನಡ*', 'ಪರ್ಸ್ಪೆಕ್ಟಿವ್ ಆನ್ ದಕ್ಷಿಣ ಕನ್ನಡ ಆಂಡ್ ಕೊಡಗು', ಮಂಗಳೂರು ಯುನಿವರ್ಸಿಟಿ ಡೆಸಿನಿಯಲ್ ವೋಲ್ಯೂಂ, ಮಂಗಳೂರು, ಪು. 59.

33. ಅ. ಸುಂದರ, 1977, '*ದಕ್ಷಿಣ ಕನ್ನಡದ ಪ್ರಾಚೀತನಮ ಸಾಂಸ್ಕೃತಿಕ ಅವಶೇಷಗಳು*', 'ಸುದರ್ಶನ', ಮೂಲ್ಕಿ, ಪು. 100.

34. ಅದೇ.

35. ಪಿ. ಗುರುರಾಜ ಭಟ್, 1975, 'ಸ್ಟಡಿಸ್ ಇನ್ ತುಳುವ ಹಿಸ್ಟೊರಿ ಆಂಡ್ ಕಲ್ಚರ್', ಪು. ix., ಅ. ಸುಂದರ, 1991, '*ಪ್ರಿ ಹಿಸ್ಟೋರಿಕ್ ಆಂಡ್ ಪ್ರೊಟೊ ಹಿಸ್ಟೋರಿಕ್ ಕಲ್ಚರ್ಸ್ ಆಫ್ ದಕ್ಷಿಣ ಕನ್ನಡ*', 'ಪರ್ಸ್ಪೆಕ್ಟಿವ್ ಆನ್ ದಕ್ಷಿಣ ಕನ್ನಡ ಆಂಡ್ ಕೊಡಗು', ಮಂಗಳೂರು ಯುನಿವರ್ಸಿಟಿ ಡೆಸಿನಿಯಲ್ ವೋಲ್ಯೂಂ, ಮಂಗಳೂರು, ಪು. 56, ಸಿ. ಬಿ. ಪಾಟೀಲ್, 2006, '*ಹಿಸ್ಟೋರಿಯೊಗ್ರಾಫಿ ಆಫ್ ಆರ್ಕಿಯಾಲಜಿ ಆಫ್ ದ ಕೋಸ್ಟಲ್ ಕರ್ನಾಟಕ*', 'ಮಹಾಸೇನಸಿರಿ ರಿಚಸ್ ಆಫ್ ಇಂಡಿಯನ್ ಆರ್ಕಿಯಾಲಜಿಕಲ್ ಆಂಡ್ ಕಲ್ಚರಲ್ ಸ್ಟಡೀಸ್' (ಎ ಫೆಲಿಸಿಟೇಶನ್ ವೋಲ್ಯೂಂ ಇನ್ ಹೋನರ್ ಆಫ್ ಡಾ। ಐ. ಕೆ. ಶರ್ಮಾ), ಸಂ. 1, (ಸಂ. ಪಿ. ಚೆನ್ನ ರೆಡ್ಡಿ), ಡೆಲ್ಲಿ, ಪು. 238.

36. ಪಿ. ಗುರುರಾಜ ಭಟ್, 'ಉಡುಪಿ ಬಳಿ ಪರ್ಕಳದಲ್ಲಿ ಬೃಹತ್ ಶಿಲಾಯುಗದ ಅವಶೇಷಗಳ ಪತ್ತೆ', 6–6–1975, ಸಿ. ಬಿ. ಪಾಟೀಲ್, 2006, '*ಹಿಸ್ಟೋರಿಯೊಗ್ರಾಫಿ ಆಫ್ ಆರ್ಕಿಯಾಲಜಿ ಆಫ್ ದ ಕೋಸ್ಟಲ್ ಕರ್ನಾಟಕ*', 'ಮಹಾಸೇನಸಿರಿ ರಿಚಸ್ ಆಫ್ ಇಂಡಿಯನ್ ಆರ್ಕಿಯಾಲಜಿಕಲ್ ಆಂಡ್ ಕಲ್ಚರಲ್ ಸ್ಟಡೀಸ್' (ಎ ಫೆಲಿಸಿಟೇಶನ್ ವೋಲ್ಯೂಂ ಇನ್ ಹೋನರ್ ಆಫ್ ಡಾ। ಐ. ಕೆ. ಶರ್ಮಾ), ಸಂ. 1, (ಸಂ. ಪಿ. ಚೆನ್ನ ರೆಡ್ಡಿ), ಡೆಲ್ಲಿ, ಪು. 239.

37. ಪಿ. ಗುರುರಾಜ ಭಟ್, 1975, 'ಸ್ಟಡಿಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್', ಪು. ix.

38. ಅದೇ.

39. ಅ. ಸುಂದರ, 1982, '*ಡಾ। ಪಿ. ಗುರುರಾಜ ಭಟ್ಸ್ ಕಾಂಟ್ರಿಬ್ಯೂಷನ್ ಟು ದ ಪ್ರಿ ಹಿಸ್ಟರಿ ಆಂಡ್ ಆರ್ಕಿಟೆಕ್ಚರ್*', 'ಜರ್ನಲ್ ಆಫ್ ದ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್' (ಸಂ. ಎ. ವಿ. ನರಸಿಂಹ ಮೂರ್ತಿ), ಸಂ.2, ಪು. 20–21.

40. ಪಿ. ಗುರುರಾಜ ಭಟ್, 1975, 'ಸ್ಟಡಿಸ್ ಇನ್ ತುಳುವ ಹಿಸ್ಟೊರಿ ಆಂಡ್ ಕಲ್ಚರ್', ಪು. x.

41. ಅದೇ.

42. ಪಿ. ಗುರುರಾಜ ಭಟ್, '*ಬೇಳೂರಿನ ಬೃಹತ್ ಶಿಲಾ ಸಂಸ್ಕೃತಿಯ ಅವಶೇಷಗಳು*', ಸಂಯುಕ್ತ ಕರ್ನಾಟಕ, 10–9–1973,

43. ಅದೇ.

ಅಧ್ಯಾಯ –ಮೂರು

೩.೦. ಗುರುರಾಜ ಭಟ್ಟರ ಶಾಸನಗಳ ಅಧ್ಯಯನ

೩.೧. ಗುರುರಾಜ ಭಟ್ಟರ ಪ್ರಮುಖ ಇಪ್ಪತ್ತೈದು ಶಾಸನಗಳು.

೩.೨. ಆಳುಪ ಶಾಸನ.

೩.೩. ಹೊಯ್ಸಳ ಶಾಸನ.

೩.೪. ವಿಜಯನಗರದ ಶಾಸನ.

ಗುರುರಾಜ ಭಟ್ಟರ ಶಾಸನಗಳ ಅಧ್ಯಯನ

ಭಾರತದಲ್ಲಿ ವಸಾಹತುಶಾಹಿಗಳ ಕಾಲದಲ್ಲಿ ಶಾಸನಗಳ ಅಧ್ಯಯನ ಪ್ರಾರಂಭವಾಯಿತು. ಹಾಗೆಯೇ ಹುಲ್‌ಶು, ಬೆಂಜಮಿನ್ ಲೂಯಿಸ್ ರೈಸ್,[1] ರಾಬರ್ಟ್ ಸಿವೆಲ್[2] –ಇವರೆಲ್ಲ ದಕ್ಷಿಣ ಭಾರತದ ಇತಿಹಾಸ ಬರೆಯುವಾಗ ಶಾಸನಗಳಿಗೆ ಪ್ರಾಮುಖ್ಯ ಕೊಟ್ಟಿದ್ದಾರೆ. ದಕ್ಷಿಣ ಭಾರತದ ಶಾಸನಗಳೇ ನಿಜವಾದ ಕುರುಹುಗಳು ಎಂದಿದ್ದಾರೆ. ೧೯ನೇ ಶತಮಾನದ ವಸಾಹತುಶಾಹಿ ಇತಿಹಾಸ ಬರವಣಿಗೆಗಳು ಹೆಚ್ಚಿನವು ಯುರೋಪ್ ಮಾದರಿಯ ಇತಿಹಾಸರಚನೆಯವು ಆಗಿದ್ದವು. ದೇಶೀಯ ಇತಿಹಾಸ ಅಥವಾ ಪ್ರಾಂತೀಯ ಇತಿಹಾಸಕಾರರು ಇದೇ ಮಾದರಿಯನ್ನು ತೆಗೆದುಕೊಳ್ಳುತ್ತಾರೆ.. ಶಾಸನಗಳನ್ನೇ ಆಧಾರವಾಗಿಟ್ಟುಕೊಳ್ಳುತ್ತಾರೆ. ಗುರುರಾಜ ಭಟ್ಟರು ಕೂಡಾ ಇದೇ ಮಾದರಿಯಲ್ಲಿ ಮುಂದುವರಿದಂತಹ ಇತಿಹಾಸಕಾರರು. ಅವರ ಪ್ರಕಾರ ಇತಿಹಾಸ ರಚನೆಯಲ್ಲಿ ಶಾಸನಗಳ ಪ್ರಾಮುಖ್ಯ ಗಣನೀಯವಾದುದು[3]. ರಾಜಕೀಯ ಚರಿತ್ರೆಗೆ ರಾಜರು ಹೊರಡಿಸುವಂತಹ ಶಾಸನಗಳು ಪ್ರಮುಖವು ಹಾಗೂ ಇತಿಹಾಸರಚನೆಗೆ ಮೂಲಾಧಾರವೂ ಆಗಿವೆ ಎಂದು ತಿಳಿಸಿದ್ದಾರೆ. ಕೆಲವೊಂದು ಇತಿಹಾಸಕಾರರನ್ನು ಹೊರತುಪಡಿಸಿದರೆ, ಪಾಡ್ದನಗಳೂ, ಗ್ರಾಮ್ಯ ಪದ್ಧತಿ ಹಾಗೂ ಇತರ ಮೌಖಿಕ ಆಕರಗಳಿಗೆ ತುಳುನಾಡಿನ ಇತಿಹಾಸಕಾರರು ಪ್ರಾಮುಖ್ಯ ಕೊಡಲಿಲ್ಲ. ಭಟ್ಟರು ಕೂಡಾ ಇದೇ ಸಂಪ್ರದಾಯವನ್ನು ಮುಂದುವರಿಸಿದವರು. ಭಟ್ಟರು ಶಾಸನಗಳಿಗೆ ಮಹತ್ವಕೊಡಲು ಕಾರಣ ವೇನೆಂದರೆ ಶಾಸನಗಳಿಂದಲೇ ಇತಿಹಾಸವನ್ನು ರಚಿಸಲು ಸಾಧ್ಯ ಎಂದು ಹೇಳಿದ್ದಾರೆ.[4] ಹಾಗೆಯೇ ಈ ಸಂಪ್ರದಾಯವನ್ನು ಭಟ್ಟರ ಸಮಕಾಲೀನರಾದ ಕೆ. ವಿ. ರಮೇಶ್[5] ಹಾಗೂ ವಸಂತ ಶೆಟ್ಟಿ[6] ಮುಂದುವರಿಸಿದರು.

ಗುರುರಾಜ ಭಟ್ಟರು ಯಾವ ರೀತಿಯಲ್ಲಿ ಸಂಶೋಧನ ಹಂತದಲ್ಲಿ ಶಾಸನಗಳ ಮಹತ್ವವನ್ನು ಕಂಡುಕೊಂಡರು; ಶಾಸನಗಳ ಮೂಲಕ ಇತಿಹಾಸದ ಪುನರ್ನಿರ್ಮಾಣಕ್ಕೆ ಹೇಗೆ ಕಾರಣವಾಯಿತು ಎಂಬುದು ಮುಖ್ಯವಾದ ಸಂಗತಿ.

ಭಾಸ್ಕರ ಆನಂದ ಸಾಲೆತ್ತೂರರ[7] 'ಹಿಸ್ಟರಿ ಆಫ್ ತುಳುವ' ಗ್ರಂಥವು ಗುರುರಾಜ ಭಟ್ಟರಿಗೆ ತುಳುನಾಡಿನ ಇತಿಹಾಸದಲ್ಲಿ ಸಂಶೋಧನೆ ಮಾಡಲು ಪ್ರೇರಣೆ ಮತ್ತು ಚೈತನ್ಯಗಳೆರಡನ್ನೂ ದೊರಕಿಸಿ ಕೊಟ್ಟಿತು. ಅನಂತರ ಆರಂಭದ ಬರಹಗಾರರುಗಳಾದ ಶೀನಪ್ಪ ಹೆಗ್ಡೆ ಮತ್ತು ನಾರಾಯಣ ಕಿಲ್ಲೆ[8] ಅವರಿಂದ ವಿರಚಿತವಾದ 'ಪ್ರಾಚೀನ ತುಳುನಾಡು' ಗ್ರಂಥದಿಂದ ವಿಮರ್ಶೆಗಿಳಿದರು. ಹಾಗೆಯೇ ಎಂ. ಗಣಪತಿ ರಾವ್ ಐಗಳ್[9] ಅವರಿಂದ ಬರೆಯಲ್ಪಟ್ಟ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ' ಇವುಗಳನ್ನೂ ಆಧಾರವಾಗಿಟ್ಟುಕೊಂಡು ಭಟ್ಟರು ತುಳುನಾಡಿನ ಇತಿಹಾಸದ ಪುನಾರಚನೆಯಲ್ಲಿ ಶೋಧನೆಯನ್ನು ಪ್ರಾರಂಭ ಮಾಡಿದರು. ಗುರುರಾಜ ಭಟ್ಟರು ತಮ್ಮ ಇತಿಹಾಸ ಸಂಶೋಧನಾ ಗ್ರಂಥವನ್ನು ಗಣಪತಿ ರಾವ್ ಐಗಳ್‌ರವರ ನೆನಪಿಗೆ ಅರ್ಪಿಸಿದ್ದಲ್ಲದೆ[10] ಅವರ ಬಗೆಗೆ "The Father

of History of South Kanara and an Eminent Educationest whose original contribution to the understanding of the History and Culture of the Tuluvas is Imperishable" ಎಂದು ಗೌರವಪುರಸ್ಸರವಾಗಿ ಬರೆದಿದ್ದಾರೆ.[11]

ಆದರೆ ಇವಾವುದರಿಂದಲೂ ಗುರುರಾಜ ಭಟ್ಟರಿಗೆ ತುಳುವರ ಮೂಲದ ಬಗ್ಗೆ ತೃಪ್ತಿಕರವಾದ ವಿವರಣೆ ಸಿಗಲಿಲ್ಲ. ಹಾಗಾಗಿ, ತಾವೇ ತುಳುನಾಡಿನ ಚರಿತ್ರೆಯ ಆಕರಗಳಾದ ಶಾಸನಗಳ ಅಧ್ಯಯನವನ್ನು ಖುದ್ದಾಗಿ ಕೈಗೆತ್ತಿಕೊಂಡು ಚರಿತ್ರೆಯನ್ನು ರಚಿಸುವುದು ಸೂಕ್ತವೆಂದು ಮನಗಂಡರು. ಆದುದರಿಂದ ತುಳುನಾಡಿನಲ್ಲಿ ದೊರೆತ ಹಳೆಯ ಹಾಗೂ ಹೊಸ ಶಾಸನಗಳ ಅಧ್ಯಯವನ್ನು ಸ್ವತಃ ಕೈಗೆತ್ತಿಕೊಂಡ ಅವರು ಪ್ರಾಚೀನ, ಮಧ್ಯಯುಗೀನ ಮತ್ತು ವಿಜಯನಗರದ ಕಾಲದ ಶಾಸನಗಳೆಂದು ಅಧ್ಯಯನಮಾಡುವುದು ಸೂಕ್ತ ಎಂದು ಪರಿಗಣಿಸಿದರು. ಭಟ್ಟರು ತುಳುನಾಡಿಗೆ ಸಂಬಂಧಿಸಿದಂತೆ ಹಲವಾರು ಶಾಸನಗಳನ್ನು ಪ್ರಥಮಬಾರಿಗೆ ಬೆಳಕಿಗೆ ತಂದಿದ್ದಾರೆ.[12] ಇದಕ್ಕೆ ಪೂರಕವಾಗಿ ಸ್ಥಳೀಯರ ಸಹಕಾರವೂ ಲಭಿಸಿದೆ. ಏಕೆಂದರೆ ಹಲವಾರು ಬಾರಿ ಪತ್ರಿಕೆಗಳಲ್ಲಿ ತಮ್ಮ ಲೇಖನಗಳನ್ನು ಪ್ರಕಟಪಡಿಸಿ ಇತಿಹಾಸದ ಬಗ್ಗೆ ಪ್ರಚೋದಪಡಿಸುವಲ್ಲಿ ಜನತೆಯಲ್ಲಿ ಜಾಗೃತ ಮನೋಭಾವನೆಯನ್ನು ಬೆಳೆಸುವಲ್ಲಿ ಶ್ರಮಿಸಿದ್ದಾರೆ. ಅವರ ಸರಳವಾದ ಭಾಷೆ ಮತ್ತು ವಿಚಾರಗಳಿಂದ ಪ್ರಚೋದಿತರಾದ ಸ್ಥಳೀಯರು ಹಲವಾರು ಹೊಸ ಹೊಸ ವಿಚಾರಗಳನ್ನು ಭಟ್ಟರಿಗೆ ತಿಳಿಸುತ್ತಿದ್ದರು ಭಟ್ಟರೇ ಸ್ವತಃ ಅನ್ವೇಷಣೆ ಮಾಡಿದಂತಹ ೨೫ ಮಹತ್ವದ ಶಾಸನಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಲಾಗಿದೆ.[13] ಅವುಗಳೆಂದರೆ–

೦೧. ಆಳ್ವರಸನ ಉದ್ಯಾವರ ಶಾಸನ.[14]

೦೨. ಆಳ್ವರಸನ ಬೆಳ್ಮಣ್ಣು ತಾಮ್ರ ಶಾಸನ.[15]

೦೩. ಆಳ್ವರಸನ ಬೊಮ್ಮದೇವನ ಶಾಸನ.[16]

೦೪. ಇಮ್ಮಡಿ ಚಿತ್ರವಾಹನನ ಉದ್ಯಾವರ ಶಾಸನ.[17]

೦೫. ಉದ್ಯಾವರದಲ್ಲಿರುವ ಶಂಭುಕಲ್ಲಿನ ಏಕಶಿಲಾಬಂಡೆಯಲ್ಲಿರುವ ಶಾಸನಗಳು.[18]

೦೬. ಎರೆಬೊಗ್ಗವರ್ಮರಸನ ಕಡಂದಲೆ ಶಿಲಾಶಾಸನ.[19]

೦೭. ಕಡವಸೆ ಶಾಸನ.[20]

೦೮. ಕಾಪುವಿನಲ್ಲಿರುವ ತಾಮ್ರಶಾಸನ.[21]

೦೯. ಕಾರ್ಕಳ ತಾಲೂಕಿನ ನಲ್ಲೂರಿಗೆ ಸುರಾಲುವಿನಲ್ಲಿರುವ ಜೈನ ಶಾಸನ[22] (ಕ್ರಿ.ಶ. ೧೨೯೬).

೧೦. ಕೆರವಾಸೆಯ ವರ್ಧಮಾನ ಬಸದಿಯ ಶಾಸನ[23] (ಕ್ರಿ.ಶ. ೧೧೦೯)

೧೧. ಕೆಲ್ಲಪುತ್ತಿಗೆ ಶಾಸನ[24] (3 in number).

೧೨. ಕೊಣಜೆ ಬಂಡೆ ಶಾಸನ[25] (ಕ್ರಿ.ಶ. ೮ರಿಂದ ೯ನೇ ಶತಮಾನ)

೧೩. ಕೊನಲ್‌ಕೊಡುವಿನ ತುಳು ಶಾಸನ[26] (Konalakodu).

೧೪. ಜಿನಬಿಂಬ[27] (ಶಾಸನಸಹಿತ).

೧೫. ದೇವರಾಯನ ಶಾಸನ[28] (ಕ್ರಿ.ಶ. ೧೪೨೯)

೧೬. ಪಾಂಡ್ಯ ಧನಂಜಯನ ಬೆಳೂರು ಶಾಸನ.[29]

೧೭. ಪೊಳಲಿಯ ರಾಜರಾಜೇಶ್ವರೀ ದೇವಾಲಯದ ಪ್ರವೇಶದ್ವಾರದ ಬಾಗಿಲುವಾಡದ ಮೇಲ್ಭಾಗದಲ್ಲಿರುವ ಶಾಸನ.[30]

೧೮. ಬಲ್ಲಮಹಾದೇವಿಯ ೧೨೭೯ರ ಶಾಸನ.[31]

೧೯. ಬಾರಕೂರಿನ ಮೂಡುಕೆರೆಯಲ್ಲಿರುವ ತಾಮ್ರಶಾಸನ.[32]

೨೦. ಮೊದಲನೇ ದೇವರಾಯನ ಕುಂದಾಪುರ ಶಾಸನ.[33]

೨೧. ವಿಜಯಾದಿತ್ಯನ ಜಂಬಾನಿ (ಚಾಲುಕ್ಯ-ಆಳುಪ ದಾಖಲೆ) ಶಾಸನ.[34] (ಸಂ.: ಎಂ.ಜೆ. ಶರ್ಮ) ಶಿವಮೊಗ್ಗ ಜಿಲ್ಲೆ.

೨೨. ಶ್ವೇತವಾಹನನ ಉದ್ಯಾವರ ಶಾಸನ[35]

೨೩. ಶ್ವೇತವಾಹನನ ಉದ್ಯಾವರ ಶಾಸನ[36] (ಮಿಲಾಗ್ರಿಸ್ ಕಾಲೇಜ್ ಆನ್ಯುವಲ್ ೧೯೭೧).

೨೪. ಹಟ್ಟಿಯಂಗಡಿಯ ಚಂದ್ರನಾಥ ಬಸದಿಯಲ್ಲಿರುವ ಕಲ್ಲಿನ ಶಾಸನ[37] (Stone inscription).

೨೫. ೧೪ ಮತ್ತು ೧೬ನೇ ಶತಮಾನದ ಹುಂಮ್ಚ ತಾಮ್ರಶಾಸನ.[38]

ಶಾಸನಗಳ ಮಹತ್ವ:

ನಾವು ಈ ಶಾಸನಗಳನ್ನು ಅಧ್ಯಯನ ಮಾಡುವಾಗ ಯಾವ ವಿಷಯಗಳಿಗೆ ಭಟ್ಟರು ಮಹತ್ವವನ್ನು ಕೊಟ್ಟಿದ್ದಾರೆ ಹಾಗೆಯೇ ಅವುಗಳ ವೈಶಿಷ್ಟ್ಯವೇನು ಎಂಬುದನ್ನು ತಿಳಿದುಕೊಳ್ಳಬಹುದು.

ಬೆಳ್ಮಣ್ಣು ಶ್ರೀದುರ್ಗಾಪರಮೇಶ್ವರೀ[39] ದೇವಾಲಯದಲ್ಲಿ ದೊರಕಿದ ಮಹತ್ವಪೂರ್ಣವಾದ ತಾಮ್ರಶಾಸನವನ್ನು ನೋಡಿದ ಭಟ್ಟರು ಇದು ಇತಿಹಾಸದ ದೃಷ್ಟಿಯಿಂದಲೂ ಮಹತ್ವವುಳ್ಳದ್ದೆಂದು ಹೇಳುತ್ತಾರೆ. ಏಕೆಂದರೆ ಇದು ರಾಜಕೀಯ, ಸಾಮಾಜಿಕ, ಧಾರ್ಮಿಕ ಇತಿಹಾಸದ ಪುನಾರಚನೆಯಲ್ಲಿ ಮಹತ್ವವಾದುದು. ಆಳುಪರಸರ ಅಧಿದೇವತೆ ಶಿವನೆಂಬುದಾಗಿಯೂ ಈ ಶಾಸನದಿಂದ ತಿಳಿಯಬಹುದಾಗಿದೆ. ಇಷ್ಟರತನಕ ನಮಗೆ ಲಭ್ಯವಿದ್ದ ಯಾವ ಪ್ರಾಚೀನ ಆಳುಪ ಶಾಸನದಲ್ಲೂ 'ಓಂ ನಮಃ ಶಿವಾಯ' ಎಂಬ ಈಶ್ವರನ ಸ್ತುತಿ ಕಂಡುಬರುವುದಿಲ್ಲ.[40]

ಬೆಳ್ಮಣ್ಣಿನ ತಾಮ್ರಶಾಸನವು ಪ್ರಾಚೀನ ತುಳುನಾಡಿನ ಏಕೈಕ ಕನ್ನಡದ ತಾಮ್ರಶಾಸನವೆಂದು ಪರಿಗಣಿತವಾಗಿದೆ. ಕ್ರಿ.ಶ. ೮ನೇ ಶತಮಾನಕ್ಕೆ ಇದು ಸೇರಿದುದಾಗಿದೆ. ಹಾಗೆಯೇ ಇದರಲ್ಲಿ ಬಳಸಿರುವ ಭಾಷೆಯೂ ಕನ್ನಡದಲ್ಲಿದೆ. ಗುರುರಾಜ ಭಟ್ಟರ ಪ್ರಕಾರ ಈ ಶಾಸನವನ್ನು ನೋಡಿದ ದೃಷ್ಟಿಕೋನವೆಂದರೆ ಕ್ರಿ.ಶ. ೭೭೦ರಿಂದ ೭೯೦ರವರೆ ಆಳ್ವಿಕೆ ನಡೆಸಿದ ಆಳುಪರಸನದ್ದಾಗಿರಬೇಕು. ಆ ನಂತರದಲ್ಲಿ ಆಳುಪ ಅರಸರು ಬಾದಾಮಿ ಚಾಲುಕ್ಯರ ಅಧೀನವಾಗಿದ್ದರೂ ಕೂಡಾ ಈ ಶಾಸನದಲ್ಲಿ ಅದಾವ ವಿಷಯವೂ ಉಲ್ಲೇಖವಿಲ್ಲ. ಆಳುಪರಸರ ಅಧೀನವಾಗಿರದೆ ಅವರ ಮೂಲಾಧಿಕಾರವನ್ನು ತ್ಯಜಿಸಿದ್ದಿರಬೇಕೆಂದು ಅಭಿಪ್ರಾಯಪಡುತ್ತಾರೆ. ಈ ತಾಮ್ರಶಾಸನದ ಮಹತ್ವವೆಂದರೆ ಎರಡನೇ ಆಳುಪರಸನು ಎರೆಯಪ್ಪರಸನು ತಲಕಾಡಿನ ಗಂಗರಸನಾದ ಶ್ರೀಪುರುಷನ ಎರಡನೇ ಮಗನಿರಬೇಕು. ಹಾಗೆಯೇ ಗಂಗರಾಜನಿಗೂ

ಆಳುಪರಸನಿಗೂ ಸಂಬಂಧ ಏರ್ಪಟಿದೆ ಎಂಬ ಅಭಿಪ್ರಾಯ ಇದೆ. 'ಮಹಾನಾಡು' ಎಂಬ ಆಡಳಿತ ಸಭೆಯಲ್ಲಿ ಪಾಲ್ಗೊಂಡು ಶಿವವಳ್ಳಿಯ ಕಟ್ಟುಕಟ್ಟಳೆಗಳನ್ನು ಬೆಳ್ಮಣ್ಣಿನ ಸಭೆಗೂ ಅನ್ವಯಿಸುವ ಆಜ್ಞೆಯನ್ನು ಹೊರಡಿಸಿದರೆಂಬುದು ಈ ಶಾಸನದಲ್ಲಿ ಮುಖ್ಯ ವಿಷಯವಾಗಿದೆ. ಅಲ್ಲದೆ ಗುರುರಾಜ ಭಟ್ಟರು ಈ ತಾಮ್ರಶಾಸನವನ್ನು ಇನ್ನೂ ಒಂದು ಶತಮಾನ ಹಿಂದಕ್ಕೊಯ್ಯಬಹುದು ಎಂದಿದ್ದಾರೆ,[41] ಅಂದರೆ ಕ್ರಿ.ಶ. ೭ನೇ ಶತಮಾನಕ್ಕೆ.

ಉದ್ಯಾವರದ ಬೊಮ್ಮೇಶ್ವರವೆಂಬಲ್ಲಿ ದೊರಕಿದ ಶಾಸನವು ಆಳುವ ವಂಶದ ಬಲ್ಲಮಹಾ ದೇವಿಯ ಕಾಲದ್ದಿದ್ದು ಅವಳು ಉದಯಪುರದ ಮನೆಯಲ್ಲಿ ಸಿಂಹಾಸನಸ್ಥೆಯಾಗಿ ಆಳುತ್ತಿದ್ದಳೆಂಬು ದನ್ನು ತಿಳಿಸುತ್ತ ಮಾಯರಪಳ್ಳಿ, ಕೊಡಂಕರಪಾಡಿ, ಬಯಲೂರು ಮತ್ತು ಕಂಮತ್ತೂರುಗಳು ಕೊಡಬೇಕಾದ ತೆರಿಗೆಯ ವಿಚಾರ ತಿಳಿಸುತ್ತದೆ. ಈ ಶಾಸನದ ಪ್ರಕಾರ ಶ್ವೇತವಾಹನನು ಆಳುಪೇಂದ್ರನ ಕಾಲದವನಾಗಿದ್ದಾನೆ.[42] ಇದರಿಂದ ಭಟ್ಟರು ಕಂಡುಕೊಂಡ ವಿಷಯವೆಂದರೆ ನಾಗದತ್ತ ಎಂಬುವವ ನಿಗೆ ಮಂಗಳೂರಿನಲ್ಲಿ ಪಾಂಡ್ಯ ನಾಯಕನೆಂದು ಹೆಸರಿಟ್ಟು ಪಟ್ಟಕಟ್ಟಿದುದು ಹಾಗೂ ಮಂಗಳೂರನ್ನು ಆಳುವ ಅರಸನಿಗೆ 'ಪಾಂಡ್ಯನಾಯಕ' ಎಂಬ ಹೆಸರಿಡುವ ಸಂಪ್ರದಾಯವಿತ್ತು. ಮಂಗಳೂರಿಗೆ ಕೂಡಲವೆಂಬ ಹೆಸರು ಕ್ರಿ.ಶ. ೯ನೇ ಶತಮಾನದಲ್ಲಿದ್ದುದನ್ನು ಈ ಶಾಸನ ತಿಳಿಸುತ್ತದೆ. ಅಲ್ಲದೆ ಈ ಶಿಲಾಶಾಸನದ ತುದಿಯಲ್ಲಿ ಎರಡು ಮೀನು ಮತ್ತು ಒಂದು ಕುದುರೆಯ ಚಿತ್ರವಿದೆ, ಮೀನು ಆಳುಪರಸರ ಲಾಂಛನ. ಇತರ ಯಾವ ಶಿಲಾಶಾಸನದಲ್ಲಿಯೂ ಇಂತಹ ಲಾಂಛನ ಇಷ್ಟರತನಕ ದೊರಕಲಿಲ್ಲ.

ಭಿನ್ನವಾದ ಇನ್ನೊಂದು ಶಾಸನವು ಕ್ರಿ.ಶ. ೮ನೇ ಶತಮಾನದ್ದಾಗಿದ್ದು ಎರಡನೇ ಆಳುಪರಸನ ಕಾಲದ್ದಾಗಿದೆ. ಉದ್ಯಾವರದಲ್ಲಿನ ಕಲ್ಬರಹದ ಶಾಸನದ ಪ್ರಕಾರ ಪಾಂಡ್ಯರಿಗೂ ಬಾದಾಮಿ ಚಾಲುಕ್ಯರಿಗೂ ಮಂಗಲಾಪುರದಲ್ಲಿ ಯುದ್ಧವಾಗಿ ಪಾಂಡ್ಯರು ಸೋತ ಐತಿಹಾಸಿಕ ಘಟನೆಯನ್ನು ಸ್ಮರಿಸಿಕೊಳ್ಳುವುದಾಗಿದೆ. ಅನಂತರ ಯುದ್ಧದಲ್ಲಿ ಆಳುಪರು ಬಾದಾಮಿಚಾಲುಕ್ಯರಿಗೆ ಸಹಾಯ ಮಾಡಿದ್ದಾರೆ. ಆದರೆ ಈ ಶಾಸನಕ್ಕಿಂತ ಮೊದಲು ತುಳುನಾಡಿನಲ್ಲಿ ದೊರಕಿರುವ ಯಾವ ಪ್ರಾಚೀನ ಶಾಸನದಲ್ಲಿಯೂ ಆಳುಪರು ಚಾಲುಕ್ಯರ ಹೆಸರನ್ನು ನಮೂದಿಸಿಲ್ಲ. ಇದರಿಂದ ತಿಳಿಯುವುದೇನೆಂದರೆ ಆಳುಪರು ಎಲ್ಲಾ ವಿಷಯಗಳಲ್ಲಿಯೂ ಸರ್ವಸ್ವತಂತ್ರರಾಗಿದ್ದರು. ಕ್ರಿ. ಶ. ೮ನೇ ಶತಮಾನದ ಯುದ್ಧದ ಅನಂತರ ಆಳುಪರು ಪಾಂಡ್ಯರ ಲಾಂಛನವಾದ ಎರಡು ಮೀನುಗಳನ್ನು ತಮ್ಮ ಲಾಂಛನವಾಗಿ ಸ್ವೀಕರಿಸಿರಬಹುದು ಹಾಗೂ ರಕ್ತಸಂಬಂಧ ಕೂಡಾ ಇದ್ದಿರಬಹುದು ಎಂಬುದನ್ನು ಕ್ರಿ.ಶ. ೭೦೭ನೇ ತಾಮ್ರಶಾಸನ ತಿಳಿಸುತ್ತದೆ. ಎಂಬುದಾಗಿ ಗುರುರಾಜ ಭಟ್ಟರು ಅಭಿಪ್ರಾಯಪಡುತ್ತಾರೆ.

ಗುರುರಾಜ ಭಟ್ಟರು ಪೊಳಲಿಯ ಶ್ರೀ ರಾಜರಾಜೇಶ್ವರಿ[43] ದೇವಾಲಯದ ಪ್ರವೇಶದ್ವಾರದ ಬಾಗಿಲುವಾಡದ ಮೇಲ್ಭಾಗದಲ್ಲಿರುವ ಶಾಸನವನ್ನು ಅಂದರೆ ನವರಂಗದಿಂದ ಗರ್ಭಗೃಹವನ್ನು ಪ್ರವೇಶಿಸುವಾಗ ಒಂದು ಸಾಲಿನ ಶಾಸನವನ್ನು ಗಮನಿಸಿದರು. ಇದು ಅತ್ಯಂತ ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿದೆ. ಆದರೆ ಇದಕ್ಕೂ ಮೊದಲಿನ ಇತಿಹಾಸಕಾರರುಗಳಾದ ಗಣಪತಿ ರಾವ್ ಐಗಳ್, ಬಿ. ಎ. ಸಾಲೆತ್ತೂರು ಅವರು ಇದನ್ನು ಗುರುತಿಸಿರುವುದು ಕಂಡುಬಂದಿಲ್ಲ. ಆದ ಕಾರಣ, ಇದರ ಎಲ್ಲ

ಕೀರ್ತಿ ಭಟ್ಟರಿಗೆ ಸಲ್ಲುತ್ತದೆ. ಈ ಒಂದು ಸಾಲಿನ ಕನ್ನಡ ಶಾಸನದಲ್ಲಿ 'ಕರಣದ ಮಣ್ಡಿರಾ ವಶುದೇವನ್ ಇಟ್ಟನ್' ಎಂಬ ನಾಲ್ಕು ಪದಗಳ ಶಾಸನವನ್ನು ಮಾತ್ರ ಕಾಣಬಹುದಾಗಿದೆ. ಇವರು ಕಂಡುಕೊಂಡ ಮಹತ್ವವೆಂದರೆ, ವಸುದೇವನು ದ್ವಾರಬಂಧವನ್ನು ಮಾಡಿಸಿರಬಹುದೆಂಬುದಾಗಿದೆ. ಇದು ಕ್ರಿ.ಶ. ಎಂಟನೆಯ ಶತಮಾನಕ್ಕೆ ಸೇರಿದ ಆಳುಪರ ಕಾಲದ ಶಾಸನವಾಗಿದೆ.[44] ಭಟ್ಟರು ತಿಳಿಸಿರುವಂತೆ, ಆಳುಪೇಂದ್ರನನ್ನು ಸಪ್ತಮಾತೃಕೆಯರು ರಕ್ಷಿಸುವರು ಹಾಗೆಯೇ ಈ ಸಪ್ತಮಾತೃಕೆ ಯಲ್ಲಿ ಪೊಳಲಿಯ ಶ್ರೀರಾಜರಾಜೇಶ್ವರಿ ಒಬ್ಬಳು ಎಂದು ತಿಳಿಸುತ್ತಾರೆ. ಈ ದೃಷ್ಟಿಯಿಂದ ನೋಡಿದಾಗ ಪೊಳಲಿಯಲ್ಲಿ ಶ್ರೀರಾಜರಾಜೇಶ್ವರಿಯ ಸ್ಥಾಪನೆಯಾದುದು ಆಳುಪರ ಕಾಲದಲ್ಲಿ ಎಂಬುದು ತಿಳಿಯುತ್ತದೆ.

ಪ್ರಾಚೀನ ಆಳುಪರಸರ ಬಗ್ಗೆ ತಿಳಿಯುವಾಗ ಮಂಗಳೂರು ಅಥವಾ ಮಂಗಳಾಪುರ ಇವರ ಪ್ರಥಮ ರಾಜಧಾನಿಯಾಗಿತ್ತು. ಅನಂತರ ಕ್ರಿ.ಶ. ೮, ೯, ೧೦ನೇ ಶತಮಾನದಲ್ಲಿ ಉದಯಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು ಎಂದು ತಿಳಿದುಬಂದಿದೆ. ೧೦ನೇ ಶತಮಾನದ ಮಧ್ಯಭಾಗದಲ್ಲಿ ಮಂಗಲಾಪುರಕ್ಕೆ ಪುನಃ ರಾಜಧಾನಿಯನ್ನು ವರ್ಗಾಯಿಸಲಾಯಿತು. ಅನಂತರ ೧೧ನೇ ಶತಮಾನದಲ್ಲಿ ಬಾರಕೂರಿಗೆ ರಾಜಧಾನಿಯನ್ನು ವರ್ಗಾಯಿಸಿದರು; ೧೨, ೧೩ನೇ ಶತಮಾನದವರೆಗೆ ರಾಜಧಾನಿಯಾಗಿ ಅಲ್ಲಿಯೇ ಮುಂದುವರಿದು ಅನಂತರ ಬದಲಾಯಿಸಿ ಕ್ರಿ.ಶ. ೧೫ನೇ ಶತಮಾನದವರೆಗೆ ಅಧಿಕಾರದಲ್ಲಿದ್ದಂತೆ ಭಾಸವಾಗುತ್ತದೆ.[45] ಶ್ವೇತವಾಹನನ ಉದ್ಯಾವರ ಶಾಸನದ ಮಹತ್ವವೆಂದರೆ ಗುರುರಾಜ ಭಟ್ಟರು ಅನ್ವೇಷಣೆ ನಡೆಸಿದ ಕಲ್ಬರಹದ ಶಾಸನದಲ್ಲಿ (ಕ್ರಿ.ಶ. ೮ರಿಂದ ೯ನೇ ಶತಮಾನ) ನಾಗದತ್ತವೆಂಬುವವನಿಗೆ ಮಂಗಳೂರಿನಲ್ಲಿ 'ಪಾಂಡ್ಯನಾಯ್ಕ' ಎಂಬ ಹೆಸರಿಟ್ಟು ಪಟ್ಟಕಟ್ಟಿದ ಸನ್ನಿವೇಶವೆಂದರೆ, ಮಂಗಳೂರನ್ನು ಆಳುವ ಅರಸರಿಗೆ ಪಾಂಡ್ಯನಾಯ್ಕ ಎಂಬ ಹೆಸರಿಡುವ ಸಂಪ್ರದಾಯ. ಹಾಗೆಯೇ ಇನ್ನೊಂದು ವೈಶಿಷ್ಟ್ಯವೆಂದರೆ, ೯ನೇ ಶತಮಾನದಲ್ಲಿನ ಈ ಶಿಲಾಶಾಸನದ ತುದಿಯಲ್ಲಿ 'ಎರಡು ಮೀನು ಮತ್ತು ಒಂದು ಕುದುರೆ'ಯ ಚಿತ್ರವಿದೆ. ಮೀನು ಆಳುಪರಸರ ಲಾಂಛನ.[46] ಇತರ ಯಾವ ಶಿಲಾಶಾಸನದಲ್ಲಿಯೂ ಇಷ್ಟರತನಕ ಈ ರೀತಿಯ ಲಾಂಛನ ದೊರಕಲಿಲ್ಲ.

ಕಾಪುವಿನ ತಾಮ್ರಶಾಸನವು[47] ಹಲವು ರೀತಿಯಲ್ಲಿ ವಿಶಿಷ್ಟತೆಯನ್ನು ಒಳಗೊಂಡಿದೆ ಎಂದು ಗುರುರಾಜ ಭಟ್ಟರ ಅಭಿಪ್ರಾಯವಾಗಿದೆ.

೦೧. ಕುಂದ ಹೆಗ್ಗಡೆಯು ರಾಜ್ಯದ ಅರಸನಾಗಿದ್ದನು. ಈತನು ಸುಂಕದ ಒಡೆಯನೆಂಬುದಾಗಿ ಸಂಬೋಧಿಸಲ್ಪಟ್ಟಿದ್ದರಿಂದ ಬಾರಕೂರು ರಾಜ್ಯಕ್ಕೆ ಸಲ್ಲುವ ಸುಂಕವನ್ನು ವಸೂಲಿಮಾಡುವ ಜವಾಬ್ದಾರಿಯನ್ನು ಪಡೆದುಕೊಂಡಿದ್ದ. ಇಲ್ಲಿ ಕುಂದಹೆಗ್ಗಡೆಗೂ ಮತ್ತು ತಿರುಮಲರಸನಾದ ಮರ್ದ್ದ ಹೆಗ್ಗಡೆಗೂ ಒಂದು ಒಪ್ಪಂದವಾದ ದಾಖಲೆ ಇದಾಗಿದೆ. ಅದೇನೆಂದರೆ ಅವರಿಬ್ಬರ ರಾಜ್ಯಗಳಿಗೆ ಅನ್ಯಶತ್ರುಗಳು ಯಾರೇ ಧಾಳಿಮಾಡಿದರೂ ಕೂಡಾ ಇವರಿಬ್ಬರು ಒಟ್ಟಾಗಿ ತಮ್ಮ ಸ್ವಂತ ಖರ್ಚಿನಲ್ಲಿಯೇ ಆಯುಧಗಳನ್ನು ಪಡೆದು ಕೊಂಡು ಶತ್ರುಗಳ ವಿರುದ್ಧ ಹೋರಾಟ ಮಾಡಿ ಜಯಗಳಿಸಬೇಕು. ಒಂದುವೇಳೆ ಅವರಿಬ್ಬರ ನಡುವೆಯೇ ವೈರತ್ವ ಬಂದರೆ ಅದನ್ನು ಯಾವ ಶತ್ರುತ್ವವಿಲ್ಲದೆ ವಿಚಾರದಿಂದಲೇ ಅದನ್ನು ಬಗೆಹರಿಸಿಕೊಳ್ಳಬೇಕು. ಇದಕ್ಕೆ ಸಾಕ್ಷಿಯಾಗಿ

ಕಾರ್ಕಳದ ಮೂರು ಭೈರರಸ ಒಡೆಯರಾದ ಪಾಂಡ್ಯದೇವರಸರು ಸಾಕ್ಷಿ ಎಂದು ಈ ಶಿಲಾಶಾಸನದಿಂದ ತಿಳಿಯುತ್ತದೆ. ಕ್ರಿ.ಶ. ೧೫, ೧೬ನೇ ಶತಕದ ರಾಜಕೀಯ ಪರಿಸ್ಥಿತಿ ಈ ದಾಖಲೆಗಳಿಂದ ಸ್ಪಷ್ಟಗೊಳ್ಳುತ್ತದೆ ಎಂಬುದು ಭಟ್ಟರ ಅಭಿಪ್ರಾಯ.

೦೨. ಪಶ್ಚಿಮ ಘಟ್ಟಗಳಲ್ಲಿ ಎಂಟು ಕಡೆ ವ್ಯಾಪಾರಕ್ಕೆ ಅನುಕೂಲವಾಗುವ ಹಾದಿಗಳಿದ್ದವು. ಇದರಿಂದಾಗಿ ಎತ್ತುಗಳ ಮೂಲಕ ಸಾಗಾಣಿಕೆ ಮಾಡುತ್ತಿದ್ದರು. ಮತ್ತು ಅವುಗಳನ್ನು ಕೊಲ್ಲುವುದು ಮಹಾಪಾತಕವೆಂದು ತಿಳಿದುಬರುತ್ತದೆ.

೦೩. ಶೈವ ಸಂಪ್ರದಾಯಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದರು.

೦೪. ಕ್ರಿ.ಶ. ೧೫ನೇ ಶತಮಾನದ ಹೊತ್ತಿಗೆ ನಂದಳಿಕೆಯ ದೈವಗಳು ಹೆಚ್ಚು ಪ್ರಾಮುಖ್ಯವನ್ನು ಹೊಂದಿದಂತೆ ಕಂಡುಬರುತ್ತದೆ. ಈ ದೈವಗಳೆಂದರೆ ಅಬ್ಬಕ್ಕ ಮತ್ತು ದಾರಕ್ಕ ಸಿರಿಗಳು[48] (ಅಬ್ಬಗೆ–ದಾರಗೆ). ಈ ರೀತಿಯಾಗಿ ಭಟ್ಟರು ತಾಮ್ರಶಾಸನದ ಮಹತ್ವವನ್ನು ಕಂಡು ಕೊಂಡಿದ್ದಾರೆ.

ಉಡುಪಿ ತಾಲೂಕಿನ ವಡ್ಡರ್ಸೆ ಶಾಸನದಲ್ಲಿ ಕೆ.ವಿ. ರಮೇಶ್[49] ಅವರು ಕದಂಬಮಂಡಲದ ಪ್ರಸ್ತಾಪ ಕಂಡುಬರುವುದಿಲ್ಲವೆಂದು ಹೇಳಿದ್ದಾರೆ. ಆದರೆ ಗುರುರಾಜ ಭಟ್ಟರು ತಿಳಿಸುವಂತೆ ಇಲ್ಲಿನ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ದೊರೆತ ಶಾಸನವನ್ನು ಕನಕಶಿವನ್ ಎಂಬವನು ಬರೆದಿದ್ದಾನೆ. ಹಾಗೆಯೇ ವಡ್ಡರ್ಸೆಯೂ ಒಂದು ರಾಜಕೀಯ ಕೇಂದ್ರವಾಗಿತ್ತು.[50] ಅಲ್ಲದೆ ಕದಂಬ ವರ್ಮನ ಹೆಸರು ಉಲ್ಲೇಖವಾಗಿದೆ. ಇವನೇ ಕುಂದವರ್ಮನಾಗಿರಬಹುದು ಎಂಬುದು ಭಟ್ಟರ ಅನಿಸಿಕೆ. ಅತ್ಯಂತ ಪ್ರಾಚೀನ ಶಾಸನವಾಗಿರುವ ವಡ್ಡರ್ಸೆ ಶಾಸನವು ಕ್ರಿ.ಶ. ೭ನೇ ಶತಮಾನಕ್ಕೆ ಸೇರಿದುದಾಗಿದೆ. ಕೆ.ವಿ. ರಮೇಶ್ ಅವರು ವಡ್ಡರ್ಸೆ ಶಾಸನವು ಒಂದನೇ ಆಳುಪರಸನಿಗೆ ಸೇರಿದುದೆಂದು ತಿಳಿಸುತ್ತಾರೆ.[51] ಆದರೆ ಭಟ್ಟರು ಇದನ್ನು ಎರಡನೇ ಆಳುಪರಸರಿಗೆ ಸಂಬಂಧಪಟ್ಟದ್ದೆಂದು ಗುರುತಿಸಿದ್ದಾರೆ. ಹಾಗೆಯೇ ಇದರಲ್ಲಿ ತೇದಿಯೂ ದೊರಕುವುದಿಲ್ಲ.

ಕಡಂದಲೆಯಲ್ಲಿ ದೊರಕಿದ ಶಾಸನವು[52] ರಾಜಕೀಯ ಮತ್ತು ಧಾರ್ಮಿಕ ಇತಿಹಾಸದ ಮೇಲೆ ಸಾಕಷ್ಟು ಬೆಳಕು ಬೀರುತ್ತದೆ. ಇದು ಎರೆಬೊಯ್ಯಗ್ವವರ್ಮರಸನು ಆಳುಪರಸರ ಮನೆತನಕ್ಕೆ ಸೇರಿದವನೆಂದು, ಈತನ ಕಾಲ ಕ್ರಿ.ಶ. ೮೭೫ರಿಂದ ೯೦೦ರ ವರೆಗೆ. ಇವನ ಸಹಾಯಕನಾಗಿ ವಳ್ಳಕಣ್ಣಂಬನೆಂಬ ಸ್ಥಳೀಯ ಅಧಿಕಾರಿ ಹೆಸರು ಕೂಡ ಈ ಶಾಸನದಿಂದ ಹೊರಬಂದಿದೆ. ಅನಂತರ ಎರೆಬೊಯ್ಯಗ್ವವರ್ಮರಾಜನು ಪಾರಿಪಾಳಿ ಕ್ಷೇತ್ರವನ್ನು ಕಂದಪೂಳ್ ಭಟ್ಟಾರಕರಿಗೆ ಕೊಟ್ಟನು. ಆ ನಂತರದಲ್ಲಿ ಈ ಪಾರಿಪಾಳಿ ಕ್ಷೇತ್ರವು ಯಾವುದೇ ತೆರನಾದ ತೆರಿಗೆಗಳಿಂದ ಹೊರತಾಗಿತ್ತು. ಅಲ್ಲದೆ ಧಾರ್ಮಿಕವಾಗಿ ಇತಿಹಾಸದ ಮೇಲೆ ಮಹತ್ವವಾದುದೆಂದು 'ಕುಂದಪೂಳ್ ಭಟ್ಟಾರಕ' ಎಂದರೆ ಸ್ಕಂದದೇವತೆ ಅಂದರೆ ಶ್ರೀಸುಬ್ರಹ್ಮಣ್ಯಸ್ವಾಮಿ ಅಲ್ಲದೆ ಕ್ರಿ.ಶ. ೯ನೇ ಶತಮಾನದಲ್ಲಿ ಕಡಂದಲೆಯಲ್ಲಿ ಇದರ ಆರಾಧನೆ ಇತ್ತೆಂಬುದಕ್ಕೆ ಸಾಕ್ಷಿ ಇದಾಗಿದೆ. ತುಳುನಾಡಿನಲ್ಲಿ ದೊರಕಿದ ಶಾಸನಗಳಲ್ಲಿ ಸ್ಕಂದದೇವತೆಯ ಉಲ್ಲೇಖವನ್ನು ಮಾಡಿದುದರಲ್ಲಿಯೇ ಇದು ಪ್ರಥಮವಾಗಿದೆ ಎಂದು ತಿಳಿಸಿದ್ದಾರೆ. "ಈ ಸ್ಕಂದ ವಿಗ್ರಹವು ಕ್ರಿ.ಶ.

೧೦ರಿಂದ ೧೧ನೇ ಶತಕದ ಚೋಳರ ಕಾಲದ ಶೈಲಿಯನ್ನು ಹೋಲುತ್ತದೆ. ಇದು ಜಟಾಮುಕುಟವುಳ್ಳ ಬಿಂಬವಾಗಿದೆ." ಎಂದು ಭಟ್ಟರು ಅಭಿಪ್ರಾಯಪಟ್ಟಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಡುಬರುವ ಸ್ಕಂದವಿಗ್ರಹಗಳಲ್ಲಿ ಇದು ಅತೀ ಪ್ರಾಚೀನ ಎಂದಿದ್ದಾರೆ. ಕಡಂದಲೆಯ ಪುತ್ತಿಗೆ ಚೌಟರಸನ ಆಳ್ವಿಕೆಗೆ ಸೇರಿತ್ತು.[53]

ಅಲ್ಲದೆ ಗುರುರಾಜ ಭಟ್ಟರ ಪ್ರಕಾರ ಆಳುಪರಸರು ಪಾಂಡ್ಯ ಕುಲಕ್ಕೆ ಸೇರಿದವರಿರಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ತೀರ್ಮಾನಕ್ಕೆ ಕ್ರಿ.ಶ. ೭೦೭ರ ಶಿಗ್ಗೋಮ್ ತಾಮ್ರಶಾಸನ ಪುರಾವೆಯನ್ನೊದಗಿಸುತ್ತದೆ. (ಇದರ ವಿವರ ಜಿ.ಎಸ್. ಗಾಯ್ ಅವರಿಂದ ಕೊಡಲ್ಪಟ್ಟಿದೆ). ಭಟ್ಟರು ಶಾಸನಗಳ ಅಧ್ಯಯನದಿಂದ ಅಳಿಯಸಂತಾನದ ಕುರುಹಗಳನ್ನು ಗುರುತಿಸಬಹುದು ಎಂದಿದ್ದಾರೆ. ಅಂತೆಯೇ ಕಡಂದಲೆಯಲ್ಲಿ ದೊರಕಿದ ಶಿಲಾಶಾಸನದಲ್ಲಿ ಮಹತ್ವವೇನು ಎಂಬುದನ್ನು ತಿಳಿಸಿದ್ದಾರೆ. ಎರೆಬೊಯ್ಯಗ್ಗವರ್ಮರಸನ ಉಲ್ಲೇಖವನ್ನು ತಿಳಿಸಿದ್ದಾರೆ.[54] ಇವನು ಆಳುಪ ಮನೆತನಕ್ಕೆ ಸೇರಿದವನು. ಹಾಗೆಯೇ ತುಳುನಾಡನ್ನು ೨೫ ವರ್ಷಗಳ ಕಾಲ ಆಳಿಕೊಂಡಿದ್ದ. ಭಟ್ಟರು ಉದಯ ಪುರದಲ್ಲಿ ಹೆಚ್ಚಿನ ಉತ್ಖನನವಾಗಬೇಕೆಂದು ತಿಳಿಸುತ್ತಾರೆ. ಈ ಸ್ಥಳದಲ್ಲಿ ಕ್ರಿ.ಶ. ೮–೯ನೇ ಶತಮಾನಕ್ಕೆ ಸೇರಿದ ಇಷ್ಟರ ತನಕ ಸುಮಾರು ೧೦–೧೫ ಶಾಸನಗಳು ದೊರಕಿವೆ. ಇದರಿಂದ ಭಟ್ಟರು ಕಂಡುಕೊಂಡದ್ದೇನೆಂದರೆ ಮಯೂರ ವರ್ಮನ ಆಳ್ವಿಕೆಯು ಉದ್ಯಾವರದಲ್ಲಿತ್ತೆಂದು. ಆದರೆ ಇಷ್ಟರತನಕ ಇದಕ್ಕೆ ಪೂರಕವಾದ ಯಾವುದೇ ಆಧಾರಗಳು ದೊರಕಿಲ್ಲ. ಬನವಾಸಿಯ ಕದಂಬರಿಗೂ, ಹಾಗೂ ಆಳುಪರಸರಿಗೂ ಸಂಬಂಧವಿದ್ದಿರಬಹುದು. ಈ ಸ್ಥಳಗಳಲ್ಲಿ ಉತ್ಖನನ ಮಾಡುವುದರಿಂದ ಇಂತಹ ವಿಷಯಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ವಿವರಗಳು ಸಿಗಬಹುದು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಈ ರಾಜಕೀಯ ಹಾಗೂ ಸಾಂಸ್ಕೃತಿಕ ನೆಲೆಯಲ್ಲಿ ಪ್ರಸಿದ್ಧವಾದ ಉದ್ಯಾವರದ ಬಗ್ಗೆ ಇನ್ನಷ್ಟು ಮಾಹಿತಿ ಮುಂದೆ ಸಿಗಬಹುದು ಎಂಬ ಭಟ್ಟರು ಅಭಿಪ್ರಾಯಪಡುತ್ತಾರೆ. ೭–೮ನೇ ಶತಮಾನಕ್ಕೆ ಸೇರಿದ ಗಣೇಶವಿಗ್ರಹ ಇಲ್ಲಿದೆ. ಈಶ್ವರ ದೇವಾಲಯವು ದ. ಕನ್ನಡದಲ್ಲಿ ಆರಂಭದ ದೇವಾಲಯವೆಂದು ಪರಿಗಣಿಸಲ್ಪಟ್ಟಿದೆ.

ಕಾರ್ಕಳ ತಾಲೂಕು ವರಾಂಗ ಮಠದಲ್ಲಿ[55] ದೊರಕಿದ ಒಂದು ತಾಮ್ರ ಶಾಸನವು, ಭಟ್ಟರು ತಿಳಿಸುವಂತೆ, "ವಿಜಯನಗರದ (ಕ್ರಿ.ಶ. ೧೪೨೯) ದೇವರಾಯನ ಕಾಲದ್ದು. ಆದರೆ ಇಲ್ಲಿ ಒಂದು ವಿಮರ್ಶೆಯನ್ನು ಮುಂದಿಟ್ಟಿದ್ದಾರೆ. ಅದೇನೆಂದರೆ ಕ್ರಿ.ಶ. ೧೪೨೯ರಲ್ಲಿ ಮಂಗಳೂರು ರಾಜ್ಯಕ್ಕೆ ಪ್ರತ್ಯೇಕ ಉಲ್ಲೇಖವಿದೆ. ಆದರೆ ಇತರ ದಾಖಲೆಗಳಲ್ಲಿ ತುಳುದೇಶವೆಂಬುವುದು ಬಾರಕೂರು ರಾಜ್ಯಕ್ಕೆ ಸೇರಿದುದಾಗಿದೆ. ಇದು ಗೊಂದಲದ ವಿಷಯವಾಗಿದೆ. ಇಲ್ಲಿ ಕುಡುಕಪುರ ಮತ್ತು ಮಾತಂಗ ಕಲಿ" ಎಂಬುದು ಯಾವ ಪ್ರದೇಶಗಳೆಂಬುದನ್ನು ತಿಳಿದುಕೊಳ್ಳಬೇಕಷ್ಟೆ. ಅಲ್ಲದೆ ಮತ್ತೊಂದು ಗಮನಾರ್ಹ ವಿಷಯವೆಂದರೆ ವರಾಂಗವು ಜೈನಧರ್ಮದ ಕೇಂದ್ರವಾದರೂ ಕೂಡಾ ಅಲ್ಲಿ ದೊರಕಿರುವ ತಾಮ್ರಶಾಸನದಲ್ಲಿ ಜೈನಧರ್ಮಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳಿಲ್ಲ. ಇಲ್ಲಿಯ ನೇಮಿನಾಥ ಬಸದಿಯಲ್ಲಿ ಹೊಯ್ಸಳರ ಕಾಲಕ್ಕೆ ಸೇರಿದ ಎರಡು ಮೂರ್ತಿಗಳು ದೊರಕಿದ್ದಾವೆ. ಇವುಗಳ ಹರಿಪೀಠದಲ್ಲಿ ಶಾಸನಗಳ ಪ್ರಸ್ತಾವವಿರುವುದನ್ನು ಗುರುತಿಸಿದ್ದಾರೆ.[56] 'ಜೈನರ ಕಾಶಿ' ಎಂದೇ

ಹೆಸರುಮಾಡಿದಂತಹ ಮೂಡಬಿದಿರೆಯಲ್ಲಿ ನೂರಾರು ಬಸದಿಗಳು, ಶಿಲಾತಾಮ್ರ ಶಾಸನಗಳು ದೊರೆತಿವೆ. ಆದರೆ ಇವುಗಳ ನಿರ್ಮಾಣದ ಸ್ಪಷ್ಟ ಉಲ್ಲೇಖ ಕಡಿಮೆ. ಕಾಲಗರ್ಭದಲ್ಲಿ ಮರೆಯಾಗಿರ ಬಹುದೆಂದು ಭಟ್ಟರ ಅಭಿಪ್ರಾಯ. ಹಾಗೆಯೇ ಕೆಲವು ಇತಿಹಾಸಕಾರರು ಕಾರ್ಕಳದ ಭೈರರಸ ಒಡೆಯರು ದಕ್ಷಿಣ ಕನ್ನಡದ ಜೈನ ಅರಸೊತ್ತಿಗೆಗಳಲ್ಲಿ ಒಬ್ಬರು. ಆದರೆ ಇವರ ಮೂಲದ ಬಗ್ಗೆ ಸರಿಯಾದ ದಾಖಲೆಗಳು ಇರಲಿಲ್ಲ. ಕ್ರಿ.ಶ. ೧೨೯೬ ಶಿಲಾಶಾಸನವು ಜೈನರ ಇತಿಹಾಸದಲ್ಲಿಯೇ ಒಂದು ಹೊಸ ಬೆಳಕನ್ನು ಮೂಡಿಸಿದೆ. ಇದು ಶಾ.ಶ. ೧೨೧೮ರದ್ದಿದ್ದು (ಕ್ರಿ.ಶ. ೧೨೯೬) ಭಟ್ಟರ ಪ್ರಕಾರದಂತೆ ಅತ್ಯಂತ ಪ್ರಾಚೀನ ಜೈನಶಾಸನ ಇದಾಗಿದೆ. ಇದಕ್ಕೂ ಮುಂಚಿನ ಅಭಿಪ್ರಾಯ ಎಂದರೆ ಇಷ್ಟರತನಕ ತಿಳಿದಂತೆ ಕಾಳಲದೇವಿಯ ಕಾಲ ೧೨೮೫ ಎಂದು ತಿಳಿದಿದ್ದರು. ಆದರೆ, ಅನಂತರ ಬರುವ ಶಾಸನದಲ್ಲಿ ಕಾಳಲದೇವಿಯ ಕಾಲ ೧೨೯೬ ವಿಸ್ತರಿಸಿದೆ ಎಂಬುದನ್ನು ತಿಳಿಸುತ್ತದೆ. ಇದು ಕಾರ್ಕಳ ಪ್ರದೇಶಕ್ಕೆ ಸೇರಿದುದಾಗಿದೆ. ಇದರ ಐತಿಹಾಸಿಕ ಮಹತ್ವವೆಂದರೆ ಕಾಳಲದೇವಿಯ ಪ್ರಥಮ ಶಾಸನವೆಂದಿದ್ದಾರೆ.[57] ನಲ್ಲೂರಿನ ಶಿರಾಲಿನಲ್ಲಿ ದೊರಕಿದ ಶಾಸನವನ್ನು ಉಲ್ಲೇಖಿಸುತ್ತಾ ಇದು ಹಳ್ಳಿಯಾದರೂ ಕೂಡ ಜೈನಧರ್ಮದ ಬಹು ದೊಡ್ಡ ಕೇಂದ್ರವಾಗಿತ್ತು. ಅಲ್ಲದೆ ಇಲ್ಲಿಯ ಬಸದಿಗಳು ರಾಷ್ಟ್ರಕೂಟರ ಕಾಲದಲ್ಲಿಯೇ ನಿರ್ಮಾಣವಾಗಿರಬಹುದೆಂದು ಭಟ್ಟರು ಅಭಿಪ್ರಾಯಪಡುತ್ತಾರೆ.

ತುಳುನಾಡಿನಲ್ಲಿ ಪ್ರಾಚೀನ ಜೈನರ ಕೇಂದ್ರವೆಂದು ಹಟ್ಟಿಯಂಗಡಿಯನ್ನು[58] ಇಲ್ಲಿಯ ತನಕ ಯಾರೂ ಗುರುತಿಸಿರಲಿಲ್ಲ. ಇಲ್ಲಿಯ ಚಂದ್ರನಾಥ ಬಸದಿಯಲ್ಲಿ ಸಿಕ್ಕಿದಂತಹ ಎರಡು ಶಾಸನಗಳ ಮೂಲಕ ಗುರುರಾಜ ಭಟ್ಟರು ಇವು ೧೪ನೆಯ ಶತಮಾನದವುಗಳಾಗಿವೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇವುಗಳ ಮಹತ್ವವೆಂದರೆ, ಪ್ರಥಮ ಬಾರಿಗೆ ದೊರೆತಂತಹ ಕಲ್ಬರಹಗಳೂ ಕೂಡ ಇವಾಗಿವೆ. ಅಂದರೆ ಕ್ರಿ.ಶ. ೯ನೆಯ ಶತಮಾನದಲ್ಲಿ ಜಿನದತ್ತ ರಾಯನೆಂಬ ಜೈನ ಅರಸನು ಹುಂಬುಚ್ಚವನ್ನು ಆಳಿಕೊಂಡಿದ್ದು ಚಂದ್ರನಾಥ ಬಸದಿಗೆ ದಾನ ಕೊಟ್ಟ ಉಲ್ಲೇಖವನ್ನು ಸ್ಪಷ್ಟ ಪಡಿಸಿದ್ದಾನೆ. ಇದರಿಂದಾಗಿ, ಹಟ್ಟಿಯಂಗಡಿಯನ್ನು 'ಪ್ರಾಚೀನ ಜೈನರ ಸ್ಥಳ'ವೆಂದು ಗುರುತಿಸಬಹುದಾಗಿದೆ ಎಂದು ಭಟ್ಟರು ಅಭಿಪ್ರಾಯಪಡುತ್ತಾರೆ. ಮತ್ತೊಂದು ವೈಶಿಷ್ಟ್ಯವೆಂದರೆ, ದಕ್ಷಿಣ ಕನ್ನಡವನ್ನು ಆಳಿದಂತಹ ಆಳುಪ ಅರಸರು ಶಾಚೀತರರ ಪ್ರಭಾವಕ್ಕೆ ಒಳಗಾಗಿದ್ದರು ಎಂದು ತಿಳಿಯಬಹುದು. ಈ ಜಿನದತ್ತರಾಯನು ಶಾಚಿತರರ ವಂಶಕ್ಕೆ ಸೇರಿದವನು. ಇದನ್ನು ಉದ್ಯಾವರದಲ್ಲಿ ದೊರಕಿದ ಶಾಸನದಲ್ಲಿ ಉಲ್ಲೇಖ ಮಾಡಲಾಗಿದೆ. ಒಟ್ಟಾರೆಯಾಗಿ ಹಟ್ಟಿಯಂಗಡಿಯ ಚಂದ್ರನಾಥ ಬಸದಿಯು ಕೇವಲ ಧಾರ್ಮಿಕ ಸ್ಥಳವಾಗಿರದೆ ಇದನ್ನು ಜೈನರ ಧರ್ಮದ ಕೇಂದ್ರಗಳಲ್ಲಿಯೇ[59] ಅತ್ಯಂತ ಪ್ರಾಚೀನವಾದುದೆಂದು ಭಟ್ಟರು ತಿಳಿಸುತ್ತಾರೆ. ಹಾಗಾಗಿ ಭಟ್ಟರು ಈ ಪ್ರದೇಶದಲ್ಲಿನ ಜೈನಧರ್ಮದ ಬಗ್ಗೆ ಹೊಸ ಬೆಳಕು ಚೆಲ್ಲುತ್ತಾರೆ. ಭಟ್ಟರು ಅಭಿಪ್ರಾಯಪಡುವಂತೆ ಇನ್ನೂ ಹೆಚ್ಚಿನ ಉತ್ಖನನ ಮತ್ತು ಸಂಶೋಧನೆಗಳು ನಡೆದರೆ ಹಲವಾರು ವಿಚಾರಗಳು ಗೋಚರವಾಗುತ್ತವೆ. ಮತ್ತು ಮೊದಲಿದ್ದ ದೃಷ್ಟಿಕೋನಗಳು ಬದಲಾಗುತ್ತವೆ ಎಂದಿದ್ದಾರೆ. ಜೈನರ ಮಂದಿರಗಳಿಗೆ ಸಾಕ್ಷಿಯಾಗಿ ಪಡುಬಿದಿರೆಯಲ್ಲಿ ದೊರಕಿರುವ ಜೈನ ತಾಮ್ರಶಾಸನವೂ ಕೂಡ ಇದಕ್ಕೆ ಪೂರಕವಾಗಿದೆ.

ಕಲ್ಬರಹದ ಶಾಸನಗಳನ್ನು ಕೂಡ ಈ ಸಂದರ್ಭದಲ್ಲಿ ಕಾಣಬಹುದಾಗಿದೆ. ಇವುಗಳಿಂದ ಇತಿಹಾಸದ ಪುನರ್ನಿರ್ಮಾಣವೆಂಬುದೂ ಆಗಿದೆ. ಏಕೆಂದರೆ, ದಕ್ಷಿಣ ಕನ್ನಡದಲ್ಲಿಯೇ ದೊರಕಿದ ಪ್ರಥಮ ಶಾಸನವೆಂದರೆ ಕೊಣಾಜೆ ಬಂಡೆ ಶಾಸನ[60] ಎಂದು ಭಟ್ಟರು ಹೇಳುತ್ತಾರೆ. ಈ ಶಾಸನದಲ್ಲಿ 'ಶ್ರೀ ಮಾಧವ ರಾನೆ ಸಿಟ್ಟಿಗೆ ಎಂಬೋಕ ಲೂಟಿ' ಎಂಬುದಾಗಿ ಇರುವ ವಾಕ್ಯವು ವಿಶೇಷವಾಗಿದೆ. ಚಾರಿತ್ರಿಕ ದೃಷ್ಟಿಕೋನದಿಂದ ಇದು ಮಹತ್ವಪೂರ್ಣವೆನಿಸಿಕೊಂಡಿದೆ.

ಇಷ್ಟೇ ಅಲ್ಲದೆ ಸಾಗರ ತಾಲೂಕು ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದ ಚಾಲುಕ್ಯ ಕಾಲದ ವಿನಯಾದಿತ್ಯನಿಗೆ ಸಂಬಂಧಿಸಿ ಜಂಬಾನಿಯಲ್ಲಿ ಶಾಸನವನ್ನು ಪ್ರಥಮವಾಗಿ ಗುರುತಿಸಿದ್ದಾರೆ. ಇದು ಕ್ರಿ.ಶ. ೭ನೇ ಶತಮಾನದ ಮಧ್ಯಭಾಗಕ್ಕೆ ಸೇರಿದ ಕನ್ನಡದ ಶಾಸನವಾಗಿದೆ.

ತುಳುನಾಡಿನ ಶಾಸನಗಳ ಅಧ್ಯಯನದಲ್ಲಿ ಪಿ. ಗುರುರಾಜ ಭಟ್ಟರು ಮಹತ್ವವಾದಂತಹ ಸಾಧನೆಯನ್ನು ಮಾಡಿದ್ದಾರೆ ಎಂದರೆ ತಪ್ಪಾಗಲಾರದು. ಹೊಸಹೊಸ ವಿಷಯಗಳನ್ನು ಗುರುತಿಸಿ, ಈ ನಾಡಿನ ಚರಿತ್ರೆಯ ರಚನೆಗೆ ಹೊಸ ಆಯಾಮವನ್ನು ತಂದುಕೊಡುವಲ್ಲಿ ಯಶಸ್ವಿಯಾಗಿದ್ದರು. ಈ ಶಾಸನಗಳ ಅಧ್ಯಯನದಿಂದ ಅಲ್ಲಿಯವರೆಗೆ ಚಾಲ್ತಿಯಲ್ಲಿದ್ದ ಚರಿತ್ರೆಯು ಹೊಸ ವಿಷಯಗಳ ಸೇರ್ಪಡೆಯೊಂದಿಗೆ ಮಾರ್ಪಾಟಾದುದನ್ನು ಕಾಣಬಹುದಾಗಿದೆ. ತಮ್ಮ ಸಂಶೋಧನೆಗಳನ್ನು ಗುಟ್ಟಾಗಿಡದೆ ಜನಸಾಮಾನ್ಯರತ್ತ ತಲುಪಿಸುವ ಕಾರ್ಯವನ್ನು ಭಟ್ಟರು ಮಾಡಿದ್ದಾರೆ. ಹಾಗಾಗಿ ತುಳುನಾಡಿನ ಜನರ ಮನದಲ್ಲಿ ಅವರು ಅಚ್ಚಳಿಯದೆ ಅವರ ನೆನಪುಗಳು ಇಂದಿಗೂ ಉಳಿದಿವೆ. ಕ್ರಿ. ಶ. ೭ನೇ ಶತಮಾನದ ಮಧ್ಯಭಾಗದಿಂದ ಕ್ರಿ. ಶ. ೧೮ನೇ ಶತಮಾನದ ಕೊನೆಯವರೆಗಿನ ೧೧ ಶತಮಾನಗಳಿಗೂ ಹೆಚ್ಚಿನ ದೀರ್ಘಾವಧಿಯ ತುಳುನಾಡಿನ ಇತಿಹಾಸವನ್ನು ಪುನಾರಚಿಸುವಲ್ಲಿ ಶಾಸನಗಳ ಪ್ರಾಮುಖ್ಯತೆ ಬಹಳ. ಶಿಲಾ ಮತ್ತು ತಾಮ್ರ ಶಾಸನಗಳು ಕಲ್ಬರಹಗಳು ಈಗಾಗಲೇ ಬೆಳಕಿಗೆ ಬಂದಿವೆ. ಪ್ರಾಥಮಿಕ ಆಕರಗಳಲ್ಲಿ ಶಾಸನಗಳು ಅತೀವ ಮುಖ್ಯವಾಗಿವೆ. ಇವುಗಳನ್ನು ಕೆ.ವಿ. ರಮೇಶ್,[61] ವಸಂತ ಶೆಟ್ಟಿ[62] ಹೀಗೆ ಕೆಲವು ಮಂದಿ ತಮ್ಮ ಇತಿಹಾಸದ ಪುನಾರಚನೆಯಲ್ಲಿ ಈ ಎಲ್ಲ ಶಾಸನಗಳನ್ನು ತಮ್ಮ ಗ್ರಂಥಗಳ ರಚನೆಯಲ್ಲಿ ಉಪಯೋಗಿಸಿದ್ದಾರೆ.

ಸಂದರ್ಭಸೂಚಿಗಳು:

1. ದ ಗೆಜೆಟಿಯರ್ ಆಪ್ ಸೌತ್‌ಕೆನರಾ –ಸೌತ್‌ಕೆನರಾ ಮ್ಯಾನ್ಯುವಲ್, ಪು. V-Viii.; ಬಿ.ಎಲ್. ರೈಸ್, ಮೈಸೂರು ಆಂಡ್ ಕೂರ್ಗ್ ಫ್ರಮ್ ಇನ್‌ಸ್ಕ್ರಿಪ್ಶನ್, ಪು. 137.
2. ರಾಬರ್ಟ್ ಸಿ.ವೆಲ್, ಲಿಸ್ಟ್ ಆಫ್ ದ ಆಂಟಿಕ್ವೇರಿಯನ್ ರಿಮೈನ್ಸ್ ಇನ್ ದ ಮದ್ರಾಸ್ ಪ್ರಸಿಡೆನ್ಸಿ, ವಾಲ್ಯೂಮ್ 1. ಪು. 238 (ಪ್ರಿಂಟೆಡ್ ಬೈ ಇ. ಕೀಸ್ ಎಟ್ ದ ಗವರ್ನ್‌ಮೆಂಟ್ ಪ್ರೆಸ್ ಮದ್ರಾಸ್.)
3. ಪಿ. ಗುರುರಾಜ ಭಟ್ಟ, 2009, 'ತುಳುನಾಡು', ಪಾದೂರು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್ ಉಡುಪಿ, ಪು. Viii, IX, XI.; ದ ಗೆಜೆಟಿಯರ್ ಆಫ್ ಸೌತ್‌ಕೆನರಾ ಡಿಸ್ಟ್ರಿಕ್ಟ್. 1973.
4. ಪಿ. ಗುರುರಾಜ ಭಟ್ಟ, 2009, 'ತುಳುನಾಡು', ಪಾದೂರು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್ ಉಡುಪಿ, ಪು. XI
5. ಕೆ. ವಿ. ರಮೇಶ್, 1969, 'ತುಳುನಾಡಿನ ಇತಿಹಾಸ', ರಾಷ್ಟ್ರಕವಿ ಗೋವಿಂದ ಪೈ ಸಂಶೋಧಕ ಕೇಂದ್ರ, ಉಡುಪಿ. ಪು. 13.
6. ಬಿ. ವಸಂತ ಶೆಟ್ಟಿ, 1982, '*ಡಾ| ಪಿ. ಗುರುರಾಜ ಭಟ್‌ಸ್ ಕಾಂಟ್ರಿಬ್ಯೂಷನ್ ಟು ಎಪಿಗ್ರಾಫಿ*', 'ದ ಜರ್ನಲ್ ಆಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್, ವಾಲ್ಯೂಮ್ 2.
7. ಬಿ. ಎ. ಸಾಲೆತ್ತೂರು, 1936, 'ಏನ್‌ಶಿಯಂಟ್ ಕರ್ನಾಟಕ ವಾಲ್ಯೂಮ್ 1, ಹಿಸ್ಟರಿ ಆಫ್ ತುಳುವ' ಪೂನಾ.
8. ಎನ್. ಎ. ಶೀನಪ್ಪ ಹೆಗ್ಡೆ ಮತ್ತು ಎನ್. ಎಸ್. ಕಿಲ್ಲೆ, 1954, 'ಪ್ರಾಚೀನ ತುಳುನಾಡು', ಪೊಳಲಿ ಶೀನಪ್ಪ ಹೆಗ್ಡೆ ಜನ್ಮಶತಾಬ್ದ ಸಮಿತಿ'.
9. ಎಂ. ಗಣಪತಿ ರಾವ್ ಐಗಳ್, 1923, 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ', ಮಂಗಳೂರು.
10. ಪಿ. ಗುರುರಾಜ ಭಟ್, 1975, 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್', ಉಡುಪಿ, ಪು. iii
11. ಎಂ. ಗಣಪತಿ ರಾವ್ ಐಗಳ್, 1923, 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ', ಮಂಗಳೂರು, ಪು. 9.
12. ಬಿ. ವಸಂತ ಶೆಟ್ಟಿ, 1982, '*ಡಾ| ಪಿ. ಗುರುರಾಜ ಭಟ್‌ಸ್ ಕಾಂಟ್ರಿಬ್ಯೂಷನ್ ಟು ಎಪಿಗ್ರಾಫಿ*', 'ದ ಜರ್ನಲ್ ಆಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್, ವಾಲ್ಯೂಮ್ 2, ಪು. 27.
13. ಅದೇ, ಪು. 31.
14. ಪಿ. ಗುರುರಾಜ ಭಟ್, '*ಉದಯಪುರದಲ್ಲಿ ಎರಡು ಅಪೂರ್ವ ಶಾಸನಗಳ ಪತ್ತೆ*', ನವಭಾರತ, ಮೇ, 1972.

15. ಪಿ. ಗುರುರಾಜ ಭಟ್, '*ಬೆಳ್ಮಣ್ಣು ಶ್ರೀ ದುರ್ಗಾಪರಮೇಶ್ವರೀ ದೇವಾಲಯದಲ್ಲಿ ದೊರಕಿದ ಮಹತ್ವಪೂರ್ಣವಾದ ತಾಮ್ರಶಾಸನ*', ನವಯುಗ, 11–5–1972, ಉದಯವಾಣಿ, ಸಂಯುಕ್ತಕರ್ನಾಟಕ, ಕನ್ನಡಪ್ರಭ.
16. ಪಿ. ಗುರುರಾಜ ಭಟ್, '*ಉದಯಪುರದಲ್ಲಿ ಎರಡು ಅಪೂರ್ವ ಶಾಸನಗಳ ಪತ್ತೆ*', ನವಭಾರತ, ಮೇ, 1972.
17. ಪಿ. ಗುರುರಾಜ ಭಟ್, '*ತುಳುನಾಡ ಇತಿಹಾಸ ಇದಕ್ಕೆ ಸಂಬಂಧಿಸಿದ ಹೊಸ ಶಾಸನಗಳ ಪತ್ತೆ*', 16–2–1969; '*ಉದಯಪುರದಲ್ಲಿ ಚರಿತ್ರಾರ್ಹ ಭೂಶೋಧನೆ*', ಕನ್ನಡಪ್ರಭ, 21–11–1976, '*ಹೊಸ ಶಾಸನಗಳ ಅನ್ವೇಷಣೆ*', ಕನ್ನಡಪ್ರಭ; '*ಉದಯಪುರದಲ್ಲಿ ಎರಡು ಅಪೂರ್ವ ಶಾಸನಗಳ ಪತ್ತೆ*', ನವಭಾರತ, ಮೇ, 1972.
18. ಬಿ. ವಸಂತ ಶೆಟ್ಟಿ, 1982, '*ಡಾ। ಪಿ. ಗುರುರಾಜ ಭಟ್‌ಸ್ ಕಾಂಟ್ರಿಬ್ಯೂಷನ್ ಟು ಎಪಿಗ್ರಾಫಿ*', 'ದ ಜರ್ನಲ್ ಆಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್, ವಾಲ್ಯೂಮ್ 2, ಪು. 28; ಪಿ. ಗುರುರಾಜ ಭಟ್, 1975, 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್', ಉಡುಪಿ, ಪ್ಲೇಟ್ ix.
19. ಪಿ. ಗುರುರಾಜ ಭಟ್, '*ಕಡಂದಲೆಯ ಇತಿಹಾಸದ ಮೇಲೆ ಹೊಸ ಬೆಳಕು*', ನವಯುಗ, 8–4–1971; '*ರಿಪೋರ್ಟ್ ಇನ್ ಡೆಕ್ಕಾನ್ ಹೆರಾಲ್ಡ್*', 14–2–1971; 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್', ಉಡುಪಿ, ಪ್ಲೇಟ್ x.
20. ಈ ಎರಡು ಶಾಸನಗಳನ್ನು ಪ್ರತಿ ಮಾಡಲು ಗುರುರಾಜ ಭಟ್ಟರಿಗೆ ಬಿ. ವಸಂತ ಶೆಟ್ಟಿಯವರು ಸಹಾಯಮಾಡಿದ್ದರು. '*ನ್ಯೂ ಲೈಟ್ ಆನ್ ಜೈನಿಸಂ ಇನ್ ಸೌತ್ ಕೆನರಾ*', ಉದಯವಾಣಿ, ಆಗಸ್ಟ್ 26, 1976; 'ರಿಪೋರ್ಟ್ ಇನ್ ಹಿಂದೂ'.
21. ಪಿ. ಗುರುರಾಜ ಭಟ್, 'ಕಾಪುವಿನ ಇತಿಹಾಸ ೧-೩, ನವಯುಗ, 1–8–1968.
22. ರಿಪೋರ್ಟ್ ಇನ್ ಕನ್ನಡ ಪ್ರಭ, 25–1–1977 ಮತ್ತು 2–2–1977.
23. ಅದೇ, 14–4–1971; ಶಾಸನಗಳ ವಿಭಾಗದ ಡಾ। ಶೆಣೈ ಮತ್ತು ಎಂ.ಜೆ. ಶರ್ಮಾ ಅವರು ಗುರುರಾಜ ಭಟ್ಟರ ಜೊತೆ ಕೆರವಾಸೆ ಪ್ರದೇಶಕ್ಕೆ 1971ರಲ್ಲಿ ಭೇಟಿಯಿತ್ತು ಶಾಸನವನ್ನು ಪರಿಶೀಲಿಸಿದರು ಮತ್ತು ದಾಖಲಿಸಿಕೊಂಡರು.
24. ರಿಪೋರ್ಟ್ ಇನ್ ಕನ್ನಡ ಪ್ರಭ, 25–1–1977 ಮತ್ತು 2–2–1977.
25. ಪಿ. ಗುರುರಾಜ ಭಟ್, '*ಕೊಣಾಜೆ ಬಂಡೆ ಶಾಸನ: ಚಾರಿತ್ರಿಕ ವೈಶಿಷ್ಟ್ಯ*', ಕನ್ನಡಪ್ರಭ, 9–7–1975.
26. ಕೆ. ವಿ. ರಮೇಶ್ ಅವರು ಕಾಸರಗೋಡು ತಾಲೂಕಿನ ಅನಂತಪುರದಲ್ಲಿರುವ ತುಳು ಲಿಪಿಯ ತುಳುಶಾಸನವನ್ನು ಉದಯವಾಣಿ, ಅಕ್ಟೋಬರ್ 2, 1980ರಲ್ಲಿ ಪ್ರಕಟಿಸಿದರು.
27. ನವದೆಹಲಿಯ ಭಾರತೀಯ ಜ್ಞಾನಪೀಠದಿಂದ ಆಯೋಜಿಸಲ್ಪಟ್ಟಿದೆ; ಪಿ. ಗುರುರಾಜ ಭಟ್, 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್', ಉಡುಪಿ, ಪು. 31.

28. ಪಿ. ಗುರುರಾಜ ಭಟ್ ಮತ್ತು ಬಿ. ವಸಂತ ಶೆಟ್ಟಿ, '*ಇಮ್ಮಡಿ ಹರಿಹರ ಹಾಗೂ ಇಮ್ಮಡಿ ದೇವರಾಯ– ಕೊನೆಯ ವರ್ಷಗಳು*', 'ಸಾಧನೆ' ಜುಲೈ–ಸಪ್ಟಂಬರ್, 1978, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.
29. ಪಿ. ಗುರುರಾಜ ಭಟ್, '*ಬೇಳೂರಿನಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ಅವಶೇಷ*', ಸಂಯುಕ್ತ ಕರ್ನಾಟಕ, 10–9–1973.
30. ಪಿ. ಗುರುರಾಜ ಭಟ್, '*ಪೊಳಲಿಯ ಶ್ರೀರಾಜರಾಜೇಶ್ವರಿ*', ಕನ್ನಡಪ್ರಭ, 27–3–1971; ಪ್ರಜಾವಾಣಿ 26–3–1973; ಉದಯವಾಣಿ, 23–3–1973; ನವಯುಗ 29–3–1973; ನವಭಾರತ 24–4–1973; ಕರ್ಮವೀರ 1–7–1973.
31. ನವದೆಹಲಿಯ ಭಾರತೀಯ ಜ್ಞಾನಪೀಠದಿಂದ ಆಯೋಜಿಸಲ್ಪಟ್ಟಿದೆ.
32. ಪಿ. ಗುರುರಾಜ ಭಟ್, '*ಬಾರಕೂರಿನ ಚಾರಿತ್ರಿಕ ಅವಶೇಷಗಳು*', ನವಯುಗ (ದೀಪಾವಳಿ ಸಂಚಿಕೆ), 1971; '*ಬಾರಕೂರಿನ ಕುಂಡೋದರ*', ಕರ್ಮವೀರ 17–10–1971; '*ಬಾರಕೂರಿಗೆ ಇನ್ನೊಮ್ಮೆ ಸಂದರ್ಶನ*', ನವಯುಗ 5–10–1967.
33. ಪಿ. ಗುರುರಾಜ ಭಟ್ ಮತ್ತು ಬಿ. ವಸಂತ ಶೆಟ್ಟಿ, '*ಇಮ್ಮಡಿ ಹರಿಹರ ಹಾಗೂ ಇಮ್ಮಡಿ ದೇವರಾಯ– ಕೊನೆಯ ವರ್ಷಗಳು*', 'ಸಾಧನೆ' ಜುಲೈ–ಸಪ್ಟಂಬರ್, 1978, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.
34. ಎಂ. ಜೆ. ಶರ್ಮಾ (ಸಂ.), '*ಜರ್ನಲ್ ಆಫ್ ದ ಎಪಿಗ್ರಾಫಿಕಲ್ ಸೊಸೈಟಿ ಆಫ್ ಇಂಡಿಯಾ, ವಾಲ್ಯೂಮ್ 5*', 1978; ಮತ್ತು ವಾಲ್ಯೂಮ್ 1, ಪ್ಲೇಟ್ i.
35. ಪಿ. ಗುರುರಾಜ ಭಟ್, '*ಉದಯಪುರ : ಒಂದು ಐತಿಹಾಸಿಕ ವಿವೇಚನೆ*', ಸುವರ್ಣ ಮಹೋತ್ಸವ ಸ್ಮಾರಕ ಸಂಚಿಕೆ, ಪಿತ್ರೋಡಿ, ಹೈಯರ್ ಪ್ರೈ. ಶಾಲೆ, ಉದ್ಯಾವರ, 1975.
36. ಮಿಲಾಗ್ರಿಸ್ ಕಾಲೇಜು, ವಾರ್ಷಿಕಾಂಕ, 1971.
37. ಪಿ. ಗುರುರಾಜ ಭಟ್, 1975, 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್', ಉಡುಪಿ, ಪು. 30–31.
38. ಅದೇ, ಪು. 27–30.
39. ಪಿ. ಗುರುರಾಜ ಭಟ್, '*ಬೆಳ್ಮಣ್ಣು ಶ್ರೀ ದುರ್ಗಾಪರಮೇಶ್ವರೀ ದೇವಾಲಯದಲ್ಲಿ ದೊರಕಿದ ಮಹತ್ವಪೂರ್ಣವಾದ ತಾಮ್ರಶಾಸನ*', ನವಯುಗ, 11–5–1972, ಉದಯವಾಣಿ, ಸಂಯುಕ್ತಕರ್ನಾಟಕ, ಕನ್ನಡಪ್ರಭ; 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್', ಉಡುಪಿ, ಪ್ಲೇಟ್ viii.
40. ಅದೇ.
41. ಪಿ. ಗುರುರಾಜ ಭಟ್, '*ಆಳುಪ ಶಾಸನ*' ಬೆಳ್ಮಣ್ಣು ಶ್ರೀ ದುರ್ಗಾಪರಮೇಶ್ವರೀ ದೇವಾಲಯದ ಆಡಳಿತ ಮಂಡಳಿಯ ಭಕ್ತವೃಂದದ ಕೃಪೆಯಿಂದ', 1973. ನವಯುಗ ಚಿನ್ನದ ಹಬ್ಬದ ಸಂಪುಟ, 1972; ಪಿ. ಗುರುರಾಜ ಭಟ್, '*ಬೆಳ್ಮಣ್ಣು ಶ್ರೀ ದುರ್ಗಾ ಪರಮೇಶ್ವರೀ*

ದೇವಾಲಯದಲ್ಲಿ ದೊರಕಿದ ಮಹತ್ವಪೂರ್ಣವಾದ ತಾಮ್ರಶಾಸನ', ನವಯುಗ, 11–5–1972, ಉದಯವಾಣಿ, ಸಂಯುಕ್ತಕರ್ನಾಟಕ, ಕನ್ನಡಪ್ರಭ; 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್', ಉಡುಪಿ, ಪ್ಲೇಟ್ viii.

42. ಪಿ. ಗುರುರಾಜ ಭಟ್, '*ಉದಯಪುರ : ಒಂದು ಐತಿಹಾಸಿಕ ವಿವೇಚನೆ*', ಸುವರ್ಣ ಮಹೋತ್ಸವ ಸ್ಮಾರಕ ಸಂಚಿಕೆ, ಪಿತ್ರೋಡಿ, ಹೈಯರ್ ಪ್ರೈ. ಶಾಲೆ, ಉದ್ಯಾವರ, 1975.
43. ಪಿ. ಗುರುರಾಜ ಭಟ್, 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್', ಉಡುಪಿ, ಪ್ಲೇಟ್ xi; ಪಿ. ಗುರುರಾಜ ಭಟ್, '*ಪೊಳಲಿಯ ಶ್ರೀರಾಜರಾಜೇಶ್ವರಿ*', ಕನ್ನಡಪ್ರಭ, 27–3–1971; ಪ್ರಜಾವಾಣಿ 26–3–1973; ಉದಯವಾಣಿ, 23–3–1973; ನವಯುಗ 29–3–1973; ನವಭಾರತ 24–4–1973; ಕರ್ಮವೀರ 1–7–1973.
44. ಅದೇ.
45. ಪಿ. ಗುರುರಾಜ ಭಟ್, '*ಉದಯಪುರದಲ್ಲಿ ಎರಡು ಅಪೂರ್ವ ಶಾಸನಗಳ ಪತ್ತೆ*', ನವಭಾರತ, ಮೇ, 1972; '*ಹೊಸ ಶಾಸನಗಳ ಅನ್ವೇಷಣೆ*', ಕನ್ನಡಪ್ರಭ; '*ಆಳುಪರ ಇತಿಹಾಸದ ಮೇಲೆ ಹೊಸ ಬೆಳಕು*', ಕನ್ನಡಪ್ರಭ, 13–6–1971; '*ತುಳುನಾಡ ಇತಿಹಾಸಕ್ಕೆ ಸಂಬಂಧಿಸಿದ ಹೊಸ ಶಾಸನಗಳ ಪತ್ತೆ*', 16–2–1969.
46. ಪಿ. ಗುರುರಾಜ ಭಟ್, 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್', ಉಡುಪಿ, ಪ್ಲೇಟ್ ix.
47. ಪಿ. ಗುರುರಾಜ ಭಟ್, '*ಕಾಪುವಿನ ಇತಿಹಾಸ ೨,*' ನವಯುಗ, 1–8–1968.
48. ಪಿ. ಗುರುರಾಜ ಭಟ್, '*ಕಾಪುವಿನ ಇತಿಹಾಸ– ೧, ೨, ೩*', ನವಯುಗ, 1–8–1968.
49. ಕೆ. ವಿ. ರಮೇಶ್, 1969, 'ತುಳುನಾಡಿನ ಇತಿಹಾಸ' ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಪು. 25.
50. ಪಿ. ಗುರುರಾಜ ಭಟ್, '*ಉಡುಪಿ ತಾಲೂಕಿನ ವಡ್ಡರ್ಸೆ ಮಹಾಲಿಂಗೇಶ್ವರ ದೇಗುಲದಲ್ಲಿ ದೊರಕಿದ ಶಾಸನ*', ನವಯುಗ, ಪ್ರಜಾರಾಜ್ಯ ಸಂಚಿಕೆ, 1968.
51. ಕೆ. ವಿ. ರಮೇಶ್, ಎಂ. ಜೆ. ಶರ್ಮಾ, 1978, 'ತುಳುನಾಡಿನ ಶಾಸನಗಳು, ಸಂ. 1', ಮೈಸೂರು, ಪು. 10; ಬಿ. ವಸಂತ ಶೆಟ್ಟಿ, 1995, 'ಐತಿಹಾಸಿಕ ಮಹತ್ವದ ಉಡುಪಿ ತಾಲೂಕಿನ ಶಾಸನಗಳು', ಪು. 1–3.
52. ಪಿ. ಗುರುರಾಜ ಭಟ್, '*ಕಡಂದಲೆಯ ಇತಿಹಾಸದ ಮೇಲೆ ಹೊಸ ಬೆಳಕು*', ನವಯುಗ, 8–4–1971.
53. ಪಿ. ಗುರುರಾಜ ಭಟ್, '*ಕಡಂದಲೆಯ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಪ್ರಾಚೀನತೆಯ ಕುರಿತಾದ ಶಿಲಾಶಾಸನ*', ಕಡಂದಲೆಯ ದೇವಾಲಯದ ಆಡಳಿತ ಟ್ರಸ್ಟ್, 1971.

54. ಪಿ. ಗುರುರಾಜ ಭಟ್, '*ಕಡಂದಲೆಯ ಇತಿಹಾಸದ ಮೇಲೆ ಹೊಸ ಬೆಳಕು*', ನವಯುಗ, 8–4–1971; '*ರಿಪೋರ್ಟ್ ಇನ್ ಡೆಕ್ಕಾನ್ ಹೆರಾಲ್ಡ್*', 14–2–1971; 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್', ಉಡುಪಿ, ಪ್ಲೇಟ್ X.
55. ಪಿ. ಗುರುರಾಜ ಭಟ್, '*ವರಾಂಗ ಮಠದಲ್ಲಿ ದೊರಕಿರುವ ತಾಮ್ರ ಶಾಸನ*', ಕನ್ನಡಪ್ರಭ, 9–2–1973; ಕೆ. ವಿ. ರಮೇಶ್, 1970, 'ಎ ಹಿಸ್ಟರಿ ಆಫ್ ಸೌತ್ ಕೆನರಾ', ಧಾರವಾಡ; 'ವರಾಂಗ ಇನ್‌ಸ್ಕ್ರಿಪ್ಶನ್ ಆಫ್ ಕುಂದಾನ'.
56. ಅದೇ.
57. ಪಿ. ಗುರುರಾಜ ಭಟ್, ರಿಪೋರ್ಟ್ ಇನ್ ಕನ್ನಡಪ್ರಭ, 25–1–1977 ಮತ್ತು 2–2–1975.
58. ಪಿ. ಗುರುರಾಜ ಭಟ್, 1975, 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್', ಉಡುಪಿ, ಪು. 30–31.
59. ಪಿ. ಗುರುರಾಜ ಭಟ್, '*ಹಟ್ಟಿಯಂಗಡಿಯಲ್ಲಿ ಜೈನಧರ್ಮ*', 1969.
60. ಪಿ. ಗುರುರಾಜ ಭಟ್, '*ಕೊಣಾಜೆ ಬಂಡೆ ಶಾಸನ: ಚಾರಿತ್ರಿಕ ವೈಶಿಷ್ಟ್ಯ*', ಕನ್ನಡಪ್ರಭ 9–7–1975.
61. ಕೆ. ವಿ. ರಮೇಶ್, 1970, 'ಎ ಹಿಸ್ಟರಿ ಆಫ್ ಸೌತ್ ಕೆನರಾ', ಧಾರವಾಡ; 'ವರಾಂಗ ಇನ್‌ಸ್ಕ್ರಿಪ್ಶನ್ ಆಫ್ ಕುಂದಾನ'; ಕೆ. ವಿ. ರಮೇಶ್ ಮತ್ತು ಎಂ.ಜೆ. ಶರ್ಮಾ, 'ತುಳುನಾಡಿನ ಶಾಸನಗಳು'.
62. ಬಿ. ವಸಂತ ಶೆಟ್ಟಿ, 1984, ಎ ಮೆಟ್ರೊಪೊಲಿಟನ್ ಸಿಟಿ ಆಫ್ ಆಂಟಿಕ್ವಿಟಿ ಆಂಡ್ ಇಟ್ಸ್ ಹಿಸ್ಟರಿ ಆಂಡ್ ಕಲ್ಚರ್; ಎಂ.ಜೆ. ಶರ್ಮಾ (ಸಂ.), 'ದ ಜರ್ನಲ್ ಆಫ್ ದ ಎಪಿಗ್ರಾಫಿಕಲ್ ಸೊಸೈಟಿ ಆಫ್ ಇಂಡಿಯಾ, ವಾಲ್ಯೂಮ್ 5, 1978.

ಅಧ್ಯಾಯ -ನಾಲ್ಕು

೪.೦. ತುಳುನಾಡಿನ ಅಧ್ಯಯನದ ನಾಣ್ಯದಲ್ಲಿ ಗುರುರಾಜ ಭಟ್ಟರ ಕೊಡುಗೆ.

೪.೧. ಆಳುಪರ ಕಾಲದ ನಾಣ್ಯಗಳು

೪.೧.೧. ಆಳುಪರ ಚಿನ್ನದ ನಾಣ್ಯ.

೪.೧.೨. ಆಳುಪರ ಬೆಳ್ಳಿಯ ನಾಣ್ಯ.

೪.೧.೩. ಆಳುಪರ ತಾಮ್ರದ ನಾಣ್ಯ.

೪.೨.೧. ವಿಜಯನಗರ ಕಾಲದ ನಾಣ್ಯಗಳು.

ನಾಣ್ಯಶಾಸ್ತ್ರ ಅಧ್ಯಯನಕ್ಕೆ

ಡಾ| ಗುರುರಾಜ ಭಟ್ಟರ ಕೊಡುಗೆಗಳು

ಕರ್ನಾಟಕದಲ್ಲಿ ನಾಣ್ಯಗಳ ಅಧ್ಯಯನ ಮತ್ತು ಸಂಶೋಧನೆಯು ಕಡೆಗಣಿಸಲ್ಪಟ್ಟ ಒಂದು ಜ್ಞಾನಕ್ಷೇತ್ರವಾಗಿದೆ ಎಂಬುದಾಗಿ ಖ್ಯಾತ ನಾಣ್ಯಶಾಸ್ತ್ರಿ ಎ. ವಿ. ನರಸಿಂಹಮೂರ್ತಿ[1]ಯವರ ವೀಕ್ಷಣೆಯನ್ನು ಗಮನದಲ್ಲಿರಿಸಿಕೊಂಡೇ ನಾಣ್ಯಗಳ ಶೋಧ ಮತ್ತು ಅಧ್ಯಯನದ ನಿಟ್ಟಿನಲ್ಲಿ ಗುರುರಾಜ ಭಟ್ಟರು ನೀಡಿರುವ ಕೊಡುಗೆಗಳನ್ನು ಪರಾಮರ್ಶಿಸಬೇಕಾಗಿದೆ. ಸಹಸ್ರಾರ ನಾಣ್ಯಗಳು, ತುಳುನಾಡು ಸೇರಿದಂತೆ ಕರ್ನಾಟಕಾದ್ಯಂತ ಲಭಿಸಿದೆಯಾದರೂ ಅವುಗಳು ಸರಕಾರಿ ಖಜಾನೆಯಲ್ಲೋ ವಸ್ತುಸಂಗ್ರಹಾಲಯಗಳಲ್ಲೋ ಉಳಿದುಬಿಟ್ಟಿವೆ. ಈ ವಿದ್ಯಮಾನದ ಅರಿವಿದ್ದುಕೊಂಡೇ ಭಟ್ಟರು ದಕ್ಷಿಣ ಕನ್ನಡದ ನಾಣ್ಯಗಳ ಸಂಗ್ರಹಕಾರ್ಯಕ್ಕೆ ಮುಂದಾದರು. ಅವರು ಗ್ರಾಮೀಣಪ್ರದೇಶಗಳಲ್ಲಿ ಸುತ್ತಾಡಿ ಕ್ಷೇತ್ರಕಾರ್ಯ ಮಾಡುತ್ತಿದ್ದ ಕಾಲದಲ್ಲಿ ಅಲ್ಲಿನ ಕುಟುಂಬಗಳ ಹಿರಿಯರನ್ನು ಕಂಡು ನಾಣ್ಯಗಳನ್ನು ಕುರಿತು ವಿಚಾರಿಸುತ್ತಿದ್ದರು. ಅನೇಕ ಬೆಳ್ಳಿ ಮತ್ತು ಬಂಗಾರದ ನಾಣ್ಯಗಳು ಪೂಜಿಸಲ್ಪಡುತ್ತಿದ್ದು, ಅವುಗಳ ಮಾಹಿತಿ ನೀಡಲು ಜನರು ಹಿಂಜರಿಯುತ್ತಿದ್ದರು. ಒಮ್ಮೆ ಮನೆಯೊಂದರಲ್ಲಿ ಆಳುಪರ ಬೆಳ್ಳಿಯ ನಾಣ್ಯವು ಪೂಜಿಸಲ್ಪಡು ತ್ತಿದ್ದುದನ್ನು ಅರಿತುಕೊಂಡ ಅವರು, ಅಲ್ಲಿಯ ಧಾರ್ಮಿಕ ವಿಧಿವಿಧಾನಗಳನ್ನು ಅನುಸರಿಸಿಯೇ ಪೂಜಾಕೋಣೆಯೊಳಗೆ ಹೋಗಿ ನಾಣ್ಯವನ್ನು ವೀಕ್ಷಣೆ ಮಾಡಬೇಕಾದ ಪ್ರಸಂಗ ಅವರಿಗೆ ಒದಗಿಬಂದಿತ್ತು. ಇದರ ಫಲವಾಗಿ ಆಳುಪರ ಹೊಸ ಪ್ರಕಾರದ ನಾಣ್ಯವೊಂದು ಬೆಳಕಿಗೆ ಬರುವಂತಾಯಿತು. ಹೀಗೆ ತಮ್ಮ ಅವಿರತ ಶ್ರಮದಿಂದ ಭಟ್ಟರು ನಾಣ್ಯಗಳ ಸಾಕ್ಷ್ಯಗಳನ್ನು ಸಂಗ್ರಹಿಸಿದ್ದರು.

ಅದಾಗಲೇ ಆಳುಪರ ನಾಣ್ಯಗಳು ಬೆಳಕಿಗೆ ಬಂದಿತ್ತಾದರೂ, ಅವುಗಳು ಆಳುಪರಿಗೇ ಸೇರಿದ್ದು ಎಂಬ ನಿರ್ಣಯಕ್ಕೆ ನಾಣ್ಯಶಾಸ್ತ್ರಗಳು ಬಂದಿರಲಿಲ್ಲ. ಅವುಗಳು ಮಧುರೆಯ ಪಾಂಡ್ಯರು ಹೊರಡಿಸಿದ ನಾಣ್ಯಗಳೆಂದು ಈಲಿಯಟ್, ಎಲನ್ ಮತ್ತಿತರ ನಾಣ್ಯಶಾಸ್ತ್ರಜ್ಞರು ಪರಿಗಣಿಸಿದ್ದರು[2].

ನಾಣ್ಯ ಶಾಸ್ತ್ರಜ್ಞರಾದ ಪಿ.ಎಲ್. ಗುಪ್ತ ಅವರು ಸಹ ಅದನ್ನು ಆಳುಪರ ನಾಣ್ಯಗಳಲ್ಲ ವೆಂದೇ ಅಭಿಪ್ರಾಯ ತಳೆದಿದ್ದರು[3]. ಎಸ್.ರಾಮಯ್ಯ ಎಂಬ ಇನ್ನೋರ್ವ ನಾಣ್ಯಶಾಸ್ತ್ರಜ್ಞ, ಈ ನಿಟ್ಟಿನಲ್ಲಿ ಸುದೀರ್ಘವಾದವನ್ನು ಮಂಡಿಸಿ ಅವುಗಳು ಪಾಂಡ್ಯರೇ ಹೊರಡಿಸಿದ ನಾಣ್ಯಗಳೆಂದು

ಸಾಬೀತುಪಡಿಸಿದ್ದರು[4]. ಇದೇ ವೇಳೆ, ಖ್ಯಾತ ನಾಣ್ಯಶಾಸ್ತ್ರಜ್ಞ ಎಂ. ಮುಕುಂದ ಪ್ರಭು[5] ಅವರು ತಮ್ಮ ಆಳವಾದ ಅಧ್ಯಯನವೊಂದರಲ್ಲಿ, ಅವುಗಳು ಆಳುಪರ ನಾಣ್ಯಗಳೆಂದೇ ಪ್ರತಿಪಾದಿಸಿದ್ದರು. ಇದನ್ನು ಸಹ ಎಸ್. ರಾಮಯ್ಯ ಅಲ್ಲಗಳೆದಿದ್ದರು. ಈ ರೀತಿಯಾಗಿ ಗುರುರಾಜ ಭಟ್ಟರ ನಾಣ್ಯಗಳ ಅಧ್ಯಯನಕ್ಕಿಂತ ಮೊದಲು ಬೆಳಕಿಗೆ ಬಂದಂಥ ನಾಣ್ಯಗಳು ಆಳುಪ ವಂಶಜರು ಹೊರಡಿಸಿದ್ದುದಲ್ಲವೆಂಬ ಅಭಿಪ್ರಾಯ ಸರ್ವವ್ಯಾಪಿಯಾಗಿತ್ತು. ಈ ಹಂತದಲ್ಲಿ ಗುರುರಾಜ ಭಟ್ಟರು ತುಳು ನಾಡಿನ ಚಿನ್ನ, ಬೆಳ್ಳಿ ಮತ್ತು ಕಂಚಿನ ಹಲವಾರು ನಾಣ್ಯಗಳನ್ನು ಬೆಳಕಿಗೆ ತಂದರಲ್ಲದೆ, ಅವುಗಳು ಆಳುಪರ ನಾಣ್ಯಗಳೆಂದೇ ಬಲವಾಗಿ ಪ್ರತಿಪಾದಿಸಿದರು[6]. ಜೊತೆಗೆ ತುಳುನಾಡಿನ ಶಾಸನಗಳಲ್ಲಿ ಉಲ್ಲೇಖವಾದ ಬಗೆಬಗೆಯ ನಾಣ್ಯಗಳ ವಿಶಿಷ್ಟ ಹೆಸರುಗಳು, ವಿಧಗಳು, ಮುಖಬೆಲೆ ಇತ್ಯಾದಿಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಿದರು. ಇವರ ಫಲವಾಗಿ ಆಳುಪರು ಚಿನ್ನ, ಬೆಳ್ಳಿ ಮತ್ತು ತಾಮ್ರದ ತಮ್ಮದೇ ಆದ ನ ನಾಣ್ಯಗಳನ್ನು ಅಚ್ಚುಹಾಕಿಸಿದ್ದರು[7] ಎಂಬುದನ್ನು ನಾಟ್ಯಶಾಸ್ತ್ರಜ್ಞರು ಒಪ್ಪಿಕೊಳ್ಳಬೇಕಾಯಿತು.

ತುಳುನಾಡಿನಲ್ಲಿ ನಾಣ್ಯಗಳು ಚಾಲ್ತಿಗೆ ಬಂದಿದ್ದ ಕಾಲವನ್ನು ನಿರ್ದಿಷ್ಟವಾಗಿ ಹೇಳಲಾಗ ದಿದ್ದರೂ ಗದ್ಯಾಣವೆಂಬ ನಾಣ್ಯಗಳು ಸುಮಾರಾಗಿ 10ನೇ ಶತಮಾನದಿಂದ ಪ್ರಚಲಿತವಿದ್ದುವು ಎಂಬ ನಿಷ್ಕರ್ಷೆಗೆ ಗುರುರಾಜ ಭಟ್ಟರು ಬಂದಿದ್ದರು. ಬಿಜೂರು ಎಂಬಲ್ಲಿ ದೊರಕಿದ ಶಾಸನ ವೊಂದರಲ್ಲಿ, ಐವತ್ತು ಗದ್ಯಾಣಗಳನ್ನು ರಾಜನಿಗೆ ದಂಡದ ರೂಪದಲ್ಲಿ ನೀಡಿದ ಉಲ್ಲೇಖ ದಿಂದ ಇದು ಸ್ಪಷ್ಟವಾಗುತ್ತದೆ. ಇದು ತುಳುನಾಡಿನಲ್ಲಿ ಚಾಲ್ತಿಯಲ್ಲಿದ್ದ ಗದ್ಯಾಣಕ್ಕೆ ಸಂಬಂಧಿಸಿದ ಮೊದಲನೆಯ ಉಲ್ಲೇಖವಾಗಿದೆ ಎಂಬುದಾಗಿ ಭಟ್ಟರು ಅಭಿಪ್ರಾಯಪಟ್ಟರು[8].

ತುಳುನಾಡಿನ ಅನೇಕ ಶಾಸನಗಳಲ್ಲಿ ಪಾಂಡ್ಯಗದ್ಯಾಣವೆಂಬ ಪದದ ಉಲ್ಲೇಖ ಬರುತ್ತದೆ. ಇಲ್ಲಿ ಬಂದಿರುವ 'ಪಾಂಡ್ಯ' ಎಂಬ ಪದವು ಮಧುರೆಯ ಪಾಂಡ್ಯರನ್ನು ಸೂಚಿಸುತ್ತದೆ ಎಂಬುದಾಗಿ ನಾಣ್ಯಶಾಸ್ತ್ರಿಗಳು ನಿರ್ಣಯಕ್ಕೆ ಬಂದಿದ್ದರು. ಆದರೆ ಡಾ। ಭಟ್ಟರು, ಇನ್ನಷ್ಟು ಪುರಾವೆಗಳನ್ನಿಲ್ಲಿ ಸಂಗ್ರಹಿಸಿ, ಪಾಂಡ್ಯ ಪದವು ಆಳುಪರಿಗೇ ಸಂಬಂಧಿಸಿದುದು ಎಂಬುದಾಗಿ ಅಭಿಪ್ರಾಯಪಟ್ಟರು[9]. ಪಾಂಡ್ಯಗದ್ಯಾಣವೆಂಬ ಪದವು ಶಕ 1062ರಲ್ಲಿ (ಕ್ರಿ.ಶ. 1140) ಪ್ರಥಮ ಬಾರಿಗೆ ಬಾರಕೂರಿನ ಶಾಸನದಲ್ಲಿ ಉಲ್ಲೇಖಗೊಳ್ಳುತ್ತದೆ. ಈ ಶಾಸನವು ಶಿವಾನಂದಯೋಗಿ ಎಂಬವನು ನೈವೇದ್ಯಶಾಲೆಯನ್ನು ನಿರ್ಮಾಣಮಾಡಿ, ಮಾರ್ಕಂಡೇಶ್ವರನ ಅಗ್ರಪೂಜೆಗಾಗಿ ಮೂವತ್ತು ಪಾಂಡ್ಯಗದ್ಯಾಣಗಳನ್ನು ಅರ್ಪಿಸಿದನೆಂದು ತಿಳಿಸುತ್ತದೆ[10]. ಬಾರಕೂರು ಮತ್ತು ಮಂಗಳೂರಿನಲ್ಲಿ ಆಳುಪರ ಕಾಲದಲ್ಲಿದ್ದ ಎರಡು ಟಂಕಸಾಲೆಗಳನ್ನು ಭಟ್ಟರು ಗುರುತಿಸಿದ್ದಾರೆ. ಈ ವಿಷಯಕ್ಕೆ ಪೂರಕವಾಗಿ, ಕ್ರಿ. ಶ. 1205ರ[11] ಶಾಸನವೊಂದರಲ್ಲಿ ಬಾರಕೂರು ಗದ್ಯಾಣ ಮತ್ತು ಮಂಗಳೂರು ಗದ್ಯಾಣಗಳ ಉಲ್ಲೇಖವಿದೆ[12]. ಆದುದರಿಂದ ಈ ಗದ್ಯಾಣಗಳು ವಿಜಯ ನಗರ ಪೂರ್ವಕಾಲದ್ದೆಂದು ಗುರುರಾಜ ಭಟ್ಟರ ಅಭಿಪ್ರಾಯ.

ಗುರುರಾಜ ಭಟ್ಟರು ಹೇಳಿರುವಂತೆ, "ಆಳುಪರು ಪಾಂಡ್ಯ ಧನಂಜಯ ಎಂಬ ಲೇಖವುಳ್ಳ ಬಂಗಾರದ ನಾಣ್ಯಗಳನ್ನು[13] 11ನೇ ಶತಮಾನದ ಸುಮಾರಿಗೆ ಚಾಲ್ತಿಯಲ್ಲಿ ತಂದರೆಂಬುದು ಖಚಿತ. 11ನೇ ಶತಮಾನದ ಕೊನೆಯ ಭಾಗದಲ್ಲಿ ಆಳಿಕೆ ನಡೆಸಿದ ಆಳುಪ ರಾಜನಾದ ಉದಯಾದಿತ್ಯ ಪಾಂಡ್ಯಪತ್ತಿಗದೇವನು ಪಾಂಡ್ಯ ಧನಂಜಯ ಎಂಬ ಬಿರುದನ್ನು ಹೊತ್ತವರಲ್ಲಿ ಮೊತ್ತಮೊದಲನೆಯವನಾಗಿದ್ದಾನೆ. ಕ್ರಿ.ಶ. 970 ಮತ್ತು 1000ರ ಅವಧಿಯಲ್ಲಿ ಅಧಿಕಾರಾರೂಢನಾಗಿದ್ದನು[14] ಎಂಬುದಾಗಿ ಇತ್ತೀಚೆಗೆ ಕುಂದಾಪುರ ತಾಲೂಕಿನ ಕುಂದಾಪುರ ತಾಲೂಕಿನ ಬೇಳೂರು ಎಂಬಲ್ಲಿ ಬೆಳಕಿಗೆ ಬಂದ ಈತನ ಶಾಸನವೊಂದು ಇದಕ್ಕೆ ಸಾಕ್ಷಿಯಾಗಿದೆ. ಅನಂತರದಲ್ಲಿ ರಾಜ್ಯವನ್ನಾಳಿದ ಆಳುಪ ಅರಸರು ಆತನ ಹೆಸರನ್ನೇ ತಮ್ಮ ಬಿರುದನ್ನಾಗಿ ಧರಿಸಿದ್ದರು ಎಂಬುದನ್ನು ತೋರಿಸುವ ಶಾಸನ ಇದೊಂದೇ. ಹೀಗಿರುತ್ತ ಪಾಂಡ್ಯ ಧನಂಜಯ ಎಂಬ ಲೇಖವಿರುವ ನಾಣ್ಯಗಳನ್ನು ಆಳುಪರೇ ಹೊರಡಿಸಿದರು ಹೊರತು ಪಾಂಡ್ಯರಲ್ಲ ಎಂಬ ವಾದವು ನಿಸ್ಸಂಶಯವಾಗಿದೆ. ಈ ನಾಣ್ಯಗಳು ಆಳುಪರಿಗೆ ಸೇರಿದ್ದು ಎಂಬುದನ್ನು ಕೆಲವು ವಿದ್ವಾಂಸರು ಇನ್ನೂ ಸಂಶಯ ವ್ಯಕ್ತಪಡಿಸುವುದಕ್ಕೆ ಯಾವ ಕಾರಣವೂ ಇಲ್ಲವಾಗಿದೆ." ಹೀಗೆ ಭಟ್ಟರು ತುಳುನಾಡಿನ ನಾಣ್ಯಗಳಲ್ಲಿ ಕಂಡುಬರುವ ಪಾಂಡ್ಯ ಮತ್ತು ಪಾಂಡ್ಯಧನಂಜಯ ಎಂಬ ಪದಗಳನ್ನು ಶಾಸನಗಳ ನೆರವಿನಿಂದ ಸಕಾರಣವಾಗಿ ವಿವರಿಸಿದ್ದಾರೆ.

ಆಳುಪರು ಮತ್ಸ್ಯ ಸಂಕೇತವನ್ನು ತಮ್ಮ ಲಾಂಛನವಾಗಿ ಏಕೆ ಅಳವಡಿಸಿಕೊಂಡರು ಎಂಬುದಕ್ಕೆ ಭಟ್ಟರು ನೀಡಿರುವ ಕಾರಣಗಳು ಇಂತಿವೆ: "ಕ್ರಿ.ಶ. 10ನೇ ಶತಮಾನದಲ್ಲಿ ಆಳುಪರು ಮತ್ಸ್ಯಲಾಂಛನವನ್ನು ಒಪ್ಪಿ ಅಳವಡಿಸಿಕೊಂಡಿರುವುದು ಬಹುತೇಕ ಸಾಧ್ಯವಿದೆ. ಏಕೆಂದರೆ, ಕಾರ್ಕಳ ತಾಲೂಕಿನ ಪಣೂರು ಎಂಬಲ್ಲಿನ ಕ್ರಿ.ಶ. 967ರ ಶಾಸನವೊಂದರಲ್ಲಿ ಮೀನಲಾಂಛನದ ಉಲ್ಲೇಖವಿದೆ[15]. ಈ ಶಾಸನವು ಅಪೂರ್ಣವಾಗಿದ್ದು, ಆಳರಸನ ಹೆಸರನ್ನು ಹೇಳುವುದಿಲ್ಲ. ಪ್ರಾಯಃ ಇದು ಆಳುಪರಾಜ ಒಂದನೇ ಕುಂದವರ್ಮನಿಗೆ ಸಂಬಂಧಿಸಿದ್ದಾಗಿರ ಬಹುದು. ಏಕೆಂದರೆ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿನ ಕದಿರೆಯಲ್ಲಿರುವ ಮಂಜುನಾಥ ದೇವಸ್ಥಾನದಲ್ಲಿ ಲೋಕೇಶ್ವರನ ಪ್ರತಿಮೆಯನ್ನು ಕ್ರಿ.ಶ. 968ರಲ್ಲಿ ಆತನು ಪ್ರತಿಷ್ಠಾಪಿಸಿದನೆಂದು ಹೇಳಲಾಗಿದೆ"[16]

ಭಟ್ಟರು ಇನ್ನಷ್ಟು ವಿವರಣೆಯನ್ನು ನೀಡುತ್ತ, ಮಂಗಲಾಪುರ ಯುದ್ಧದಲ್ಲಿ ಪಾಂಡ್ಯರು ಆಳುಪರು ಸೇರಿದಂತೆ ಚಾಳುಕ್ಯರನ್ನು ಪರಾಭವಗೊಳಿಸಿದ್ದು ನಿಜವೆಂದಾದರೆ, ಅಪಜಯ ಗೊಂಡ ಆಳುಪರು ಪಾಂಡ್ಯರ ಆಧಿಪತ್ಯವನ್ನು ಒಪ್ಪಿಕೊಂಡು ಪಾಂಡ್ಯರ ಮತ್ಸ್ಯ ಲಾಂಛನವನ್ನು ಸ್ವೀಕರಿಸಲೂಬಹುದು. ಆಳುಪರ ಮತ್ಸ್ಯಲಾಂಛನ ನಂಟಿಗೆ ಇನ್ನೊಂದರಲ್ಲಿ ಕಾರಣವೂ ಇರಬಹುದು. ಅದೇನೆಂದರೆ –ಮತ್ಸ್ಯ, ಶಂಖ ಹಾಗೂ ನೀರಿನ ಕುಂಭವು ಹಿಂದೂ ಹಾಗೂ ಜೈನರಿಗೆ ಪವಿತ್ರವಾಗಿದ್ದುದು. ಈ ಕಾರಣಗಳಲ್ಲದೆ ಇನ್ನೊಂದು ಕಾರಣವನ್ನೂ ಭಟ್ಟರು ನೀಡಿದ್ದಾರೆ. 10ನೇ ಶತಮಾನದಲ್ಲಿ ಮಂಗಳೂರಿನ ಪರಿಸರದಲ್ಲಿ ನಾಥಪಂಥವು

[illegible]

ಪ್ರಮುಖತೆಯನ್ನು(ಮತ್ಸ್ಯೇಂದ್ರನಾಥ) ಗೌರವಾರ್ಥ ಮತ್ಸ್ಯಲಾಂಛನವನ್ನು ಆಳುಪರು ಸ್ವೀಕರಿಸಿದರೆಂದು ಊಹಿಸಬಹುದಾಗಿದೆ. 10ನೇ ಶತಮಾನದಲ್ಲಿ ಜನಪ್ರಿಯತೆ ಯನ್ನು ಗಳಿಸುತ್ತಿದ್ದ ನಾಥಪಂಥದ ಪ್ರಭಾವವೂ ಇದಕ್ಕೆ ಪೂರಕವಾಗಿದ್ದಿರಬೇಕು. ಹೀಗೆ ಡಾ। ಭಟ್ಟರು ಹಲವಾರು ಸಂಭಾವ್ಯ ಕಾರಣಗಳನ್ನು ನೀಡಿ, ಆಳುಪರ ಮತ್ಸ್ಯಲಾಂಛನ ಸಂಬಂಧವನ್ನು ವಿಶ್ಲೇಷಿಸಿದ್ದಾರೆ.

ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಭಟ್ಟರು 'ಹಣ', 'ಅರ್ಧಹಣ' ಮತ್ತು 'ಕಾಲುಹಣ' ಎಂಬಂಥ ನಾಣ್ಯ ಘಟಕಗಳನ್ನು ಉಲ್ಲೇಖಿಸಿದ್ದಾರಲ್ಲದೆ, 'ಹಣ' ಎಂಬುದು ಗದ್ಯಾಣಕ್ಕೆ ಸರಿಸಮಾನವೆಂದು ತೋರಿಸಿಕೊಟ್ಟಿದ್ದಾರೆ. ತೂಕದಲ್ಲಿ ಗದ್ಯಾಣದಷ್ಟೇ ಆಗಿರುವ ಕೆಲವು ಅಪೂರ್ವ ಬೆಳ್ಳಿಯ ನಾಣ್ಯಗಳನ್ನು ಅವರು ಉಲ್ಲೇಖಿಸಿ, ಅವುಗಳ ಮೇಲೆ ಬೆಳಕು ಚೆಲ್ಲಿರುವುದು ಆಸಕ್ತಿದಾಯಕವಾಗಿದೆ. ಆಳುಪರ ನಾಣ್ಯಗಳಲ್ಲದೆ, ಭಟ್ಟರು ದಕ್ಷಿಣ ಕನ್ನಡದಲ್ಲಿ ದೊರಕಿರುವ ಇನ್ನಿತರ ನಾಣ್ಯಗಳನ್ನೂ ಅಧ್ಯಯನ ಮಾಡಿರುತ್ತಾರೆ. ಅದರ ಫಲವಾಗಿ ವಿಜಯನಗರ ಕಾಲದ ವಿವಿಧ ನಾಣ್ಯಗಳು ಬೆಳಕಿಗೆ ಬರುವಂತಾಯಿತು.

ದಕ್ಷಿಣ ಕನ್ನಡ ಜಿಲ್ಲೆಯ ಶಾಸನಗಳನ್ನು ಪರಿಶೀಲಿಸಿದ ಡಾ। ಭಟ್ಟರು ಈ ಕೆಳಗಿನ ನಾಣ್ಯಗಳನ್ನು ಪಟ್ಟಿಮಾಡಿರುತ್ತಾರೆ. ಅದೆಂದರೆ ಗದ್ಯಾಣ, ವರಹ, ಪೊನ್, ಕಾಟಿಗದ್ಯಾಣ, ಕಾಟಿಪ್ರತಾಪ, ಸಣ್ಣಪ್ರತಾಪ, ಹಣ, ತಾರ, ಜಿತಲ್ ಮತ್ತು ದುಡ್ಡು. ಅವರು ಕಂಡುಕೊಂಡ ನಾಲ್ಕು ವಿಧದ ಗದ್ಯಾಣಗಳೆಂದರೆ ವರಹಗದ್ಯಾಣ, ದೊಡ್ಡ ವರಹ ಗದ್ಯಾಣ, ಕೋದಂಡ ಗದ್ಯಾಣ ಮತ್ತು ಕಥಾರಿ ಅಂಕುಶ ಗದ್ಯಾಣ. ಈ ನಾಣ್ಯ ಪ್ರಕಾರಗಳ ಅರ್ಥ ಮತ್ತು ಪರಸ್ಪರ ಮೌಲ್ಯಗಳನ್ನು ಕೂಡ ಅವರು ಸುದೀರ್ಘವಾಗಿ ವಿಶ್ಲೇಷಣೆ ಮಾಡಿರುತ್ತಾರೆ. ದುಡ್ಡು ಮತ್ತು ತಾಮ್ರ ನಾಣ್ಯದ ಕುರಿತು ಅವರ ಟಿಪ್ಪಣಿ ಸಾಕಷ್ಟು ಆಸಕ್ತಿ ಕೆರಳಿಸುತ್ತದೆ. ಈ ನಾಣ್ಯವು ತುಳುನಾಡಿನ ಉತ್ತರ ಭಾಗದಲ್ಲಿ ಜನಪ್ರಿಯವಾಗಿತ್ತೆಂದು ತೋರುತ್ತದೆ. ದುಡ್ಡಿನ ಮೌಲ್ಯ ತಾರ ಎಂಬ ತಾಮ್ರದ ನಾಣ್ಯಕ್ಕಿಂತ ಇಮ್ಮಡಿಯಾಗಿತ್ತಲ್ಲದೆ ನಾಲ್ಕು 'ಪೈ'ಗಳಿಗೆ ಸಮಾನವಾಗಿತ್ತು[17].

ತಲಕಾಡಿನ ಗಂಗರ ನಾಣ್ಯಗಳ ಕುರಿತು ಅಷ್ಟೊಂದು ನಂಬಲರ್ಹವಾದ ಮಾಹಿತಿ ಲಭ್ಯವಿಲ್ಲದಿದ್ದರೂ, ಆನೆಯನ್ನು ಮುಮ್ಮೈಯಲ್ಲಿ ಬಿಂಬಿಸುವ ಗಂಗರ ನಾಣ್ಯವು ತುಳುನಾಡಿ ನಲ್ಲಿ ಪ್ರಚಲಿತವಿತ್ತೆಂದು ಭಟ್ಟರು ಅಭಿಪ್ರಾಯಪಡುತ್ತಾರೆ. ಪೊನ್ ಎಂಬ ನಾಣ್ಯವನ್ನು ಆನೆಪೊನ್ ಎಂಬುದಾಗಿ ಕರೆಯಲಾಗುತ್ತಿತ್ತು. ಆನೆಪೊನ್ ನಾಣ್ಯದ ಭಾಗಶಃ ನಾಣ್ಯಗಳು ತುಳುನಾಡಿನಲ್ಲಿ ವಿವಿಧ ಪ್ರದೇಶಗಳಲ್ಲಿ ಕಂಡುಬಂದಿವೆ.

ತುಳುನಾಡಿನಲ್ಲಿ ಚಾಳುಕ್ಯರ ನಾಣ್ಯಗಳು ದೊರಕಿರುವುದು ಭಾರಿ ಅಪರೂಪವೆನ್ನಬಹುದು. ಆದರೆ ಮುಮ್ಮೈಯ್ಯಲ್ಲಿ ಸಿಂಹ ಮತ್ತು ಹಿಮ್ಮೈಯ್ಯಲ್ಲಿ ಮೂರು ಸಾಲಿನ ಕನ್ನಡ ಲೇಖವಿರುವ ಜಗದೇಕಮಲ್ಲನ ಒಂದೇ ಒಂದು ನಾಣ್ಯ ಮತ್ತು ಅದರ ಹತ್ತನೇ ಒಂದು, ಇಪ್ಪತ್ತನೇ ಒಂದು, ನಲ್ವತ್ತನೇ ಒಂದು ಭಾಗಶಃ ನಾಣ್ಯಗಳು ದೊರಕಿವೆ. ಜಗದೇಕಮಲ್ಲನ ನಾಣ್ಯಗಳು ಬೆಳಕಿಗೆ

ಬಂದಿವೆಯಾದರೂ, ಆ ನಾಣ್ಯ ಭಾಗಶಃ ನಾಣ್ಯಗಳು ಇನ್ನಿತರೆಡೆ ಈ ವರೆಗೆ ದೊರಕಲಿಲ್ಲ[18]. ಈ ಎಲ್ಲಾ ನಾಣ್ಯಗಳನ್ನು ಕುರಿತು ವಿವರಗಳನ್ನು ಭಟ್ಟರು ನೀಡುತ್ತಿದ್ದರೆ ವಿದ್ವಾಂಸರಿಗೆ ಉಪಯೋಗವಾಗುತ್ತಿತ್ತು.

ತುಳುನಾಡಿನಲ್ಲಿ ಕಂಡುಬಂದ ಹೊಯ್ಸಳ, ಹೈದರ್, ಟಿಪ್ಪು ಮತ್ತು ಮೈಸೂರು ಒಡೆಯರು ಇವರ ನಾಣ್ಯಗಳನ್ನು ಕೂಡ ಭಟ್ಟರು ವ್ಯಾಸಂಗ ಮಾಡಿರುತ್ತಾರೆ. ತೆರಿಗೆಯ ಕುರಿತು ಬರೆಯುವಾಗ ಅವರು ಸಮುದಾಯಗದ್ಯಾಣವನ್ನು ಉಲ್ಲೇಖಿಸುತ್ತಾರೆ[19]. ಸಮುದಾಯ ಗದ್ಯಾಣವು ಜನಸಮುದಾಯದ ಸಭೆಯಲ್ಲಿ ನಿರ್ಣಯ ಮಾಡಲಾದ ತೆರಿಗೆ ಇರಬಹುದೆಂದೂ, ಇದನ್ನು ಅಧಿಕಾರೂಢರು ತಮಗೆ ಕಂಡಂತೆ ಏರಿಸುವುದು ಅಥವಾ ತಗ್ಗಿಸುವುದನ್ನು ಮಾಡುವಂತಿಲ್ಲ ಎಂದು ಭಟ್ಟರು ಅರ್ಥೈಸುತ್ತಾರೆ. ಸಮುದಾಯ ಗದ್ಯಾಣವೆಂದು ನಾಣ್ಯಕ್ಕೆ ಸಂಬಂಧಿಸಿದ ಒಂದು ವಿಶಿಷ್ಟ ಪದವಾಗಿದ್ದು, ಇದನ್ನು ಇನ್ನಷ್ಟು ಅಧ್ಯಯನ ಮಾಡಬೇಕಾಗಿದೆ. ಇದೇ ರೀತಿ ಅವರು ಕಟ್ಟುಂದೆರೆಗದ್ಯಾಣ, ಉಪಚಾರಗದ್ಯಾಣ, ಮರ್ಯಾದೆಗದ್ಯಾಣ, ಪರಿವಾರಗದ್ಯಾಣ, ಹೊದಿಕೆ ಹೊನ್ನು ಇತ್ಯಾದಿ ನಾಣ್ಯವಿಶೇಷಗಳನ್ನು ನಮೂದಿಸುತ್ತಾದರೂ ಅವುಗಳ ಅರ್ಥವ್ಯಾಪ್ತಿ ಈ ವರೆಗೆ ಅಸ್ಪಷ್ಟವಾಗಿದೆ.

ಅಪರೂಪದ ಮತ್ತು ಮುಖ್ಯವಾದ ಕೆಲವು ನಾಣ್ಯಗಳ ಚಿಕ್ಕ ಸಂಗ್ರಹವೊಂದು ಭಟ್ಟರಲ್ಲಿತ್ತು. ಆದರೆ ಈ ಸಂಗ್ರಹದ ಕುರಿತು ಅವರು ಯಾವುದೇ ವಿದ್ವತ್ಪತ್ರಿಕೆಯಲ್ಲಿ ಪ್ರಕಟಿಸಿದಂತೆ ತೋರುವುದಿಲ್ಲ. ಭಟ್ಟರು ನಾಣ್ಯಗಳ ಕುರಿತು ವಿಪುಲವಾಗಿ ಬರೆವಣಿಗೆ ಮಾಡದಿದ್ದರೂ, ಆಳುಪರ ನಾಣ್ಯಗಳ ಕುರಿತು ಅವರ ಅಧ್ಯಯನವು ಕರ್ನಾಟಕ ನಾಣ್ಯಶಾಸ್ತ್ರ ಕ್ಷೇತ್ರದಲ್ಲಿ ಒಂದು ಪ್ರಮುಖಸ್ಥಾನ ಪಡೆದಿದೆ ಎಂಬುದನ್ನು ಒಪ್ಪಲೇಬೇಕಾಗಿದೆ.[20]. ಅವರ ಇನ್ನೊಂದು ಗಮನೀಯ ಕೊಡುಗೆಯೆಂದರೆ ಶಾಸನಗಳಲ್ಲಿ ಉಲ್ಲೇಖಿಸಿರುವ ನಾಣ್ಯಗಳ ಮಾಹಿತಿ ಸಂಗ್ರಹ, ಇಂಥ ಹೊಸ ದೃಷ್ಟಿಯ ಸಂಶೋಧನೆಗೆ ಅವರು ನಾಂದಿ ಹಾಕಿದರೂ ಈ ಒಲವು ಭಾರತೀಯ ನಾಣ್ಯ ಅಧ್ಯಯನ ಕ್ಷೇತ್ರದಲ್ಲಿ ವಿಶೇಷವಾಗಿ ಮುಂದುವರಿಯಲಿಲ್ಲ. ಇಂಥ ಹೊಸ ದೃಷ್ಟಿಕೋನದಿಂದ ಸಂಶೋಧನೆಗಳು ನಡೆದರೆ ನಾಣ್ಯ ಅಧ್ಯಯನ ಕ್ಷೇತ್ರಕ್ಕೆ ಭಾರಿ ಲಾಭವಾದೀತು ಎಂದು ಹೇಳಬಹುದಾಗಿದೆ.

ಸಂದರ್ಭಸೂಚಿಗಳು:

1. ನರಸಿಂಹಮೂರ್ತಿ, ಎ.ವಿ. 1982, *ಡಾ। ಪಿ. ಗುರುರಾಜ ಭಟ್ಸ್ ಕಾಂಟ್ರಿಬ್ಯೂಷನ್ ಟು ನ್ಯೂಮಿಸ್‌ಮ್ಯಾಟ್ರಿಕ್ಸ್,* ದ ಜರ್ನಲ್ ಆಫ್ ದ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್, ವಾಲ್ಯೂಮ್ 2, ಪು. 34.
2. ಕಾಯಿನ್ಸ್ ಆಫ್ ಸದರ್ನ್ ಇಂಡಿಯ ಆಂಡ್ ಕಾಯಿನ್ಸ್ ಆಫ್ ಏನ್‌ಷ್ಯಂಟ್ ಇಂಡಿಯ, ಎ.ವಿ. ನರಸಿಂಹಮೂರ್ತಿ (ಸಂ.), ಸ್ಟಡೀಸ್ ಇನ್ ಸೌತ್ ಇಂಡಿಯ ಕಾಯಿನ್ಸ್ III, ಪು. 18
3. ಗುಪ್ತ, ಪಿ. ಎಲ್. ಕಾಯಿನ್ಸ್, ನ್ಯಾಷನಲ್ ಬುಕ್ ಟ್ರಸ್ಟ್, ನ್ಯೂ ಡೆಲ್ಲಿ, ಪು. 97.
4. ಎಮ್. ಎಮ್. ಪ್ರಭು, 1965, *ದ ಆಳುಪ ಕಾಯಿನ್ಸ್,* ಜರ್ನಲ್ ದ ನ್ಯೂಮೆಸ್‌ಮ್ಯಾಟಿಕ್ ಸೊಸೈಟಿ ಆಫ್ ಇಂಡಿಯ, ವಾಲ್ಯೂಮ್ 29, ಪುಟ 49.
5. ಅದೇ, ವಾಲ್ಯೂಮ್ 27, ಪುಟ 62
6. ಅದೇ ವಾಲ್ಯೂಮ್ XXVII, ಭಾಗ 1.
7. ಪಿ. ಗುರುರಾಜ ಭಟ್, 'ಆಳುಪರ ಕಾಲದ ಚಿನ್ನದ ನಾಣ್ಯ; ಪಾಂಡ್ಯಗದ್ಯಾಣ, ಕನ್ನಡಪ್ರಭ, 19–9–1971; ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್' ಪು. 209.
8. ಸೌತ್ ಇಂಡಿಯನ್ ಇನ್‌ಸ್ಕ್ರಪ್ಶ್ಯನ್, ವಾಲ್ಯೂಮ್ 7, ನಂಬರ್ 326.
9. ಡಾ। ಪಿ. ಗುರುರಾಜ ಭಟ್, *ಶುದ್ಧ ಬೆಳ್ಳಿಯ ಪಾಂಡ್ಯಗದ್ಯಾಣ,* ಉದಯವಾಣಿ, 14–3–1973.
10. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಶ್ಯನ್ಸ್, ವಾಲ್ಯೂಮ್ 7, ನಂಬರ್ 177..
11. ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್, ಪು. 37, *ಆಳುಪರ ಕಾಲದ ಚಿನ್ನದ ನಾಣ್ಯ: ಪಾಂಡ್ಯಗದ್ಯಾಣ,* ಕನ್ನಡಪ್ರಭ, 19–9–1971.
12. ಸೌತ್ ಇಂಡಿಯನ್ ಇನ್‌ಸ್ಕ್ರಪ್ಶ್ಯನ್, ಪು.
13. ಪಿ. ಗುರುರಾಜ ಭಟ್, ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್, ಪ್ಲೇಟ್ XVI.
14. ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್, ಪು. 209, *ಆಳುಪರ ಕಾಲದ ಚಿನ್ನದ ನಾಣ್ಯ: ಪಾಂಡ್ಯಗದ್ಯಾಣ,* ಕನ್ನಡಪ್ರಭ, 19–9–1971.
15. ಸೌತ್ ಇಂಡಿಯನ್ ಇನ್‌ಸ್ಕ್ರಪ್ಶ್ಯನ್, ವಾಲ್ಯೂಮ್ 7, ಪು. 253.
16. ಅದೇ, ಪು. 191.
17. ಪಿ. ಗುರುರಾಜ ಭಟ್, ಸ್ಟಡೀಸ್ ತುಳುವ ಹಿಸ್ಟರಿ ಆಂಡ್ ಕಲ್ಚರ್, ಪು. 206–212, *ಆಳುಪರ ಕಾಲದ ಚಿನ್ನದ ನಾಣ್ಯ: ಪಾಂಡ್ಯಗದ್ಯಾಣ,* ಕನ್ನಡಪ್ರಭ, 19–9–1971; *ಶುದ್ಧ ಬೆಳ್ಳಿಯ ಪಾಂಡ್ಯಗದ್ಯಾಣ,* ಉದಯವಾಣಿ, 14–3–1973; ನರಸಿಂಹಮೂರ್ತಿ, ಎ.ವಿ. 1982, *ಡಾ। ಪಿ. ಗುರುರಾಜ ಭಟ್ಸ್ ಕಾಂಟ್ರಿಬ್ಯೂಷನ್ ಟು ನ್ಯೂಮಿಸ್‌ಮ್ಯಾಟ್ರಿಕ್ಸ್,* ದ

ಜರ್ನಲ್ ಆಫ್ ದ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್, ವಾಲ್ಯೂಮ್ 2, ಪು. 34.

18. ಎ.ವಿ. ನರಸಿಂಹಮೂರ್ತಿ, ದ ಕಾಯಿನ್ಸ್ ಆಫ್ ಕರ್ನಾಟಕ, ಪು. 83.

19. ನರಸಿಂಹಮೂರ್ತಿ, ಎ.ವಿ. 1982, *ಡಾ। ಪಿ. ಗುರುರಾಜ ಭಟ್ಸ್ ಕಾಂಟ್ರಿಬ್ಯೂಷನ್ ಟು ನ್ಯೂಮಿಸ್‌ಮ್ಯಾಟ್ರಿಕ್ಸ್*, ದ ಜರ್ನಲ್ ಆಫ್ ದ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್, ವಾಲ್ಯೂಮ್ 2, ಪು. 37; ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್, ಪು. 212.

20. ಮಾನವಿಕ ಕರ್ನಾಟಕ, ಸಂಪುಟ 2, ನಂಬರ್ 3, ಪು. 22.

ಅಧ್ಯಾಯ –ಐದು

೫.೦. ಗುರುರಾಜ ಭಟ್ಟರ ಅಧ್ಯಯನದ ಮೇಲಿನ ಸಮಕಾಲೀನ ಬರವಣಿಗೆಗಳು.

ಗುರುರಾಜ ಭಟ್ಟರ ಅಧ್ಯಯನದ ಮೇಲಿನ ಸಮಕಾಲೀನ ಬರವಣಿಗೆಗಳು

ಗುರುರಾಜ ಭಟ್ಟರ ಅಧ್ಯಯನದ ಪುನರವಲೋಕನ[1] (Review) ಮತ್ತು ಸಮಕಾಲೀನ ಇತಿಹಾಸಕಾರರು ತಿಳಿಸಿದ ಭಟ್ಟರ 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್' –ಈ ಬೃಹತ್ ಗ್ರಂಥದ ಮೇಲಿನ ತಮ್ಮ ಅಭಿಪ್ರಾಯಗಳನ್ನು ತಿಳಿಯುವುದು ಅಗತ್ಯವಾಗಿದೆ. ಪ್ರಾಗಿತಿಹಾಸ, ಶಾಸನಗಳು, ಪ್ರತಿಮಾಶಾಸ್ತ್ರ, ವಾಸ್ತು ಮತ್ತು ಕ್ಷೇತ್ರ ಪರಿಚಯ –ಹೀಗೆ ಹಲವಾರು ವಿಷಯಗಳ ಬಗ್ಗೆ ಸಂಶೋಧನೆಯನ್ನು ನಡೆಸಿರುವ ಭಟ್ಟರ ಅಧ್ಯಯನಗಳ ಮೇಲೆ ಪ್ರಶಂಸೆಗಳು ಮತ್ತು ವಿಮರ್ಶೆಗಳನ್ನು ತಿಳಿಯುವುದು ಅಗತ್ಯವಾಗಿರುತ್ತದೆ. ಇತಿಹಾಸಕಾರನ ಅಧ್ಯಯನವ್ಯಾಪ್ತಿ ಟೀಕೆಯಿಂದ ಹೊರತಾಗಿ ಉಳಿಯಲು ಸಾಧ್ಯವಿಲ್ಲ. ಸಂಪೂರ್ಣವಾದ ಮಾಹಿತಿಯನ್ನು ಒದಗಿಸಿದರೂ ಕೂಡ ಯಾವುದೋ ಒಂದು ಮೂಲೆಯಲ್ಲಿ ಒಂದು ಸಣ್ಣ ಬಿಂದುವಿನ ಗಾತ್ರದಲ್ಲಿ ವಿಮರ್ಶೆ ಎಂಬುದು ಇರುತ್ತದೆ. ಆದರೆ ಭಟ್ಟರನ್ನು ಉದ್ದೇಶಿಸಿ ಕೆಲವು ಇತಿಹಾಸಕಾರರು ಪ್ರಶಂಸಿಸಿರುವಂತೆ 'ಟೀಕೆಯನ್ನು ಮೀರಿನಿಂತ ಇತಿಹಾಸಕಾರ' ಎಂಬುದಾಗಿ ವಿವರಿಸಿದ್ದಾರೆ.

ಕೆ. ನರಸಿಂಹ ಕೆದ್ಲಾಯ[2] ಅವರು ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನಲ್ಲಿ ಭಟ್ಟರ ಸಹೋದ್ಯೋಗಿಯಾಗಿದ್ದರು. ಹಾಗೂ ವಾಣಿಜ್ಯಶಾಸ್ತ್ರದ ಉಪನ್ಯಾಸಕರೂ ಆಗಿದ್ದರು. ಲೇಖಕರ ಅಪ್ರಕಟಿತ ಲೇಖನವಾದ 'ಡಾ। ಪಿ. ಗುರುರಾಜ ಭಟ್ ನೆನಪಿನಂಗಳದಿಂದ' ಇದರಲ್ಲಿ ಅವರ ಬಗ್ಗೆ `Self made man' ಎಂದಿದ್ದಾರೆ. ಸಂಶೋಧನೆಯಲ್ಲಿ ಆಳಕ್ಕೆ ಹೋಗಿ ನೋಡುವುದು ಅವರ ಹವ್ಯಾಸ. ಶಾಸನಗಳನ್ನು ಓದಿ, ಸ್ಥಳಕ್ಕೆ ಹೋಗಿ ಪರಿಶೀಲಿಸಿದ ಅನಂತರವೇ ತಮ್ಮ ತೀರ್ಮಾನ ತೆಗೆದುಕೊಳ್ಳುತ್ತಿದ್ದರು ಎಂದಿದ್ದಾರೆ. ಅವರಲ್ಲಿ ಬೆಳ್ಮಣ್ಣಿನ ಆಳುಪರ ಕಾಲದ ಶಾಸನವನ್ನು ನೋಡುವ ಬಗ್ಗೆ ಮತ್ತು ಪಡೆಯುವ ಬಗ್ಗೆ ಮಧ್ವರಾಯಭಟ್ಟರಲ್ಲಿಗೆ ಅದೆಷ್ಟೋ ಬಾರಿ ಹೋಗಿ ತಮ್ಮ ಕಾರ್ಯದಲ್ಲಿ ಯಶಸ್ವಿಯಾದರು ಎಂದು ತಿಳಿಸಿದ್ದಾರೆ. ಕುಂದಾಪುರದ ಬಗ್ಗವಾಡಿಯ ಮಹಿಷಮರ್ದಿನಿಯ ವಿಗ್ರಹವನ್ನು ನೋಡಿದಾಗ ಅವರಿಗಾದ ಆನಂದ ಹೇಳತೀರದು[3]. ಜೊತೆಗೆ ಕಣ್ಣೂರಿನ ಮಹಿಷಮರ್ದಿನಿ(ದುರ್ಗಾಪರಮೇಶ್ವರಿ ಎಂದು ಪೂಜಿಸುತ್ತಾರೆ)ಯನ್ನು ನೋಡಿದಾಗಲೂ ಅವರ ಆನಂದ ಹೇಳತೀರದು. ಪಿ. ಗುರುರಾಜ ಭಟ್ಟರು ತಮ್ಮ ಸಂಶೋಧನೆಯನ್ನು ಮಾಡುವುದರ ಜೊತೆಗೆ ಇತರರಿಗೂ ಕೂಡಾ ಪ್ರೋತ್ಸಾಹವನ್ನು ಕೊಡುತ್ತಿದ್ದರು ಎಂಬುದನ್ನು ನೋಡಬಹುದು. ಅಪ್ರಕಟಿತ ಲೇಖನವಾದ ಕೆ. ನಾರಾಯಣ ಶೆಟ್ಟಿಯವರು[4] ಬರೆದಂತಹ 'ನಾನು ಕಂಡಂತೆ ಡಾ। ಗುರುರಾಜ ಭಟ್ಟರು' ಎಂಬ ಲೇಖನದಲ್ಲಿ ಹೇಳಿರುವಂತೆ 'ಡಾ। ಭಟ್ಟರು ಓರ್ವ ಸಂಶೋಧಕ ರಾಜ್ಯದ

ಮೂಲೆಮೂಲೆಗಳಲ್ಲಿರುವ ದೇವಸ್ಥಾನಗಳಿಗೆ ಹೋಗಿ ದೇವಸ್ಥಾನದ ಪ್ರಾಚೀನತೆ, ಅಲ್ಲಿರುವ ದೇವ ಶಿಲಾಮೂರ್ತಿಗಳ ಕೂಲಂಕಶ ಅಧ್ಯಯನ ನಡೆಸಿ ಆ ಶಿಲಾಮೂರ್ತಿಗಳ ಕಾಲ ನಿರ್ಣಯ ಹೇಳುತ್ತಿದ್ದರು. ಮತ್ತು ಅನೇಕ ಲೇಖನಗಳನ್ನು ಬರೆದು ಜನತೆಗೆ ವಾಸ್ತವಿಕತೆ ತಿಳಿಸುತ್ತಿದ್ದರು. ಶ್ರೀಯುತರ ಪ್ರೇರಣೆ ಮತ್ತು ಮಾರ್ಗದರ್ಶನದಲ್ಲಿ ಕೆ. ನಾರಾಯಣ ಶೆಟ್ಟಿಯವರು 'ವಿಜಯನಗರದ ತುಳುವಂಶ ಮತ್ತು ಕಾರ್ಕಳದ ಭೈರರಸರು' ಎಂಬ ಎರಡು ಪುಸ್ತಕಗಳನ್ನು ಬರೆದಿದ್ದಾರೆ. ಗುರುರಾಜ ಭಟ್ಟರು ಇಂದು ನಮ್ಮ ಮುಂದೆ ಇಲ್ಲದಿದ್ದರೂ ಅವರು ಸಮಾಜಕ್ಕೆ ನೀಡಿದ ಕೊಡುಗೆ ಮಾತ್ರ ಅಪಾರವಾದುದು ಮಾತ್ರವಲ್ಲದೆ ಸದಾ ಜೀವಂತವಾಗಿದೆ ಎಂದು ಹೇಳಿದ್ದಾರೆ.

ವೈ. ಉಮಾನಾಥ ಶೆಣೈಯವರ[5] ಶ್ರೀಗಂಧದಂತಾದ ಗುರುರಾಜ ಭಟ್ಟರು ಲೇಖಕರಿಗೆ ಒಂದು ಪತ್ರದಲ್ಲಿ ದಿನಾಂಕ ೨೫-೧೧-೧೯೬೮ರಲ್ಲಿ ಬರೆದ ಪತ್ರದಲ್ಲಿ ಈ ರೀತಿಯಾಗಿ ತಿಳಿಸಿದ್ದಾರೆ. "ನನಗೀಗ ಕೈಕಟ್ಟಿದಂತಾಗಿದೆ. ಸಂಸ್ಥೆಯ ಮುಖ್ಯ ಅಧಿಕಾರಿಯಾಗಿ ಅದರ ಪರವಾದ ಕರ್ತವ್ಯವನ್ನು ಕಪಟವಿಲ್ಲದೆ ಮಾಡಬೇಕು. ಇತರ ಅನೇಕ ಸಮಸ್ಯೆಗಳಿಗೆ ಮನವೀಯಬೇಕು. ಐತಿಹಾಸಿಕ ಶೋಧಕ್ಕೆ ಸಮಯವಿಲ್ಲ, ಮಾತ್ರವಲ್ಲದೆ ದ್ರವ್ಯವೂ ಇಲ್ಲ. ಶೋಧಕರು ನಮ್ಮ ದೇಶದಲ್ಲಿ ಕಷ್ಟದಲ್ಲೇ ದಿನಕಳೆಯಬೇಕಾಗಿದೆ. ಅದರಲ್ಲೂ ಇತಿಹಾಸ ಸಂಶೋಧಕರು ನಿಜವಾಗಿಯಾದರೂ...." ಬಹಳ ನಿಸ್ಸಹಾಯಕರು, ಸಮಾಜದಿಂದ ಸಹಾಯ ಪಡೆಯಲು ಅನರ್ಹರಾಗಿರುವವರು...... ಎಂಬ ಅರ್ಥದ ಇನ್ನೂ ಕೆಲವು ವಾಕ್ಯಗಳನ್ನು ಬರೆದಿದ್ದರು ಎಂದು ಲೇಖಕರು ಹೇಳಿದ್ದಾರೆ.

ಗುರುರಾಜ ಭಟ್ಟರು ಸುಮಾರು ಎರಡು ದಶಕಗಳ ಕಾಲವನ್ನು ಮೀರಿ ಮಾಡಿರುವ ಅಧ್ಯಯನಗಳನ್ನು ಇಂದಿನ ಅನೇಕ ವಿದ್ವಾಂಸರು ಮೌಲ್ಯಮಾಪನ ಮಾಡಿರುವರಾದರೂ ಇತಿಹಾಸರಚನಾಶಾಸ್ತ್ರದ ಸ್ಥಿರವಾದ ನೆಲೆಗಟ್ಟಿನಲ್ಲಿ ಮೌಲ್ಯಮಾಪನ ಮಾಡಿದವರೆಂದರೆ, ಖ್ಯಾತ ಇತಿಹಾಸಕಾರ ಬಿ. ಸುರೇಂದ್ರ ರಾವ್ ಅವರು.

ಬಿ. ಸುರೇಂದ್ರ ರಾವ್[6] ಅವರು ಹೇಳಿರುವಂತೆ ಗುರುರಾಜ ಭಟ್ಟರು ಕೊನೆಯವರೆಗೂ ಮಹಾನ್ ಹವ್ಯಾಸಿಯಾಗಿಯೇ ಉಳಿದರು. ಅವರ ಅತ್ಯುತ್ಸಾಹವೇ ಮಹಾಕೃತಿಯೊಂದನ್ನು ಬರೆಯಲು ಗುರುರಾಜ ಭಟ್ಟರಿಗೆ ಪ್ರೇರಣೆ ನೀಡಿತು. ಅವರ ಮಹಾನ್‌ಕೃತಿಯ ಪುಟಗಳನ್ನು ತಿರುವುತ್ತಾ ಹೋದಂತೆ ತುಳುವ ಸಂಸ್ಕೃತಿಯ ಬಹುಮುಖ ವೈಭವವನ್ನು ಕಂಡು ಅತ್ಯಾಶ್ಚರ್ಯದಲ್ಲಿ ಮುಳುಗಿಹೋದ ಓರ್ವನಂತೆ ಅವರು ತೋರುತ್ತಾರೆ. ತುಳುನಾಡಿನ ನೂರಾರು ಸಾಂಸ್ಕೃತಿಕ ಅಚ್ಚರಿಗಳನ್ನು ವಿವರಿಸಲು ಹೊರಟ ಅವರು ಯಾವುದೇ ರೀತಿಯ ಶ್ರಮ ವಹಿಸಲು ಹಿಂದೆಮುಂದೆ ನೋಡುತ್ತಿರಲಿಲ್ಲ. ಅವರು ಇತಿಹಾಸಪೂರ್ವ ಕಾಲದಿಂದ ಆಧುನಿಕ ಕಾಲದ ವರೆಗೆ ತುಳುವ ಇತಿಹಾಸ ಸಂಸ್ಕೃತಿಯನ್ನು ತಮ್ಮ ಸಂಶೋಧನಾ ಕ್ಷೇತ್ರವಾಗಿ ಆಯ್ದುಕೊಂಡದ್ದು ಅತ್ಯಂತ ಪ್ರಯಾಸದಾಯಕ ಕಾರ್ಯವಾಗಿತ್ತೆಂಬುದರಲ್ಲಿ ಸಂಶಯವಿಲ್ಲ. ಇಷ್ಟೊಂದು ವಿಸ್ತಾರವಾದ

ಕ್ಷೇತ್ರವನ್ನು ಆಯ್ಕೆ ಮಾಡಿದುದು ಇತಿಹಾಸ ರಚನೆಯ ನಿಟ್ಟಿನಲ್ಲಿ ಐಕಮತ್ಯ (Unity) ಮತ್ತು ಸಮಸೂತ್ರತೆಯನ್ನು (cohesion) ನಿರ್ಲಕ್ಷಿಸಿದುದು ಅವರ ಹವ್ಯಾಸ ಮನೋಭಾವಕ್ಕೆ ಹೊಳೆಯಲಿಲ್ಲವೆಂದು ತೋರುತ್ತದೆ. ಇತಿಹಾಸಕಾರನು ತನ್ನ ಕೃತಿಯಲ್ಲಿ ಅದರ ಅರ್ಥಪೂರ್ಣ ಎಲ್ಲೆಯನ್ನು ಹಾಗೂ ಕಾಲಾವದಿಯನ್ನು ಮಂಡನೆ ಮಾಡಿದರೆ ಮಾತ್ರವೇ ಅದರ ನಿರೂಪಣೆಯಲ್ಲಿ ನೈಜವಾದ ಹೊಂದಾಣಿಕೆಯ ಭಾವ ಉಂಟಾಗುತ್ತದೆ. ಈ ಪ್ರಕಾರದ ಉಪೇಕ್ಷೆಯು ಭಟ್ಟರ ಮಹತ್ವಾಕಾಂಕ್ಷೆಯ ಕೃತಿಯಲ್ಲಿ ತಲೆದೋರಿದ ಕೆಲವೊಂದು ಕೊರತೆಗಳಿಗೆ ಬಹುಮುಖ್ಯವಾದ ಕಾರಣವಾಗಿದೆ.

ಸುದೀರ್ಘ ಕಾಲಗತಿಯನ್ನು ಕ್ರಮಿಸುವ ಭಟ್ಟರ ಇತಿಹಾಸ ನಿರೂಪಣೆಯು ಇತಿಹಾಸ ಪೂರ್ವಕಾಲದಿಂದ ಪ್ರಾರಂಭಗೊಳ್ಳುವುದೇನೋ ನಿಜ; ಆದರೆ ಎರಡನೇ ಕ್ಷೇತ್ರಗಳಲ್ಲಿ ಅವರ ಇತಿಹಾಸ ನಿರೂಪಣೆಯು ಪೂರ್ಣತೆಯನ್ನು ಕಂಡಿದೆ. ಆ ಕ್ಷೇತ್ರಗಳೆಂದರೆ ಆಳುಪರ ಇತಿಹಾಸ ಮತ್ತು ತುಳುನಾಡಿನ ಸಾಮಂತ ರಾಜ್ಯಗಳ ಇತಿಹಾಸ[7].

ತುಳುನಾಡಿನಲ್ಲಿ ವಿಜಯನಗರದ ಆಳ್ವಿಕೆಯ ನಿರೂಪಣೆಯು ಐತಿಹಾಸಿಕ ಐಕಮತ್ಯವನ್ನು ಸಾಧಿಸಲು ವಿಫಲವಾಗಿದೆ. ಬಾರಕೂರು ರಾಜ್ಯ ಮತ್ತು ಮಂಗಳೂರು ರಾಜ್ಯದ ಗವರ್ನರುಗಳ ಸುದೀರ್ಘ ಪಟ್ಟಿಯು ಇತಿಹಾಸದ ಹಿನ್ನೆಲೆಯನ್ನು ಒದಗಿಸಲು ಅಸಮರ್ಥವಾಗಿದೆ. 'History of South Kanara'ದಲ್ಲಿ ಕೆ.ವಿ. ರಮೇಶ್[8] ಅವರು ತೋರಿದ ಅಸ್ಖಲಿತವಾಗಿ ಸಾಗುವ ಐತಿಹಾಸಿಕ ಜೋಡಣೆಯ ಅನುಪಮ ಕೌಶಲ್ಯ ಭಟ್ಟರಿಗೆ ಸಿದ್ಧಿಸಿದಂತಿಲ್ಲ. ಅವರ ಇತಿಹಾಸ ನಿರೂಪಣೆಯು ಹೈದರ್ ಮತ್ತು ಟಿಪ್ಪುವಿನ ಕಾಲದವರೆಗೆ ಕುಂಟುತ್ತಾ ಸಾಗಿ, ದಿಢೀರನೆ ನಿಂತುಬಿಡುತ್ತದೆ. ಇತಿಹಾಸನಿರೂಪಣೆಯಲ್ಲಿ ಐಕಮತ್ಯ ಮತ್ತು ಸಮಸೂತ್ರತೆಗಳನ್ನು ಸಾಧಿಸುವುದು ನಿಜಕ್ಕೂ ಕಷ್ಟಕರ.

ತುಳುನಾಡಿನ ಶ್ರೀಮಂತ ಸಂಸ್ಕೃತಿಯನ್ನು ವರ್ಣಿಸುವ ನಿಟ್ಟಿನಲ್ಲಿ ಭಟ್ಟರು ಸೂಕ್ಷ್ಮ ವಿವರಗಳಿಗೆ ತನಗಿರುವ ಅತೀವ ಒಲವನ್ನು ಸ್ಪಷ್ಟವಾಗಿ ಪ್ರದರ್ಶಿಸಿದ್ದಾರೆ. ಆಡಳಿತ, ಆರ್ಥಿಕ ಜೀವನ, ಸಮಾಜ ಮತ್ತು ಜನತೆ ಅಥವಾ ಧರ್ಮ –ಇವೆಲ್ಲವನ್ನು ಅತ್ಯಂತ ದಕ್ಷತೆಯಿಂದ ವರ್ಣಿಸಿದ್ದಾರೆ. ತುಳುವ ಸಮಾಜದ ಕುರಿತಾದ ಬರೆವಣಿಗೆಯಂತೂ, ಅವರ ಅತ್ಯುನ್ನತ ಅಧ್ಯಯನಗಳಲ್ಲಿ ಒಂದಾಗಿದೆ. ಇಂತಹ ನಿಕಟ ಅಧ್ಯಯನವು ಜಿಲ್ಲೆಯ ವಾಚಕರಿಗೆ ಪ್ರಿಯವಾಗಿರುವುದರಲ್ಲಿ ಅಚ್ಚರಿಯಿಲ್ಲ. ಗುರುರಾಜ ಭಟ್ಟರು ಹಿಂದಿನ ಕಾಲ ಮತ್ತು ಇಂದಿನ ಕಾಲಗಳ ನಡುವಿನ ಸಾಮಾಜಿಕ ಜೀವನದ ಪರದೆಯನ್ನು ಬಿಚ್ಚಿಹಾಕಿರುವುದೇ ಇದಕ್ಕೆ ಕಾರಣವಾಗಿದೆ.

ತುಳುವ ಪ್ರದೇಶದ ಕಲೆ ಮತ್ತು ವಾಸ್ತು, ಅವುಗಳಿಗೂ ಹೆಚ್ಚಾಗಿ ಮೂರ್ತಿಶಿಲ್ಪ[9] ಭಟ್ಟರ ಅತ್ಯಂತ ಪ್ರಿಯ ಕ್ಷೇತ್ರಗಳು ಆಗಿವೆ. ತುಳುನಾಡಿನ ದೇವರು, ಪೂಜಾಪದ್ಧತಿ, ಮೂರ್ತಿಗಳ ರೂಪು ಹಾಗೂ ಔಚಿತ್ಯಗಳನ್ನು ಕುರಿತು ಸೂಕ್ಷ್ಮಾತಿಸೂಕ್ಷ್ಮ ವಿವರಗಳಿಂದ ಅವರ ಅಧ್ಯಯನವು

ತುಂಬಿತುಳುಕುತ್ತಿದೆ. ಜೊತೆಗೆ ಭಾವಚಿತ್ರಗಳು ಮತ್ತು ರೇಖಾಚಿತ್ರಗಳ ಭಾರೀ ಸಂಗ್ರಹವನ್ನು ಕೃತಿಯಲ್ಲಿ ಸೇರಿಸಲಾಗಿದೆ[10].

ಸೂಕ್ತವಾಗಿ ಸಂಪಾದನೆ ಮಾಡಿರುವ ಆಯ್ದ ಚಿತ್ರಗಳನ್ನಷ್ಟೇ ಅವರು ಪ್ರಕಟಿಸಬಹುದಿತ್ತು. ಆದರೆ ಅತ್ಯುತ್ಸಾಹವೇ ಹಾಗೆ ಮಾಡಲು ಅವರಿಗೆ ಅಡ್ಡಿಬಂದಿತ್ತೆನ್ನಬಹುದು. ಸಂಕ್ಷಿಪ್ತತೆಯ ಗುಣವು ಭಟ್ಟರ ಅಧ್ಯಯನದಲ್ಲಿ ಕಂಡುಬರುವುದಿಲ್ಲ. ಸಂಕ್ಷಿಪ್ತತೆಯಿಲ್ಲದೆ ಸ್ಪಷ್ಟತೆ ಎಂದೂ ಮೂಡಿಬರದು. ಆದರೆ ಇತಿಹಾಸಕಾರರು ತಮ್ಮ ತಮ್ಮ ಸಂಶೋಧನೆಗಳ ಬಗ್ಗೆ ಅತ್ಯಭಿಮಾನ ತಾಳುವುದಿದೆ. ಅವರು ತಮ್ಮ ಯಾವುದೇ ಶೋಧವನ್ನು ನಿಷ್ಫಲಗೊಳಿಸಲೊಲ್ಲರು. ಐತಿಹಾಸಿಕ ಅನುಭವಗಳು ಸಾಮಾನ್ಯವಾಗಿ ಶ್ರೀಮಂತಿಕೆ ಮತ್ತು ಸಂಕೀರ್ಣಗಳಿಂದ ತುಂಬಿದ್ದು, ಆಯ್ಕೆಯ ಸಮಸ್ಯೆಯು ನಿಜಕ್ಕೂ ತೀವ್ರವೆನಿಸುತ್ತದೆ. ತಮ್ಮ ಅತ್ಯುತ್ಸಾಹದ ಪರಿಣಾಮವಾಗಿ ಗುರುರಾಜ ಭಟ್ಟರು ತಮ್ಮ ಕಠಿಣ ಪರಿಶ್ರಮದ ಒಲವನ್ನು ನೀಡುವುದರೊಂದಿಗೆ ಅವರ ಪರಿಶ್ರಮವನ್ನೂ ಕೂಡ ನಮ್ಮ ಮುಂದೆ ತೆರೆದಿಟ್ಟಿದ್ದಾರೆ.

ಅವರ ಭರ್ಜರಿ ಕತೆಯಲ್ಲಿ ಇದೊಂದು ಗಂಭೀರವಾದ ವೈಧಾನಿಕ ಪ್ರಮಾದವೆನ್ನ ಬಹುದು. ಇತಿಹಾಸಕಾರನು ತನ್ನ ಅಗಾಧ ಪ್ರಮಾಣದ ಶೋಧವನ್ನು ಹಿಂಡಿ ಹಿಂಡಿ ಬರುವ ಸತ್ವವನ್ನಷ್ಟೇ ಪ್ರಕಟಿಸತಕ್ಕದ್ದು. ಇದರಿಂದ ಆತನ ಭಾವನೆ ಮತ್ತು ಚಿಂತನಾಶಕ್ತಿಯು ಹೊರಹೊಮ್ಮುತ್ತದೆ. ಅಲ್ಲದೆ ಇತಿಹಾಸಕಾರನು ತನ್ನ ಕಾರ್ಯಾಗಾರದಲ್ಲಿರುವ, ಕೆಲಸಕ್ಕೆ ಬಾರದ ಉಪವಸ್ತುಗಳನ್ನು ಎಸೆದು ಪರಿಪೂರ್ಣಗೊಂಡ ಉತ್ಪನ್ನವನ್ನಷ್ಟೇ ಪ್ರದರ್ಶಿಸತಕ್ಕದ್ದು.

ಹೀಗಿದ್ದರೂ ಗುರುರಾಜ ಭಟ್ಟರು ಅವರ ಕೃತಿಗಳನ್ನು ಮೀರಿನಿಂತ ಮಹಾನ್ ವ್ಯಕ್ತಿ ಆಗಿದ್ದಾರೆ ಎಂದು ಬಿ. ಸುರೇಂದ್ರ ರಾವ್ ಬರೆಯುತ್ತಾರೆ.

ಅವರ ಇತಿಹಾಸ ಕುರಿತಾದ ಪ್ರಾಮಾಣಿಕ ಉತ್ಸಾಹದಿಂದಾಗಿ ಕೃತಿಗಳಲ್ಲಿ ಕುಂದು ಕೊರತೆಗಳು ತಲೆದೋರಿದ್ದಿರಬಹುದು. ತುಳುವ ಇತಿಹಾಸ ಮತ್ತು ಸಂಸ್ಕೃತಿಗೆ ಸಂಬಂಧ ಪಟ್ಟಂತೆ ಅವರ ಪ್ರೇಮ ಎಲ್ಲವನ್ನು ಮೀರಿ ನಿಲ್ಲುತ್ತದೆ. ಅವರ ಕೃತಿಯನ್ನು ಕೆಲವು ಮಂದಿ ಓದಬಹುದು ಮತ್ತು ಇನ್ನಷ್ಟು ಕೆಲವುಮಂದಿ ಅರ್ಥಮಾಡಿಕೊಳ್ಳಬಹುದು. ಆದರೆ ತುಳುವ ಚಾರಿತ್ರಿಕ ಪ್ರಜ್ಞೆಯ ಮೇಲೆ ಅಚ್ಚಳಿಯ ಮುದ್ರೆಯನ್ನು ಒತ್ತಿದವರೆಂದು ಗುರುರಾಜ ಭಟ್ಟರು ಎಲ್ಲರಿಂದಲು ಗುರುತಿಸಲ್ಪಡದೆ ಇರಲಾರರು. ಭಟ್ಟರು ಬರೆದುದು ಕೇವಲ ಕೃತಿಮಾತ್ರವಲ್ಲ, ಅದು ತುಳುವ ಇತಿಹಾಸ–ಸಂಸ್ಕೃತಿಯ ಒಂದು ವಿಶ್ವಕೋಶವೇ ಆಗಿದೆ. ಅವರ ಕೃತಿಯ ಶ್ರೇಷ್ಠತೆಯನ್ನು ತಿಳಿದುಕೊಳ್ಳದವರು ಕೂಡ ಅವರನ್ನು "ಇವರೊಬ್ಬ ಮಹಾನ್ ವ್ಯಕ್ತಿ" ಎಂಬುದಾಗಿ ಉದ್ಗಾರ ಮಾಡದಿರಲಾರರು[11].

ಕೆ. ಜಿ. ವಸಂತಮಾಧವ[12] ಅವರು ತಮ್ಮ ಅಪ್ರಕಟಿತ ಲೇಖನವಾದ 'ಮಹಾಮಹೋಪಾಧ್ಯಾಯ ಇತಿಹಾಸ ಸಂಶೋಧಕ ಡಾ। ಪಿ. ಗುರುರಾಜ ಭಟ್ಟರು' ಎಂಬ ಲೇಖನದಲ್ಲಿ

ಸಂಶೋಧನೆ ಯಾವ ರೀತಿಯಲ್ಲಿ ನಡೆಯಬೇಕೆಂಬ ಪ್ರತ್ಯಕ್ಷ ಮಾಹಿತಿಗಳನ್ನು ಲೇಖಕರಿಗೆ ತಿಳಿಸಿದ್ದಾರೆ. ಇವರ ಗ್ರಂಥವಾದ 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್'[13] ಕರಾವಳಿ ಕರ್ಣಾಟಕ ಮುಖ್ಯವಾಗಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸದ ವಸ್ತುಕೋಶವಾಗಿದೆ. ಈ ಜಿಲ್ಲೆಯ ಸಂಶೋಧಕರಿಗೆ ಇವರ ಈ ಗ್ರಂಥ ಸಂಶೋಧನೆಯ ಆಕರವಾಗಿದೆ" ಎಂದು ಲೇಖಕರು ತಿಳಿಸಿದ್ದಾರೆ.

ಬಾ. ಸಾಮಗ,[14] ಸಂಪಾದಕ, ದೆಹಲಿ ಕನ್ನಡಿಗ –ಡಾ। ಭಟ್ಟರ ಸೇವಾಗುಣ– ಅಪ್ರಕಟಿತ ಲೇಖನದಲ್ಲಿ ಅಂದಿನ ಕಾರ್ಯಸಾಧನೆಯ ಬಗ್ಗೆ ತಿಳಿಸಿದ್ದಾರೆ. ಅವರೇ ತಿಳಿಸಿದಂತೆ 'ಡಾ। ಪಿ. ಗುರುರಾಜ ಭಟ್ಟರು ಬರೆದ ಅನೇಕ ಸಂಶೋಧನ ಸಚಿತ್ರ ಲೇಖನಗಳು ಕರ್ನಾಟಕದ ಎಲ್ಲ ಪತ್ರಿಕೆಗಳಲ್ಲೂ ಪ್ರಕಟವಾಗುತ್ತಿದ್ದವು. ಹಾಗೆಯೇ ಭಟ್ಟರ ಲೇಖನಗಳು ಲೇಖಕರಿಗೆ ಸ್ಫೂರ್ತಿದಾಯಕವಾಗಿವೆ ಎಂದಿದ್ದಾರೆ. ತುಳುನಾಡಿನ ದೇವಾಲಯಗಳು, ಶಿಲ್ಪಗಳು ಮುಂತಾದವುಗಳ ಕುರಿತ ಭಟ್ಟರ ಲೇಖನಗಳನ್ನು ಓದಿ ಅವರಿಗೆ ತುಳುನಾಡಿನ ಬಗ್ಗೆ ಆಸಕ್ತಿ ಹುಟ್ಟಿತು' ಎಂದಿದ್ದಾರೆ.

ಎ. ವಿ. ನರಸಿಂಹ ಮೂರ್ತಿ[15], ಚೇರ್‌ಮೆನ್ –ಇವರ ಅಪ್ರಕಟಿತ ಲೇಖನವಾದ Padur Gururaja Bhatt -A Proud Son of Tulunadu ಎಂಬುದರಲ್ಲಿ ತಿಳಿಸಿರುವಂತೆ ಗುರುರಾಜ ಭಟ್ಟರು ತುಳುನಾಡಿನ ರಾಜಕೀಯ ಮತ್ತು ಸಾಂಸ್ಕೃತಿಕ ವಿಚಾರಗಳನ್ನು ಎಲ್ಲರ ಮನಸೂರೆಗೊಳ್ಳುವಂತೆ, ಆಯಾ ಕ್ಷೇತ್ರಗಳಿಗೆ ಭೇಟಿನೀಡಿ ಫೀಲ್ಡ್‌ವರ್ಕ್ ಮಾಡಿ ಕಾಲಗಣನೆಯ ಪ್ರಕಾರವಾಗಿ ಯಾರೂ ಮಾಡಿರದಂತಹ ತುಳುನಾಡಿನ ಇತಿಹಾಸದ ಬಗ್ಗೆ ಕಲ್ಪನೆಯನ್ನು ಮಾಡಿಕೊಳ್ಳದಂತಹ ರೀತಿಯಲ್ಲಿ ಅಪೂರ್ವವಾಗಿ ವಿವರಿಸಿದ್ದಾರೆ. ಪ್ರಸ್ತುತ ಈ ಬೃಹದ್ಗ್ರಂಥವನ್ನು 'ತುಳುನಾಡಿನ ಎನ್‌ಸೈಕ್ಲೊಪಿಡಿಯಾ' ಎಂದು ಕರೆದಿದ್ದಾರೆ. ೧೯೭೫ರಲ್ಲಿ ಭಟ್ಟರ ಈ ಬೃಹತ್‌ಗ್ರಂಥವು Masterly contribution on to the regional history of Karnataka in particular and that of India in general ಎಂದಿದ್ದಾರೆ. ಭಟ್ಟರು ಇದೇ ರೀತಿಯಲ್ಲಿ ಶಾಸನಶಾಸ್ತ್ರದಲ್ಲಿ, ನಾಣ್ಯಶಾಸ್ತ್ರದಲ್ಲಿ[16] ವಾಸ್ತುಶಿಲ್ಪದಲ್ಲಿ ಮತ್ತು ಶಿಲ್ಪಶಾಸ್ತ್ರದಲ್ಲಿ ಅತ್ಯುತ್ತಮವಾಗಿ ತನ್ನ ಕೊಡುಗೆಯನ್ನು ಕೊಟ್ಟಿದ್ದಾರೆ". ಈ ಗ್ರಂಥದಲ್ಲಿ ಪ್ರಾಚೀನ ಭಾರತದ ಸಾಂಸ್ಕೃತಿಕ ಉತ್ಕ್ರಾಂತಿಯ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. ೧೪ ಅಧ್ಯಾಯಗಳನ್ನೊಳಗೊಂಡ ಅವರ ವಿದ್ವತ್‌ಗ್ರಂಥದಲ್ಲಿ ಮೊದಲ ಎರಡು ಅಧ್ಯಾಯಗಳು ತುಳುನಾಡಿನ ವಿಕಸನದ ಬಗ್ಗೆ ತಿಳಿಸುತ್ತವೆ. ಅನಂತರದ ೪ ಅಧ್ಯಾಯಗಳು ಪ್ರಾಚೀನ ಕಾಲದಿಂದ ಆಧುನಿಕ ಕಾಲದ ರಾಜಕೀಯ ಇತಿಹಾಸವನ್ನು ಸಂಕ್ಷಿಪ್ತವಾಗಿ ಹೇಳುತ್ತವೆ. ಅಂದಿನ ಆಡಳಿತ, ಸಾಮಾಜಿಕತೆ ಮತ್ತು ಆರ್ಥಿಕ ಜೀವನದ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ. ಕೊನೆಯ ೩ ಅಧ್ಯಾಯಗಳು ಧಾರ್ಮಿಕತೆ, ವಾಸ್ತುಶಿಲ್ಪ ಮತ್ತು ಶಿಲ್ಪಕಲೆ ಹಾಗು ತುಳುನಾಡಿನಲ್ಲಿ ಜೈನಧರ್ಮದ ಬಗ್ಗೆ ತಿಳಿಸುತ್ತವೆ. ಹಾಗೆಯೆ ಪ್ರತಿಮಾಶಾಸ್ತ್ರದ ಅಧ್ಯಯನದಲ್ಲಿ ಪ್ರಮುಖವಾಗಿ ಗಣೇಶ, ಶಿವ, ಸೂರ್ಯ, ಮಹಿಷಮರ್ದಿನಿ, ವಿಷ್ಣು, ಪಾರ್ವತಿ

ಮತ್ತು ಕೃಷ್ಣ –ಇವುಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದಾರೆ[17]. ದಕ್ಷಿಣ ಕನ್ನಡದ ತುಳುನಾಡಿನ ಇತಿಹಾಸವನ್ನು ತಿಳಿಸುವ ಬಗ್ಗೆ -`Studies in Tuluva History and Culture'- ಈ ಬೃಹತ್ ಗ್ರಂಥ ಹೆಚ್ಚಿನ ಪ್ರಾಮುಖ್ಯತೆಯನ್ನು ಗಳಿಸಿಕೊಂಡಿದೆ.

ಡಾ। ಎಂ. ರಾಘವ ನಂಬಿಯಾರ್[18] ತಮ್ಮ ಅಪ್ರಕಟಿತ ಲೇಖನವಾದ 'ಸತ್ಯನಿಷ್ಠ ಇತಿಹಾಸಜ್ಞ : ಡಾ। ಗುರುರಾಜ ಭಟ್ಟ' –ಇದರಲ್ಲಿ 'ಬಾರಿ ದೇವಸ್ಥಾನ' ಎಂದು ಪ್ರಸಿದ್ಧ ವಾಗಿರುವ ಕಾಪುವಿನ ಹಳೆ ದೇಗುಲ ಬುದ್ಧನದೆಂದು ಭಟ್ಟರು ತಮ್ಮ "Antiquities of South Canara" ಗ್ರಂಥದಲ್ಲಿ ಸಚಿತ್ರವಾಗಿ ದಾಖಲಿಸಿದ್ದರು. 'ಮೂಲೂರು' (ಮೂಲಪುರು) ಎಂಬ ಹೆಸರು ಬರಲು ಈ ಬುದ್ಧ ದೇಗುಲ ಕಾರಣವೆಂದೂ ಅವರು ತರ್ಕಿಸಿದ್ದರು. 'ಬಾರಿ' ಎಂಬುದು ವ್ಯಾಪಾರಿ ಎಂಬುದರ ತದ್ಭವ. ಆ ದೇಗುಲದ ಬಿಂಬವನ್ನೀಗ ವಾಸುದೇವ ಎಂದು ಆರಾಧಿಸುತ್ತಾರೆ".

ಸೂರ್ಯನಾರಾಯಣಪ್ಪನವರು ೧೯೭೩ರಲ್ಲಿ ಪ್ರಕಟವಾದ ಕರಪತ್ರವೊಂದರಲ್ಲಿ[19] ಭಟ್ಟರ ಬಗ್ಗೆ ಬರೆದ ಕೆಲವು ಪ್ರಶಂಸಾತ್ಮಕ ವಾಕ್ಯಗಳನ್ನು ನೋಡಬಹುದು

ಭಟ್ಟರ ಸಮಕಾಲೀನರಾದ ಕು. ಶಿ. ಹರಿದಾಸ ಭಟ್ಟರು[20] ತಮ್ಮ ಅಪ್ರಕಟಿತ ಲೇಖನವಾದ ಗುರುರಾಜ ಭಟ್ಟರ ಅಧ್ಯಯನದಲ್ಲಿ ತಮ್ಮ ಹೇಳಿಕೆಗಳನ್ನು ತಿಳಿಸಿದ್ದಾರೆ. ಲೇಖಕರು ತಿಳಿಸಿದಂತೆ, ಭಟ್ಟರು ಹದಿನಾರು ವರ್ಷಗಳಿಂದ ಸತತವಾಗಿ ಕ್ಷೇತ್ರಕಾರ್ಯವನ್ನು ಮಾಡಿ ತಮ್ಮ ಸಮಗ್ರ ಗ್ರಂಥವಾದ 'ತುಳುವರ ಇತಿಹಾಸ ಮತ್ತು ಸಂಸ್ಕೃತಿಯ ಅಧ್ಯಯನ' ಎಂಬ ಒಂದು ಗ್ರಂಥವನ್ನು ಆಂಗ್ಲಭಾಷೆಯಲ್ಲಿ ಬಿಡುಗಡೆ ಮಾಡಿದ್ದಾರೆ. ಈ ಗ್ರಂಥದಲ್ಲಿ ಎಲ್ಲಾ ರೀತಿಯಲ್ಲೂ ಮಾಹಿತಿ ಇದೆ. ಅಮೇರಿಕಾದಲ್ಲಿ ಪ್ರೊಫೆಸರುಗಳಿಗೆ 'ಪ್ರಕಟಿಸು ಇಲ್ಲವೆ ನಾಶವಾಗು' [Publish or Perish] ಎಂಬ ಗಂಭೀರವಾದ ಎಚ್ಚರಿಕೆ ಕೊಡುತ್ತಾರಂತೆ. ನಮ್ಮ ದೇಶದಲ್ಲಿ 'ಪ್ರಕಟಿಸದಿರು ಆದರೂ ಅಭಿವರ್ಧಿಸು' [Don't Publish but flourish] ಎಂಬುದು ಚಾಲ್ತಿಯಲ್ಲಿದೆ. ನಮ್ಮಲ್ಲಿರುವ ಮಹತ್ವದ ಆಲೋಚನೆಗಳನ್ನು ಗೌಪ್ಯವಾಗಿಟ್ಟಿರು ವಂತವರಿಗೆ ಭಟ್ಟರು ಪ್ರೋತ್ಸಾಹ ವನ್ನು ಮಾಡಿದ್ದಾರೆ. ಲೇಖಕರೂ ಕೂಡಾ ಭಟ್ಟರ ಜತೆ ಸಂಶೋಧನೆಗೆ ಹೋಗಿದ್ದಾಗ, ಭಟ್ಟರಿಗೆ ಯಾರಿಗೂ ಕಾಣದಂತಹ ವಿಷಯ ಗೋಚರವಾಗುತ್ತದೆ. ಕಲ್ಲು ಕೂಡಾ ಭಟ್ಟರ ಜತೆ ಮಾತನಾಡುತ್ತದೆ ಎಂದಿದ್ದಾರೆ. ಕಾರಣ ಬಸರೂರಿನ ಮುರುಕು ಬಸದಿಯ ಗುಡ್ಡದ ತುದಿಯಲ್ಲಿ ತುಂಬಾ ಎತ್ತರವಾಗಿ ಮುಳಿಹುಲ್ಲು ಬೆಳೆದಿತ್ತು. ಆ ಹುಲ್ಲಿನ ನಡುವೆ ಭಟ್ಟರು ಬೇಗಬೇಗನೆ ಹೋಗಿ ಅಲ್ಲೇ ಇದ್ದ ಒಂದು ಒಡೆದ ಮೂರ್ತಿಯ ಬಳಿ ತಲುಪಿಯೇ ಬಿಟ್ಟರು. ಇಂತಹ ಒಂದೊಂದು ಕಲ್ಲಿನ ಬಗ್ಗೆ ಇತಿಹಾಸವನ್ನು ಬರೆಯಲು ಸಮರ್ಥರು ಎಂದು ತಿಳಿಸಿದ್ದಾರೆ. ಚಿಕ್ಕಚಿಕ್ಕ ಪ್ರದೇಶದಲ್ಲಿ ಹತ್ತು ಹನ್ನೆರಡು ಲಕ್ಷ ಜನಸಮುದಾಯದ ಪ್ರಾಚೀನ ತುಳು ಇತಿಹಾಸ, ಭಾಷೆ, ಸಂಸ್ಕೃತಿ, ನುಡಿಕಟ್ಟು, ಕಟ್ಟುಕಟ್ಟಳೆಗಳು ಹಾಗೂ ಜೀವನಮಾರ್ಗವನ್ನು ಇವರ ಉದ್ಗ್ರಂಥದಲ್ಲಿ ಇದೆ ಎಂದು ತಿಳಿಸಿದ್ದಾರೆ.

ಮತ್ತೊಬ್ಬ ಸಮಕಾಲೀನ ಇತಿಹಾಸಕಾರರಾದ ಎಂ. ಎಂ. ಪ್ರಭು[21], "ಡಾ। ಪಿ. ಗುರುರಾಜರು– ಕೆಲವು ನೆನಪುಗಳು" ಎಂಬ ಅಪ್ರಕಟಿತ ಗ್ರಂಥದಲ್ಲಿ ಭಟ್ಟರ ಅಧ್ಯಯನದ ಮೇಲೆ ಹೇಳುತ್ತಾರೆ. ಇವರು ಸ್ಥಳಕ್ಕಾಗಿ ಭೇಟಿ ಕೊಟ್ಟು ಅಲ್ಲಿ ತೆಗೆದಂತಹ ಛಾಯಾಚಿತ್ರಗಳನ್ನು ತಮ್ಮ ಗ್ರಂಥವಾದ Antiquities of South Canara, ಪುಸ್ತಕದಲ್ಲಿ ಬಿಂಬಿಸಿದ್ದಾರೆ. ಮತ್ತು Studies in Tuluva History and Cultureನ್ನು ಕೂಡಾ ಇಂತಹ ಪ್ರದೇಶಗಳ ಬಗ್ಗೆ ಮಾಹಿತಿಯನ್ನು ಒದಗಿಸಿಕೊಡುತ್ತದೆ. ಇವೆಲ್ಲದರಿಂದಾಗಿ ನಮಗೆ ತಿಳಿಯುವುದೆಂದರೆ, ಇತಿಹಾಸ ರಚನೆಯಲ್ಲಿ ಎಲ್ಲದರ ಪ್ರಾಮುಖ್ಯ ಗಣನೀಯವಾಗಿದೆ. ಯಾವುದೇ ಇತಿಹಾಸ ರಚನೆಗೆ ಸಿಕ್ಕಿದ ಪುರಾತನವಸ್ತುಗಳೇ ಸಾಕ್ಷಿಯಾಗಿವೆ.

ಮಾಲತಿ ಕೆ. ಮೂರ್ತಿಯವರು[22] ಭಟ್ಟರ ಸಂಶೋಧನ ಲೇಖನಗಳ ಬಗ್ಗೆ ಅವರ ಗ್ರಂಥಗಳ ಬಗ್ಗೆ ಹಾಡಿಹೊಗಳಿದ್ದಾರೆ. ಭಟ್ಟರು ತಮ್ಮ ಶೋಧನೆಯನ್ನು ಉತ್ತರ ಕರ್ನಾಟಕದಿಂದ ಕಾಸರಗೋಡಿನವರೆಗೆ, ಸಹ್ಯಾದ್ರಿಯಿಂದ ಪಡುಗಡಲ ತಡಿಯವರೆಗೆ ಅವರು ಸಂದರ್ಶಿಸದ ಸ್ಥಳವಿಲ್ಲ. ಕಾಲಿಡದ ದೇವಸ್ಥಾನಗಳಿಲ್ಲ, ಪ್ರತಿಯೊಂದು ಹಳ್ಳಿಹಳ್ಳಿಗೂ ಭೇಟಿ ನೀಡಿ ಸ್ಥಳೀಯರ ಸಹಾಯ ಪಡೆದುಕೊಂಡು ಶೋಧನೆಯನ್ನು ಮಾಡಿದ್ದಾರೆ. ಕೆಲವು ಶಾಸನದ ಕಲ್ಲುಗಳು ಅದರ ಪ್ರಾಮುಖ್ಯವನ್ನು ತಿಳಿದಿದ್ದರು. ಅವುಗಳಲ್ಲಿ ಹಲವು ಬಚ್ಚಲಿನ ಕಲ್ಲುಗಳಾಗಿದ್ದವು. ಅನಂತರ ಪ್ರತಿಯೊಂದು ಕಲ್ಲುಗಳ ನಡುವೆಯೂ ಒಡನಾಟವನ್ನು ಬೆಳೆಸಿಕೊಂಡಿದ್ದ ಭಟ್ಟರಿಗೆ ಇವೆಲ್ಲವೂ ಕೂಡ ಇತಿಹಾಸದ ಪುನಾರಚನೆಯಲ್ಲಿ ಸಹಕಾರಿ ಯಾಗಿವೆ. ಇದರಿಂದಾಗಿ ತಮ್ಮ ಗ್ರಂಥಗಳಲ್ಲಿ ಛಾಯಾಚಿತ್ರಗಳನ್ನು ಕೂಡ ಪ್ರಸ್ತುತಪಡಿಸಿದ್ದಾರೆ. ಇದರಿಂದಾಗಿ ಇತಿಹಾಸದ ಬಗ್ಗೆ ಮೊದಲಿದ್ದ ಕಲ್ಪನೆ ಹೋಗಿ ಇವರು ಶಾಸನಗಳ ಆಧಾರದ ಮೇಲೆ ಇತಿಹಾಸದ ರಚನೆಯಿಂದಾಗಿ ಗ್ರಂಥಗಳು ಪ್ರಕಟಗೊಂಡಿವೆ.

ಭಟ್ಟರ ಸ್ಥಳನಾಮದಿಂದಾಗಿ ಸಮಾಜಶಾಸ್ತ್ರೀಯ ಅಧ್ಯಯನಕ್ಕೂ ಪೂರಕವಾಗಿವೆ. ಆದರೆ ಎಲ್ಲೂ ಕೂಡಾ ಅವರು ತಮ್ಮ ತೀರ್ಮಾನವೇ ಅಂತಿಮ ಎಂದು ತಿಳಿಸಿಲ್ಲ. ಇದು ಕೇವಲ ಸಾಂದರ್ಭಿಕ ಮಾತ್ರ. ಆದರೆ ಇನ್ನೂ ಹೆಚ್ಚಿನ ಉತ್ಖನನವಾದರೆ, ಇತಿಹಾಸದ ರೂಪರೇಖ ಗಳು ಬದಲಾವಣೆ ಹೊಂದುತ್ತವೆ. ಭಟ್ಟರ Antiquity of South Kanara (1969) ಎಂಬ ಕೃತಿಯನ್ನು ರಚಿಸುವಾಗ ಇಷ್ಟರ ತನಕ ತಾವು ಅಧ್ಯಯನ ನಡೆಸಿದಂತಹ ತಾಮ್ರಶಾಸನಗಳು ಮತ್ತು ಶಿಲಾಶಾಸನಗಳ ಆಧಾರದ ಮೇಲೆ ಈ ಗ್ರಂಥ ಹೊರಹೊಮ್ಮಿದೆ. ಇದರಲ್ಲಿ ಹೊಸ ಸಂಶೋಧನೆಗಳ ಬೆಳಕಿನಲ್ಲಿ ತನ್ನ ತೀರ್ಮಾನಗಳ ಪರಿಷ್ಕರಣೆಗೆ ಅವಕಾಶವಿದೆಯೆಂದು ಅವರು ಬರೆದುಕೊಂಡಿದ್ದರು. ಪ್ರಾದೇಶಿಕ ಇತಿಹಾಸವನ್ನು ಬಿಂಬಿಸುವ ಸಮಗ್ರ ಕೃತಿಯಾದ Studies in Tuluva History and Cultureನ್ನು ಪ್ರಾಗೈತಿಹಾಸಿಕ ನೆಲೆಗಳ ಮಹತ್ವವನ್ನು ಕೂಡಾ ಕಂಡುಕೊಂಡಿದ್ದಾರೆ.

ಸಂದರ್ಭಸೂಚಿ :

1. *ರಿವ್ಯೂಸ್ ಆಂಡ್ ಒಪೀನಿಯನ್ಸ್ ಆನ್ ತುಳುವ ಹಿಸ್ಟರಿ ಆಂಡ್ ಕಲ್ಚರ್*, 'ದ ಜರ್ನಲ್ ಆಫ್ ದ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್', ವಾಲ್ಯೂಮ್ 2, 1982.
2. ಕೆ. ನರಸಿಂಹ ಕೆದ್ಲಾಯ (ಅಪ್ರಕಟಿತ ಲೇಖನ), *ಡಾ। ಪಿ. ಗುರುರಾಜ ಭಟ್ಟರ ನೆನಪಿನಂಗಳದಿಂದ.*
3. ಅದೇ.
4. ಕೆ. ನಾರಾಯಣ ಶೆಟ್ಟಿ (ಅಪ್ರಕಟಿತ ಲೇಖನ), *ನಾನು ಕಂಡಂತೆ ಡಾ। ಗುರುರಾಜ ಭಟ್ಟರು.*
